# ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 10 ಸಂಚಿಕೆ 29–33 ಆಗಸ್ಟ್ 14, 1988 ಬೆಲೆ 1-00 ರೂ.


ಒಳಗಿನ ಪುಟಗಳಲ್ಲಿ



### ಸೆಪ್ಟೆಂಬರ್ 1 ರಿಂದ 15 ರ ರೈತ-ಕೃಷಿ ಕೂಲಿಗಾರರ

# ರಾಷ್ಟ್ರವ್ಯಾಪಿ ಜೈಲ್ ಭರೋ ಚಳುವಳಿ ಯಶಸ್ವಿಗೊಳಿಸಿರಿ

ಸ್ವಾತಂತ್ರ್ಯ ಭಾರತದ ನಲವತ್ತು ವರ್ಷಗಳ ನಂತರವೂ ಗ್ರಾಮೀಣ ಭಾರತ ಅತ್ಯಂತ ಕಡೆಗಣಿಸಲ್ಪಟ್ಟಿದೆ. ದೇಶಕ್ಕೆ ಅನ್ನ ನೀಡುವ ರೈತ-ಕೃಷಿಕೂಲಿಕಾರರು, ಅವಮಾನದ ಹಾಗೂ ಅಸಹನೀಯವಾದ ಜೀವನವನ್ನೇ ಸಾಗಿಸಬೇಕಾದ ಪರಿಸ್ಥಿತಿ ಮುಂದುವರೆದಿದೆ.

ರೈತರ-ಕೃಷಿ ಕೂಲಿಕಾರರ-ದಲಿತರ ಹೆಸರಲ್ಲಿ ಏಳು ಲೋಕಸಭಾ ಚುನಾವಣೆಗಳು ಮುಗಿದು ಎಂಟನೇ ಲೋಕಸಭಾ ಚುನಾವಣೆ ಬರಲಿದೆ. ಪಂಚವಾರ್ಷಿಕ ಯೋಜನೆಗಳು ಒಂದರ ನಂತರ ಮತ್ತೊಂದು ಮುಗಿಯುತ್ತಾ ಹೋಗುತ್ತಿವೆ. ಆದರೆ ರೈತರ ಬೆಳೆಗೆ ಬೆಂಬಲಿತ ಬೆಲೆಯನ್ನು ನಿಗದಿಮಾಡಲಿಲ್ಲ. ಬದಲಿ ರೈತರು ಕೃಷಿಗೆ ಬಳಸುವ ಸಲಕರಣೆ, ಗೊಬ್ಬರ, ಕ್ರಿಮಿನಾಶಕ, ದಿನಬಳಕೆ ವಸ್ತುಗಳ ಬೆಲೆಗಳನ್ನು ಪ್ರತಿವರ್ಷವೂ ಹೆಚ್ಚಿಸುತ್ತಾ ಹೋಗಿ ಇಂದು ರೈತ-ಕೃಷಿಕೂಲಿಕಾರರು ಅವುಗಳನ್ನು ಖರೀದಿಸಲಾರದಂತಾಗಿದೆ.

ದುಡಿಯುವ ಜನತೆ ನಲ್ವತ್ತು ವರ್ಷದಿಂದಪಡೆದ ಅನುಭವದಆಧಾರದಲ್ಲಿ ನೋಡಬೇಕಾಗಿದೆ. ನಿರಂತರವಾಗಿ ಅಧಿಕಾರದಲ್ಲಿದ್ದ ಬಂಡವಾಳಶಾಹಿ–ಭೂಮಾಲೀಕ ನೀತಿಯಿಂದಾಗಿ ಭೂಮಾಲೀಕರು, ಗುತ್ತೇದಾರಿ ವ್ಯಾಪಾರಿ, ಕೈಗಾರಿಕಾ ಮಾಲೀಕರು ಹೆಚ್ಚೆಚ್ಚು ಶ್ರೀಮಂತರಾಗುತ್ತಿದ್ದಾರೆ. ದುಡಿಯುವ ಜನತೆ ಹೆಚ್ಚೆಚ್ಚು ಬಡವರಾಗುತ್ತಿದ್ದಾರೆ.

ಕಾಂಗ್ರೆಸ್ಸಿನ ಕೇಂದ್ರ ಸರಕಾರದ ವಿದೇಶಿ ನೀತಿಯಿಂದಾಗಿ ಬಹುರಾಷ್ಟ್ರೀಯ ಕಂಪನಿಗಳ, ಜಾಗತಿಕ ಬ್ಯಾಂಕಿನ ಹಿಡಿತ ಹೆಚ್ಚಾಗುತ್ತಿದೆ. ಆದ್ದರಿಂದ ಅವರಿಂದ ಕೊಳ್ಳುವ ವಸ್ತುಗಳನ್ನು ದುಬಾರಿಯಲ್ಲಿ ಅವರಿಗೆ ಬೇಕಾಗುವ ಕಚ್ಚಾವಸ್ತುಗಳನ್ನು ಅತೀ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಬೇಕಾಗುತ್ತದೆ. ಈ ಭಾರವನ್ನು ದುಡಿಯುವ ರೈತಾಪಿ ಜನತೆಯ ಮೇಲೆ ಹೇರಲಾಗುತ್ತಿದೆ.

ದೇಶದಲ್ಲಿ ಈ ರೈತ ಕೃಷಿ-ಕೂಲಿಕಾರ ದುಡಿಯುವ ಜನ ವಿರೋಧಿ ನೀತಿಯನ್ನು ಬದಲಾವಣೆ ಮಾಡಿ ಇದರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಬದಲಿ ಧೋರಣೆ ಬರುವುದೊಂದೆ ಉಳಿದ ದಾರಿಯಾಗಿದೆ.

ಈ ಹಿನ್ನೆಲೆಯಲ್ಲಿ ರಾಷ್ಟ್ರದ ಎಡ ಪಕ್ಷಗಳು ಬೆಂಬಲಿಸುವ ರೈತ-ಕೃಷಿ ಕೂಲಿಗಾರ ಸಂಘಗಳು ಜಂಟಿಯಾಗಿ ಕಿಸಾನ್ ಮಜ್ದೂರ್ ಜಾತಾವನ್ನು ರಾಷ್ಟ್ರವ್ಯಾಪಿ ನಡೆಸಿದರು. ಕೊನೆಯಲ್ಲಿ ನವದೆಹಲಿಯಲ್ಲಿ 10 ಲಕ್ಷಕ್ಕೂ ಹೆಚ್ಚು ಜನರ ಪ್ರದರ್ಶನವನ್ನು ಡಿಸೆಂಬರ್ 9 ರಂದು ನಡೆಸಲಾಯಿತು. ಅನಂತರ ಇತರ ಜಾತ್ಯಾತೀತ ಪಕ್ಷಗಳ ಸಹಾಯದೊಂದಿಗೆ ಭಾರತ್ ಬಂದ್ ನಡೆಸಲಾಯಿತು.

ಈ ಚಳುವಳಿಯ ಮುಂದುವರಿಕೆಯಾಗಿ 13 ರಾಷ್ಟ್ರದ ಪ್ರಶ್ನೆಗಳನ್ನು ಮುಂದಿಟ್ಟು ಸೆಪ್ಟೆಂಬರ್ 1 ರಿಂದ 15ರ ವರೆಗೆ ರಾಷ್ಟ್ರಾದ್ಯಂತ ರೈತ ಕೃಷಿ ಕೂಲಿಗಾರರು ಜೈಲಿಗೆ ಹೋಗುವ ಮುಖಾಂತರ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಬೇಕು.

ಈ ಹಿಂದೆ ರಾಜ್ಯದಲ್ಲಿ ಇರುವ ಎಡ ಪಕ್ಷಗಳೂ ಬೆಂಬಲಿಸುವ ರೈತ—ಕೃಷಿ ಕೂಲಿಗಾರ ಸಂಘಟನೆಗಳು ಪ್ರದರ್ಶನ ಚಳುವಳಿ ಮಾಡುತ್ತಲೇ ಬಂದಿವೆ. ರಾಜ್ಯದ ಅಧಿಕಾರಾವಧಿಯಲ್ಲಿ ಬರುವ ಬೇಡಿಕೆಗಳನ್ನು ಸರ್ಕಾರಕ್ಕೆ ಒತ್ತಾಯಿಸುತ್ತಿದೆ. ಜೊತೆಗೆ ರಾಷ್ಟ್ರೀಯ ಪರ್ಯಾಯ ರೂಪಿಸಲು ಅನುಕೂಲವಾಗುವಂತೆ ಈ ಚಳುವಳಿಯನ್ನು ಯಶಸ್ವಿಗೊಳಿಸಲೆಂದು ವಿನಂತಿ.

ಈ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 1 ರಿಂದ 3 ರ ವರೆಗೆ ತಹಸೀಲ್ದಾರ್ ಹಾಗೂ ಜಿಲ್ಲಾಧಿಕಾರಿಯವರ ಮುಂದೆ ಧರಣಿ ನಡೆಸಲು ಕರೆ.

ಸೆಪ್ಟಂಬರ್ 5 ರಿಂದ 10 ರವರೆಗೆ ಸರ್ಕಾರಿ ಕಛೇರಿಗಳಲ್ಲಿ ಪಿಕೆಟಿಂಗ್ ಮಾಡುವ ಮುಖಾಂತರ ರಸ್ತೆ ರೂಪು ಮಾಡುವುದರ ಮುಖಾಂತರ, ರೈತರು ಸಾಗುವಳಿ ಮಾಡಿದ ಭೂಮಿಯಲ್ಲಿ ಅರಣ್ಯ ಇಲಾಖೆ ಗಿಡ ನೆಟ್ಟಿದ್ದರೆ ಕಿತ್ತೆಸೆಯುವ ಮುಖಾಂತರ ಹೆಚ್ಚಿನ ಸಂಖ್ಯೆಯಲ್ಲಿ ರೈತ-ಕೂಲಿಗಾರರು ಹೋಗಲು ಕರೆ ಕೊಡಲಾಗುತ್ತಿದೆ.

1. ಭೂಮಿ ಪ್ರಶ್ನೆ :–
ಸರ್ಕಾರ ಯಾವುದೇ ಇಲಾಖೆಗೆ ಸೇರಿದ


(8ನೇ ಪುಟ ನೋಡಿ)


### ಸೂಚನೆ

ಕಂಪ್ಯೂಟರ್ ಬಳಸಿ ಪತ್ರಿಕೆ ಹೊರತರುವ ಪ್ರಯತ್ನದಲ್ಲಿ ಉಂಟಾದ ತೊಡಕು ಹಾಗೂ ಮುದ್ರಣಾಲಯದ ತೊಂದರೆಯಿಂದಾಗಿ ಕೆಲ ಸಂಚಿಕೆ ಪ್ರಕಟಿಸಲಾಗಲಿಲ್ಲ. ಇದಕ್ಕಾಗಿ ಓದುಗರಲ್ಲಿ ಹಾಗೂ ಏಜೆನ್ಸಿದಾರರಲ್ಲಿ ಕ್ಷಮೆ ಕೋರುತ್ತೇವೆ. ಓದುಗರಿಗೆ ಪತ್ರಿಕೆ ತಲುಪದಿದ್ದರೆ ಹಾಗೂ ಏಜೆನ್ಸಿದಾರರ ಲೆಕ್ಕದಲ್ಲಿ ವ್ಯತ್ಯಾಸಗಳಿದ್ದರೆ ದಯವಿಟ್ಟು ಕೂಡಲೇ ಬರೆಯಿರಿ. ಬಾಕಿ ಇರುವ ಎಲ್ಲಾ ಏಜೆನ್ಸಿದಾರರು ಹಣ ಪಾವತಿ ಮಾಡಿ ಸಹಕರಿಸಬೇಕೆಂದು ವಿನಂತಿಸುತ್ತೇವೆ.

—ವ್ಯವಸ್ಥಾಪಕ ಮಂಡಳಿ

# ಡಾರ್ಜಿಲಿಂಗ್ ಗುಡ್ಡಗಾಡು ಮಂಡಳಿ : ಒಪ್ಪಂದಕ್ಕೆ ರಂಗ ಸಿದ್ಧ

ಕಳೆದ 28 ತಿಂಗಳಿಂದ ಪಶ್ಚಿಮ ಬಂಗಾಳದ ಉತ್ತರ ಭಾಗದಲ್ಲಿ ಸಾಲು-ಸಾಲು ಕೊಲೆಗಳು, ಶಿರಚ್ಛೇದನ ಮುಂತಾದ ಅಮಾನುಷ ಹತ್ಯೆಗಳಿಂದ ಜನರಲ್ಲಿ ತೀವ್ರ ಆತಂಕ ಮೂಡಿಸಿದ್ದು ಪಂಜಾಬಿನಲ್ಲಿನ ಖಾಲಿಸ್ತಾನೀ ಭಯೋತ್ಪಾದಕತೆಗೆ ಪೂರಕ ಶಕ್ತಿಯಂತೆ ದೇಶದ ಐಕ್ಯತೆಗೆ ಬೆದರಿಕೆ ಹಾಕಿದ್ದ ಗೂರ್ಖಾಲ್ಯಾಂಡ್ ಆಂದೋಲನವನ್ನು ಅದರ ಮುಖಂಡ ಸುಭಾಷ್ ಘೀಸಿಂಗ್ ಹಿಂತೆಗೆದು ಕೊಂಡಿದ್ದಾರೆ. ಅವರ ಈ ಧೀರ ಕ್ರಮದ ಫಲವಾಗಿ ಜುಲೈ 25 ರಂದು ಹಾಗೂ ಆಗಸ್ಟ್ 5 ರಂದು ದೆಹಲಿಯಲ್ಲಿ ನಡೆದ ತ್ರಿಪಕ್ಷೀಯ ಸಭೆಗಳ ನಂತರ ಈ ಸಮಸ್ಯೆ ಅಂತಿಮ ಇತ್ಯರ್ಥದ ಘಟ್ಟ ತಲುಪಿದೆ.

ಜುಲೈ 25 ರಂದು ಕೇಂದ್ರ ಗೃಹಮಂತ್ರಿಗಳ ನಿವಾಸದಲ್ಲಿ ನಡೆದ ಸಭೆಯಲ್ಲಿ ಗುಡ್ಡಗಾಡು ಮಂಡಳಿ ರಚನೆ ಬಗ್ಗೆ ಒಪ್ಪಂದಕ್ಕೆ ಬರಲಾಯಿತು. ಸಮಸ್ಯೆಯ ಶೀಘ್ರ ಇತ್ಯರ್ಥಕ್ಕೆ ಅನುಕೂಲವಾಗಲಿ ಎಂಬಉದ್ದೇಶದಿಂದ ಇದನ್ನು "ಗೂರ್ಖಾ ಗುಡ್ಡಗಾಡು ಅಭಿವೃದ್ಧಿ ಮಂಡಳಿ" ಎಂದು ಹೆಸರಿಸಲು ಪಶ್ಚಿಮ ಬಂಗಾಳ ಸರ್ಕಾರ ಒಪ್ಪಿತು. ಜಿ.ಎನ್.ಎಲ್.ಎಫ್. ಮಧ್ಯಾವಧಿ ತಾತ್ಕಾಲಿಕ ಮಂಡಳಿ ರಚಿಸಬೇಕೆಂಬ ತನ್ನ ಒತ್ತಾಯವನ್ನು ಹಿಂತೆಗೆದು ಕೊಂಡಿತು.

ಈ ಸ್ವಾಯತ್ತ ಮಂಡಳಿಯಲ್ಲಿ 42 ಸದಸ್ಯರಿರುತ್ತಾರೆ. ಇವರಲ್ಲಿ 28 ಚುನಾಯಿತ ಹಾಗೂ 14 ರಾಜ್ಯ ಸರ್ಕಾರದಿಂದ ನೇಮಕ ಸದಸ್ಯರಿರಬಹುದು. ಇದಕ್ಕೆ ನಗರಸಭೆ ಅಥವಾ ಪಂಚಾಯತುಗಳಿಂದ ಹೆಚ್ಚು ಅಧಿಕಾರ ಹಾಗೂ ಸ್ವಾಯತ್ತತೆ ಇರುತ್ತದೆ. ಮಾಧ್ಯಮಿಕ ಶಿಕ್ಷಣ ಮತ್ತು ಸಾರ್ವಜನಿಕ ಆರೋಗ್ಯ ಮುಂತಾದವು ಈ ಮಂಡಳಿಯ ಅಧಿಕಾರ ವ್ಯಾಪ್ತಿಗೆ ಸೇರುತ್ತದೆ.

ಈ ಸಭೆಯಲ್ಲಿ ಜ್ಯೋತಿಬಸು, ಘೀಸಿಂಗ್ ಹಾಗೂ ಬೂಟಾಸಿಂಗ್‌ರವರಲ್ಲದೆ ಈ ಮಾತುಕತೆಗಳಲ್ಲಿ ಮಧ್ಯಸ್ಥಿಕೆ ವಹಿಸುತ್ತಾ ಬಂದಿದ್ದ ಇಂದರ್‌ಜಿತ್ ಕೇಂದ್ರ ಗೃಹಖಾತೆ ಕಾರ್ಯದರ್ಶಿ ಸಿ.ಜಿ. ಸೋಮಯ್ಯ, ಮತ್ತೊಬ್ಬ ಅಧಿಕಾರಿ ಎ.ಕೆ. ಜೈನ್ ಹಾಗೂ ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಸದಸ್ಯ ಕಾ|| ಸುರ್ಜಿತ್ ಕೂಡಾ ಹಾಜರಿದ್ದರು.

ಆಗಸ್ಟ್ 5ರ ಸಭೆಯಲ್ಲಿ ಈ ಮಂಡಳಿಯ ಭೌಗೋಳಿಕ ವ್ಯಾಪ್ತಿಯ ಬಗ್ಗೆ ಪಶ್ಚಿಮ ಬಂಗಾಳ ಸರ್ಕಾರದ ಪರ್ಯಾಯ ಪ್ರಸ್ತಾಪವನ್ನು ಘೀಸಿಂಗ್ ಒಪ್ಪಿಕೊಂಡರು. ಈ ಪ್ರಕಾರ ಡಾರ್ಜಿಲಿಂಗ್ ಜಿಲ್ಲೆಯ ಮೂರು ಸಬ್‌ಡಿವಿಜನ್‌ಗಳಾದ ಡಾರ್ಜಿಲಿಂಗ್ ಸದರ್, ಕಾಲಿಂಪಾಂಗ್ ಹಾಗೂ ಕರ್ಸಿಯಂಗ್ ಮಾತ್ರವಲ್ಲದೆ ಕರ್ಸಿಯಾಂಗ್‌ನ ಬೆಟ್ಟದ ಬುಡದಲ್ಲಿರುವ ನೇಪಾಳ ಭಾಷೆಯ ಜನಬಾಹುಳ್ಯವಿರುವ ಪ್ರದೇಶಗಳು ಈ ಉದ್ದೇಶಿತ ಸ್ವಾಯತ್ತ ಮಂಡಳಿಯ ವ್ಯಾಪ್ತಿಗೆ ಸೇರಲಿವೆ. ಪಶ್ಚಿಮ ಬಂಗಾಳ ಮಂತ್ರಿಮಂಡಲ ತುರ್ತು ಸಭೆ ನಡೆಸಿ ಈ ಸಂಬಂಧ ಪಟ್ಟ ಮಸೂದೆಗೆ ಅಂತಿಮ ರೂಪ ಕೊಟ್ಟ ನಂತರ ಒಪ್ಪಂದವೊಂದಕ್ಕೆ ಸಹಿಹಾಕಲಾಗುವುದು ಎಂದು ತಿಳಿದುಬಂದಿದೆ.

ಹೀಗೆ ಸಮಸ್ಯೆಯ ಪರಿಹಾರದತ್ತ ಸಾಗಲು ಆಂದೋಲನವನ್ನು ವಾಪಾಸು ಪಡೆದ ಸುಭಾಷ್ ಘೀಸಿಂಗ್ ಹಾಗೂ ಅವರ ಸಹಯೋಗಿಗಳ ಕ್ರಮವನ್ನು ಭಾರತೀಯ ಜನತೆ ಅಭಿನಂದಿಸುತ್ತಾರೆ.

ಎಂದು ಹೇಳಿರುವ ಸಿ. ಪಿ. ಐ. (ಎಂ) ಕೇಂದ್ರ ಸಮಿತಿ ಪತ್ರಿಕೆ "ಪೀಪಲ್ಸ್ ಡೆಮಾಕ್ರಸಿ'' ಅವರು ಉಗ್ರಗಾಮಿಗಳ ಒತ್ತಡಕ್ಕೆ ತಲೆಬಾಗದೆ ಈ ವಾಸ್ತವವಾಗಿ ಮತ್ತು ಪ್ರಜಾಪ್ರಭುತ್ವವಾದಿ ನಿಲುವನ್ನು ಮುಂದುವರಿಸಿದರೆ ಅದು ಗೂರ್ಖಾ ಜನತೆಯ ಅಭಿವೃದ್ಧಿಗೆ ಸಲ್ಲಿಸಿದ ಸೇವೆಯಾಗುತ್ತದೆ, ಅಷ್ಟೇ ಅಲ್ಲ ದೇಶದ ಐಕ್ಯತೆಗೆ ಕಾಣಿಕೆ ನೀಡಿದಂತಾಗುತ್ತದೆ ಎಂದು ಆಶಿಸಿದೆ.

ಸಮಸ್ಯೆಯ ಇತ್ಯರ್ಥದ ಪ್ರಯತ್ನದಲ್ಲಿ ಜ್ಯೋತಿಬಸು ಮತ್ತು ಸಿ.ಪಿ.ಐ. (ಎಂ) ನೇತೃತ್ವದ ಎಡರಂಗ ಸರ್ಕಾರದ ನಿಲುವು ಮತ್ತು ಅತ್ಯಂತ ಉದ್ರೇಕಕಾರಿ ಪರಿಸ್ಥಿತಿಯಲ್ಲೂ ಅತ್ಯಂತ ಸಂಯಮದಿಂದ ಸ್ಥೈರ್ಯದಿಂದ ವರ್ತಿಸಿದ ರೀತಿ ದೇಶಾದ್ಯಂತ ಪ್ರಶಂಸೆ ಗಳಿಸಿದೆ. ಗೂರ್ಖಾಲ್ಯಾಂಡ್ ಆಂದೋಲನಕಾರರು ರಾಜ್ಯ ಸರ್ಕಾರವನ್ನು ದೂಷಿಸುತ್ತಾ ಕೇಂದ್ರ ಸರ್ಕಾರವನ್ನು ಹೊಗಳುತ್ತಾ ಬಂಗಾಳಿ ವಿರೋಧಿ ಭಾವನೆಗಳನ್ನು ಎಬ್ಬಿಸಿ ಹಿಂಸಾಕಾಂಡ ನಡೆಸಲು ಯತ್ನಿಸಿದರು. ಆದ್ದರಿಂದ ರಾಜ್ಯ ಸರ್ಕಾರ ಅತ್ಯಂತ ಜಾಗರೂಕತೆಯಿಂದ ಪರಿಸ್ಥಿತಿಯನ್ನು ಎದುರಿಸಬೇಕಾಗಿತ್ತು. ಪೋಲೀಸ್ ಸಿಬ್ಬಂದಿ ಹಾಗೂ ಅಧಿಕಾರಿಗಳು ಅತ್ಯಂತ ಜವಾಬ್ದಾರಿಯಿಂದ, ಸಂಯಮದಿಂದ ವರ್ತಿಸುವಂತೆ ನೋಡಿಕೊಳ್ಳಬೇಕಾಗಿತ್ತು. ಎಡರಂಗದ ದಕ್ಷ ಹಾಗೂ ಸಂಯಮಪೂರ್ಣ ವರ್ತನೆಯಿಂದಾಗಿ ಈಸಮಸ್ಯೆಗೆ ಗೂರ್ಖಾಗಳು ಹಾಗೂ ಬಂಗಾಳಿಗಳ ನಡುವಿನ ತಿಕ್ಕಾಟದ ಪ್ರಶ್ನೆ ಎಂಬ ತಪ್ಪು ತಿರುವು ಕೊಡುವ ಆಂದೋಲನಕಾರರ ಪ್ರಯತ್ನ ವಿಫಲವಾಯಿತು.

ಕಾಂಗ್ರೆಸ್ (ಐ) ಆಡಳಿತವಿರುವ ತ್ರಿಪುರಾದಲ್ಲಿ ಅಸ್ಸಾಂ ರೈಫಲ್ಸ್‌ನ ಅತ್ಯಾಚಾರೀ ವರ್ತನೆ ಹಾಗೂ ಡಾರ್ಜಿಲಿಂಗ್‌ನಲ್ಲಿ ಎಡರಂಗ ಸರ್ಕಾರದ ಉಸ್ತುವಾರಿಯಲ್ಲಿ ಕೇಂದ್ರ ಮೀಸಲು ಪಡೆ ಮತ್ತು ಗಡಿ ಭದ್ರತಾ ಪಡೆಗಳ ಸಂಯಮಪೂರ್ಣ ನಡತೆಯ ನಡುವಿನ ತೀವ್ರ ಅಂತರ ಎಲ್ಲರಿಗೂ ಸ್ಪಷ್ಟವಾಗಿ ಕಾಣುತ್ತದೆ.

ಇಷ್ಟೇ ಅಲ್ಲ, ಡಾರ್ಜಿಲಿಂಗ್‌ನ ಪ್ರಜಾ


(8ನೇ ಪುಟ ನೋಡಿ)

ಮಲಯಾಳಂ ಸಿನಿಮಾದ ಚಿನ್ನದ ಹಬ್ಬ

# ರಾಷ್ಟ್ರೀಯ ಚಲನಚಿತ್ರ ನೀತಿ ಹೇಗಿರಬೇಕು?

—ಪಿ.ಗೋವಿಂದ ಪಿಳ್ಳೈ

## ರಾಷ್ಟ್ರೀಯ ಚಲನಚಿತ್ರ ನೀತಿಗೆ ಕರೆ

ಕೇರಳ ಚಲನಚಿತ್ರ ಅಭಿವೃದ್ಧಿ ನಿಗಮ (KSFDC) ಮತ್ತು ಕರ್ನಾಟಕ ಪ್ರಗತಿಪರ ಕಲಾ ಕ್ಲಬ್ (CPAC) ಜಂಟಿಯಾಗಿ ಆಗಸ್ಟ್ 4 ರಿಂದ 11 ರವರೆಗೆ ಬೆಂಗಳೂರಿನಲ್ಲಿ 'ಮಲಯಾಳಂ ಫಿಲಂನ ಚಿನ್ನದ ಹಬ್ಬ' ಸಪ್ತಾಹ ಆಚರಿಸಿದರು. ಈ ಕಾರ್ಯಕ್ರಮದ ಆಕರ್ಷಕ ಭಾಗ ಖ್ಯಾತ ಮಲಯಾಳಂ ನಿರ್ದೇಶಕರ (ಅಡೂರ್ ಗೋಪಾಲಕೃಷ್ಣ, ಭರತನ್, ಅರವಿಂದನ್) ಉತ್ತಮ ಚಿತ್ರಗಳ ಪ್ರದರ್ಶನ ಇಡೀ ವಾರ. ಇದಲ್ಲದೆ ಈ ಸಂದರ್ಭದಲ್ಲಿ "ಚಲನಚಿತ್ರ ನೀತಿ" ಬಗ್ಗೆ ವಿಚಾರ ಸಂಕಿರಣವನ್ನು ಏರ್ಪಡಿಸಲಾಯಿತು.

ವಿಚಾರ ಸಂಕಿರಣದಲ್ಲಿ (KSFDC) ಅಧ್ಯಕ್ಷ ಗೋವಿಂದಪಿಳ್ಳೈ, (KSFDC) ನಿರ್ದೇಶಕ ಖ್ಯಾತ ಕವಿ O.N.V. ಕುರುಫ್, ಪತ್ರಕರ್ತ ವಿ. ಎನ್. ಸುಬ್ಬರಾವ್ ಮತ್ತು ಸಾಹಿತಿ ಸಿನೇಮಾ ನಿರ್ದೇಶಕ ಬರಗೂರು ರಾಮಚಂದ್ರಪ್ಪ ಭಾಗವಹಿಸಿದ್ದರು. ವಿಚಾರ ಸಂಕಿರಣದ ಮುಖ್ಯ ವಿಷಯ 'ರಾಷ್ಟ್ರೀಯ ಚಲನಚಿತ್ರ ನೀತಿ' ಆಗಿತ್ತು.

ಈ ಸಂದರ್ಭದಲ್ಲಿ ಪಿ. ಗೋವಿಂದ ಪಿಳ್ಳೈಯವರು ಒಂದು ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ಡಾ॥ ಕಾರಂತ ಸಮಿತಿ ತಯಾರಿಸಿರುವ ವರದಿಯ ಆಧಾರದ ಮೇಲೆ ರಾಷ್ಟ್ರೀಯ ಚಲನಚಿತ್ರ ನೀತಿಯನ್ನು ರೂಪಿಸಬೇಕೆಂದು ಅವರ ಪ್ರಮುಖ ಒತ್ತಾಯವಾಗಿತ್ತು. ಕೇಂದ್ರ ಸರ್ಕಾರ ಫಿಲಂ ಉದ್ಯಮವನ್ನು ಉದ್ಯಮವೆಂದು ಪರಿಗಣಿಸಿ ರಾಷ್ಟ್ರೀಯ ಚಲನಚಿತ್ರ ನೀತಿಯೊಂದನ್ನು ಜಾರಿ ತರುವ ವರೆಗೆ ದೇಶದ ಚಲನಚಿತ್ರ ಕಾಳಸಂತೆಕೋರರ ಕಪಿಮುಷ್ಟಿಯಲ್ಲಿರುತ್ತದೆ. ಕಾಳಸಂತೆಕೋರರ ಕಪಿಮುಷ್ಟಿಯಲ್ಲಿ ದೇಶದ ಸಿನೇಮಾ ಕುಲಗೆಟ್ಟು ಹೋಗುತ್ತಿರುವುದನ್ನು ತಪ್ಪಿಸಲು ಕೇಂದ್ರ ಸರ್ಕಾರ ಮತ್ತು ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಸಿನೇಮಾವನ್ನು ಉದ್ಯಮವೆಂದು ಪರಿಗಣಿಸುವುದು ಒಂದೇ ದಾರಿ.

ಕೇರಳ ರಾಜ್ಯ ಸರ್ಕಾರ ಚಲನಚಿತ್ರ ನೀತಿಯನ್ನು ಅಂಗೀಕರಿಸಿದ್ದರೂ ಕೇಂದ್ರ ಸರ್ಕಾರ ಸರಿಯಾದ ನೀತಿ ಅನುಸರಿಸದೆ ಸಿನೇಮಾದ ಮೇಲೆ ರಾಜ್ಯ ಸರ್ಕಾರಗಳ ನೀತಿಯಿಂದಲೆ ಹೆಚ್ಚಿನ ಪ್ರಭಾವವಾಗುವುದಿಲ್ಲ. KSFDC ಕೇರಳದ ಪ್ರತಿಯೊಂದು ಹಳ್ಳಿಯಲ್ಲೂ ಫಿಲಂ ಸೊಸೈಟಿಯನ್ನು ಸ್ಥಾಪಿಸುವ ಯೋಜನೆ ಹಾಕಿಕೊಂಡಿದೆ ಎಂದೂ ಪಿಳ್ಳೈಯವರು ಪತ್ರಿಕಾ ಗೋಷ್ಠಿಯಲ್ಲಿ ಘೋಷಿಸಿದರು.

ಗೋವಿಂದ ಪಿಳ್ಳೈಯವರು ವಿಚಾರ ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧದ ಸಾರಾಂಶ ಈ ಕೆಳಗೆ ಪ್ರತ್ಯೇಕವಾಗಿ ಕೊಡಲಾಗಿದೆ.

ಕಲಾತ್ಮಕ ಸೃಷ್ಟಿಯ ಹಲವಾರು ರೂಪಗಳಲ್ಲಿ ಸಿನೇಮಾ ಅದರ ಹುಟ್ಟಿನಿಂದಲೂ ಸರ್ಕಾರದ ನೀತಿಗಳು ಮತ್ತು ಕೆಲಸಗಳಿಂದ ಅತ್ಯಂತ ಹೆಚ್ಚು ಪ್ರಭಾವಿತವಾಗುವ ಮಾಧ್ಯಮ. ಇದಕ್ಕೆ ಕಾರಣ ಈ ಮಾಧ್ಯಮಕ್ಕೆ ಬೇಕಾದ ಕೈಗಾರಿಕಾ ಮತ್ತು ತಂತ್ರಜ್ಞಾನದ ತಳಹದಿ. ಇದರಿಂದಾಗಿ ಸಿನೇಮಾ ಕಲಾಮಾಧ್ಯಮವಾಗಿ ರೂಪುಗೊಳ್ಳಲು ಹಲವು ದಶಕಗಳೇ ಬೇಕಾಯಿತು. ಭಾರತದಲ್ಲೂ ಉದ್ಯಮವಾಗಿ, ಕಲಾಮಾಧ್ಯಮವಾಗಿ ಸಾಕಷ್ಟು ಬೇಗನೆ ಸಿನೇಮಾ ಪ್ರವೇಶಿಸಿತು. ಮೊದಲನೆಯ ಭಾರತೀಯ ಮೂಕಿ ಸಿನೇಮಾ ತಯಾರಾಗಿ 75 ವರ್ಷಗಳು ಕಳೆದಿವೆ.

ಭಾರತ ಇಂದು 800ಕ್ಕೂ ಹೆಚ್ಚು ಕಥಾ ಚಿತ್ರಗಳು ಮತ್ತು ಸಾವಿರಕ್ಕೂ ಹೆಚ್ಚು ಇತರ ಚಿತ್ರಗಳನ್ನು ತಯಾರಿಸುತ್ತಿದ್ದು ಜಗತ್ತಿನಲ್ಲಿ ಉನ್ನತ ಸ್ಥಾನದಲ್ಲಿದೆ. ಅಂತರಾಷ್ಟ್ರೀಯ ಮನ್ನಣೆ ಪಡೆದ ನಿರ್ದೇಶಕರೂ ಬಹಳಷ್ಟು ಇದ್ದು ಗುಣಮಟ್ಟ ಸಹ ಪರವಾಗಿಲ್ಲ. ಆದರೆ ಸರ್ಕಾರದ ಚಲನಚಿತ್ರ ನೀತಿ ಅದರ ಬಗ್ಗೆ ಅದು ತೆರಿಗೆಯ ಆದಾಯ ತಂದು ಕೊಡುವ ಮೂಲವನ್ನೇ ಎಂಬಂತೆ ನೋಡುತ್ತದೆ. ಈ ಆದಾಯ ಬಿಟ್ಟರೆ ಸಿನೇಮಾ ಜೂಜಿನಂತೆ ಅನಪೇಕ್ಷಣೀಯ ಕೆಲಸ ಎಂದು ಭಾವಿಸುತ್ತದೆ. ಒಳ್ಳೆಯ ಸಿನೇಮಾಕ್ಕೆ ಉತ್ತೇಜನ ನೀಡುವ ಕೆಲಸ ತಕ್ಕ ತೀವ್ರತೆಯಿಂದ ಆಗುತ್ತಿಲ್ಲ: ಒಟ್ಟರೆ ಸಿನೇಮಾ ಯಾವುದೇ ಗೊತ್ತುಗುರಿಯಿಲ್ಲದೆ ಬೆಳೆದಿದೆ. ಸಾಕಷ್ಟು ಸಮಸ್ಯೆಗಳನ್ನು ಹೊತ್ತು ಬಿಕ್ಕಟ್ಟಿನಲ್ಲಿದೆ. ಆದರೂ ಇಂದಿಗೂ ದೇಶದ ಸರ್ಕಾರ ರಾಷ್ಟ್ರೀಯ ಚಲನಚಿತ್ರ ನೀತಿಯನ್ನು ಅಂಗೀಕರಿಸಿಲ್ಲ. ಇಂತಹ ನೀತಿಯನ್ನು ರೂಪಿಸಲು ಸರ್ಕಾರ ನೇಮಿಸಿರುವ ಸಮಿತಿಗಳಿಗೇನೂ ಕಮ್ಮಿಯಿಲ್ಲ. ಅವು ಒಳ್ಳೆಯ ವರದಿ ತಯಾರಿಸಿಲ್ಲವೆಂದೇನೂ ಇಲ್ಲ. 20ರ ದಶಕದಿಂದ ಈವರೆಗೆ ಇಂತಹ ಹಲವು ಪ್ರಯತ್ನಗಳು ನಡೆದಿವೆ. ಇವಲ್ಲಿ ಮೂರು ಗಮನಾರ್ಹ ಪ್ರಯತ್ನಗಳು 1927-28 ರಲ್ಲಿ ಸರ್ಕಾರ ನೇಮಿಸಿದ ರಂಗಾಚಾರ್ಯ ಸಮಿತಿ, 1951ರಲ್ಲಿ ಎಸ್. ಕೆ. ಪಾಟೀಲರ ನಾಯಕತ್ವದಲ್ಲಿ ನೇಮಿಸಿದ ಫಿಲಂ ವಿಚಾರಣೆ ಸಮಿತಿ ಮತ್ತು 1980ರಲ್ಲಿ ಡಾ॥ ಶಿವರಾಮ ಕಾರಂತರ ಅಧ್ಯಕ್ಷತೆಯ ಸಮಿತಿ ಈ ಸಮಿತಿಗಳು ಆಗಿನ ಸಿನೇಮಾದ ಪರಿಸ್ಥಿತಿಯನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಹಲವಾರು ಉತ್ತಮ ಸಲಹೆಗಳನ್ನು ಮಾಡಿವೆ. ಅವನ್ನು ಜಾರಿ ಮಾಡಿದ್ದರೆ ಭಾರತೀಯ ಸಿನೇಮಾ ಇಂದಿನ ದುರ್ದೆಶೆಗೆ ಬರುತ್ತಿರಲಿಲ್ಲ. 1951ರ ಪಾಟೀಲ್ ಸಮಿತಿ ಒಳ್ಳೆಯ ಸಿನೇಮಾ ತಯಾರಿಕೆಗೆ ಬೇಕಾದ ಪರಿಸ್ಥಿತಿ ನಿರ್ಮಾಣ ಮಾಡುವುದರಲ್ಲಿ ಸರ್ಕಾರದ ಜವಾಬ್ದಾರಿ ಬಗ್ಗೆ ಒತ್ತಿ ಹೇಳಿತ್ತು. ಇಂತಹ ಸರ್ಕಾರದ ನೀತಿಯ ಅಭಾವ ಸಿನೇಮಾ ಅನಪೇಕ್ಷಣೀಯ ಶಕ್ತಿಗಳ ಕೈಯಲ್ಲಿರುವುದರ ಬಗ್ಗೆ ತೀವ್ರವಾಗಿ ಗಮನ ಸೆಳೆದಿತ್ತು.

### ಸರ್ಕಾರದ ನಿರ್ಲಕ್ಷ

ಆದರೆ ಇಂದು ಹೆಚ್ಚು ಕಡಿಮೆ ನಾಲ್ಕು ದಶಕಗಳ ನಂತರ ಪರಿಸ್ಥಿತಿ ಬಹಳವೇನೂ ಬದಲಾಗಿಲ್ಲ. ಸಿನೇಮಾದ ತಂತ್ರಜ್ಞಾನ ಮತ್ತು ಕಲಾತ್ಮಕತೆಯಲ್ಲಿ ಕ್ರಾಂತಿಕಾರಕ ಮುನ್ನಡೆ ಸಾಧಿಸಿದ್ದರೂ ಈ ಪರಿಸ್ಥಿತಿ ಹಾಗೇನೆ ಇದೆ. ಭಾರತೀಯ ಸಿನೇಮಾದ ತಯಾರಿಕೆಯ ಮಾದರಿ ಮತ್ತು ಪ್ರಾದೇಶಿಕ ಚಿತ್ರಗಳ ಪ್ರಮಾಣದಲ್ಲಿ ಭಾರಿ ಬದಲಾವಣೆ ಬಂದಿದೆ. ಹಿಂದಿಗಿಂತ ಪ್ರಾದೇಶಿಕ ಭಾಷೆಗಳ ಚಿತ್ರಗಳು ಸಂಖ್ಯೆಯಲ್ಲಿ ಭಾರಿ ಪ್ರಮಾಣದಲ್ಲಿ ಏರಿದೆ. ಅದರಲ್ಲೂ ದಕ್ಷಿಣ ಭಾರತದ ಭಾಷೆಯ ಚಿತ್ರಗಳು. ದೇಶದ ಶೇಕಡಾ 4 ಜನಸಂಖ್ಯೆ ಇರುವ ಕೇರಳದ ಮಲಯಾಳಂ ಚಿತ್ರಗಳು ದೇಶದ ಶೇಕಡಾ 20ರಷ್ಟು ತಯಾರಾಗುತ್ತಿವೆ. 1970ರ ವರೆಗೆ ರಾಷ್ಟ್ರೀಯ ಪ್ರಶಸ್ತಿ ಹಿಂದಿ ಅಥವಾ ಬಂಗಾಳಿಗೆ ಸೀಮಿತವಾಗಿದ್ದು ಅದರಿಂದೀಚೆಗೆ ಕನ್ನಡ, ಮಲಯಾಳಂಗಳಲ್ಲಿ ಹೆಚ್ಚುತ್ತಿದೆ.

ಆದರೆ ಸರ್ಕಾರದನಿರ್ಲಕ್ಷ್ಯ ವಿದ್ದಾಗ್ಯೂ ಕೆಲವು ಉತ್ತಮ ಬೆಳವಣಿಗೆಯಾಗುತ್ತಿದೆ. ಡಾ॥ ಕಾರಂತ ಸಮಿತಿ ಇವುಗಳನ್ನು ಗಮನಿಸಿದೆ. ಆದರೆ ಅಷ್ಟೇ ಸಿನೇಮಾದಲ್ಲಿ ವ್ಯಾಪಾರಿ ದೃಷ್ಟಿ ಗಲ್ಲಾಗೆಟ್ಟಿಗೆ ತುಂಬಲು ಏನೂ ಮಾಡಲು ತಯಾರಿರುವ ಲಕ್ಷಣಗಳು ಇನ್ನೂ ಭಾರಿ ಪ್ರಮಾಣದಲ್ಲಿ ಹೆಚ್ಚಿವೆ. ಅಂದರೆ ಸಿನೇಮಾದ ಆರೋಗ್ಯಕರ ಬೆಳವಣಿಗೆಗೆ ಮಾರುಕಟ್ಟೆಯ ಶಕ್ತಿಗಳಿಗಾಗಲಿ ಸಿನೇಮಾ ತನ್ನ ಸಮಸ್ಯೆಗಳನ್ನು ತಾನೇ ಕಂಡುಕೊಂಡು ಪರಿಹರಿಸಿಕೊಳ್ಳಬೇಕು ಎಂಬ ಧೋರಣೆಗೆ ಶರಣು ಹೊಡೆಯಲು ಸಾಧ್ಯವಿಲ್ಲ. ಇದು ಆರ್ಥಿಕತೆಯಲ್ಲಿ ಗ್ರೆಶಾಂ ನಿಯಮ ಇದ್ದಂತೆ. ಗ್ರೆಶಾಂ ನಿಯಮ ಖೋಟಾ ನಾಣ್ಯ ಭಾರಿ ಪ್ರಮಾಣದಲ್ಲಿ ಚಲಾವಣೆಗೆ ಬಂದರೆ, ಅಸಲಿ ನಾಣ್ಯಗಳನ್ನು ಚಲಾವಣೆಯಲ್ಲಿ ಇಲ್ಲದಂತೆ ಮಾಡುತ್ತದೆ ಎಂದು ಕಲಿಸುತ್ತದೆ. ಅದೇ ರೀತಿ ವ್ಯಾಪಾರಿ ಚಿತ್ರಗಳ ಭರಾಟೆಯಲ್ಲಿ ಸತ್ಯಜೀತ್‌ಗಳು, ಮೃಣಾಲ್‌ಗಳು, ಕಾರ್ನಾಡಗಳು, ಅರವಿಂದನ್‌ಗಳು ಮುಳುಗಿ ಹೋಗುವ ಅಪಾಯವಿದೆ. ಆದ್ದರಿಂದ ತತ್‌ಕ್ಷಣ ಸುಧಾರಣೆಗಳ ಅವಶ್ಯಕತೆ ಇದೆ.

(8ನೇ ಪುಟ ನೋಡಿ)

### ಪಾಟೀಲ್ ಸಮಿತಿ ವರದಿ

(ಫಿಲಂ) ಉದ್ಯಮ ತನ್ನ ದಾರಿಯನ್ನು ತಾನೇ ಕಂಡುಕೊಳ್ಳುವಂತೆ ಬಿಟ್ಟು ಬಿಡಲಾಗಿದೆ. ಇದರಿಂದಾಗಿ ಫಿಲಂ ಉದ್ಯಮ ಹಲವು ಪರಸ್ಪರ ವೈರುಧ್ಯವುಳ್ಳ ಶಕ್ತಿಗಳ ಪ್ರಭಾವಕ್ಕೆ ಸಿಕ್ಕಿಬಿದ್ದಿದೆ. ಅಯೋಗ್ಯ ಮತ್ತು ಅಸಮರ್ಥ ಜನರ ಕಪಿಮುಷ್ಟಿಯಿಂದ ಅದನ್ನು ಬಿಡಿಸಿ, ದೂರಗಾಮಿ ದೃಷ್ಟಿಯಿರುವ ಕಲಾವಿದರ ನಿರ್ದೇಶನ ದೊರಕಿಸಿಕೊಡುವುದು ಫಿಲಂ ಉದ್ಯಮದ ದೇಶ ಕಟ್ಟುವ ಪಾತ್ರದ ದೃಷ್ಟಿಯಿಂದ ಅತ್ಯಗತ್ಯ. ಇದನ್ನು ಸರ್ಕಾರ ಅಲಕ್ಷಿಸದೆ ಮರೆತಿದೆ.

(ಎಸ್. ಕೆ. ಪಾಟೀಲ್ ಸಮಿತಿ ವರದಿಯಿಂದ-1951)

## ಡಾ॥ ಕಾರಂತ ಸಮಿತಿಯ ಪ್ರಕಾರ
### ರಾಷ್ಟ್ರೀಯ ಚಲನಚಿತ್ರ ನೀತಿಯ ಹನ್ನೆರಡು ಉದ್ದೇಶಗಳು

1. ಚಲನಚಿತ್ರ ಸಮಾಜದ ಮೇಲೆ ಹಾಕುವ ಪರಿಣಾಮ ಗಮನದಲ್ಲಿಟ್ಟುಕೊಂಡು ಅದರ ಸಾಂಸ್ಕೃತಿಕ ಗುಣಮಟ್ಟ ಉತ್ತಮಪಡಿಸುವುದು.
2. ದೇಶದ ಜನತೆಯ ದೊಡ್ಡ ಭಾಗಕ್ಕೆ ಮುಟ್ಟುವಂತೆ ಕ್ರಮ ಕೈಗೊಳ್ಳುವುದು.
3. ಸಿನೇಮಾವನ್ನು ಸಾಂಸ್ಕೃತಿಕ, ಕಲಾ ಅಭಿವ್ಯಕ್ತಿಯ, ಸಂಪರ್ಕ, ಮನರಂಜನೆ ಸಿನೆಮಾ ಸಂಪರ್ಕ, ಮತ್ತು ಜ್ಞಾನದ ಬೆಳಕು ತೋರಬಲ್ಲ ಮಧ್ಯಮವಾಗಿ ಬೆಳೆಸಲು ಮಾಡುವುದು, ಸಿನೇಮಾ ಸಹೃದಯತೆ ಮತ್ತು ಪ್ರಜ್ಞೆ ಬೆಳೆಸಲು ಹರಡಲು ಯೋಜನೆಗಳನ್ನು ಹಾಕುವುದು.
4. ಭಾರತೀಯ ಸಿನೇಮಾವನ್ನು ಒಂದು ಪ್ರಮುಖ ಉದ್ಯಮವೆಂದು ಪರಿಗಣಿಸಿ, ಇತರ ಪ್ರಮುಖ ಉದ್ಯಮಗಳಿಗೆ ಕೊಟ್ಟಿರುವ ಸವಲತ್ತುಗಳನ್ನು ಸಿನೇಮಾಕ್ಕೂ ನೀಡುವುದು.
5. ಮಾಹಿತಿ ನೀಡುವ/ಡಾಕ್ಯುಮೆಂಟರಿ, ಶೈಕ್ಷಣಿಕ ಮತ್ತು ವೈಜ್ಞಾನಿಕ ವಿಷಯಗಳುಳ್ಳ ಸಣ್ಣ ಸಿನೇಮಾಗಳಿಗೆ ಉತ್ತೇಜನ ನೀಡುವುದು ಇಂತಹ ಸಣ್ಣ ಫಿಲಂಗಳನ್ನು ಶಾಲಾ ಕಾಲೇಜು, ಸಮುದಾಯ ಕೇಂದ್ರಗಳಲ್ಲಿ ತೋರಿಸಲು ವ್ಯವಸ್ಥೆ ಮಾಡುವುದರ ಮೂಲಕ ಸಾಮಾಜಿಕ ಪ್ರಗತಿಗೆ ಅವುಗಳ ಕೊಡುಗೆ ಪಡೆಯಲು ಪ್ರಯತ್ನಿಸುವುದು.
6. ದೇಶದ ಎಲ್ಲಾ ಪ್ರದೇಶಗಳಲ್ಲೂ ಮಕ್ಕಳ ಫಿಲಂಗಳ ತಯಾರಿ, ವಿತರಣೆ ಮತ್ತು ಪ್ರದರ್ಶನಗಳಿಗೆ ಎಲ್ಲಾ ಸವಲತ್ತುಗಳನ್ನು ಒದಗಿಸುವುದು.
7. ಕಥಾ ಚಲನಚಿತ್ರಗಳ ಮಾರುಕಟ್ಟೆಯ ವಿಧಿ ವಿಧಾನಗಳನ್ನು ಸಾಮಾಜಿಕವಾಗಿ ಅರ್ಥಪೂರ್ಣವಾದ ಕಲಾತ್ಮಕ ಚಲನಚಿತ್ರಗಳಿಗೆ ಜನರನ್ನು ಮುಟ್ಟಲು ನ್ಯಾಯಯುತ ಅವಕಾಶಗಳಿರುವಂತೆ ಬದಲಾಯಿಸುವುದು, ಗಲ್ಲಾಪೆಟ್ಟಿಗೆ ಮೇಲೆ ಕಣ್ಣಿಟ್ಟಿರುವ ಚಿತ್ರಗಳಿಗೂ ಜೂಜಾಟದಂತೆ ಕಾಣುವ ಮಾರುಕಟ್ಟೆಯ ಪರಿಸರ ತಪ್ಪುವಂತೆ ನೋಡಿಕೊಳ್ಳುವುದು.
8. ಸಿನೇಮಾ ಉದ್ಯಮದ ಕಾರ್ಮಿಕರ ಕೆಲಸದ ಪರಿಸ್ಥಿತಿಯನ್ನು ಉತ್ತಮಪಡಿಸುವುದು.
9. ಫಿಲಂ ಉದ್ಯಮದ ತಂತ್ರಜ್ಞಾನದತಳಹದಿಯನ್ನು ಆಧುನಿಕೀಕರಣಗೊಳಿಸಲು ಉಪಕರಣಗಳು ಮತ್ತು ಕಚ್ಚಾ ಫಿಲಂಗಳ ಆಮದು ನೀತಿಯನ್ನು ಉದಾರಗೊಳಿಸುವುದು, ಅದರ ಜೊತೆಗೆ ದೇಶದಲ್ಲೇ ಫಿಲಂ ತಂತ್ರಜ್ಞಾನದ ಬಗ್ಗೆ ಸಂಶೋಧನೆ ಮತ್ತು ಬೆಳವಣಿಗೆಗೆ ತಕ್ಕ ಉತ್ತೇಜನ ನೀಡುವುದು.
10. ಭಾರತದಲ್ಲಿ ಸಿನೇಮಾ ಬೆಳೆದು ಬಂದ ದಾರಿಯನ್ನು ಗಮನದಲ್ಲಿಟ್ಟುಕೊಂಡು, ಸಿನೇಮಾದ ತಾಂತ್ರಿಕ ಮತ್ತು ಕಲಾತ್ಮಕ ಅಂಶಗಳ ಬಗ್ಗೆ ತರಬೇತಿ ಸೌಲಭ್ಯ ವಿಸ್ತರಿಸುವುದು.
11. ಸಿನೇಮಾದ ಮೇಲೆ ಹಾಕುವ ಮನರಂಜನಾ ಇತ್ಯಾದಿ ತೆರಿಗೆ ನೀತಿ ಸಿನೇಮಾದ ಬೆಳವಣಿಗೆಯ ಮೂಲ ಉದ್ದೇಶಕ್ಕೆ ಅನುಗುಣವಾಗಿರುವಂತೆ ನೋಡಿಕೊಳ್ಳುವುದು. ತೆರಿಗೆಗಳು ಸಿನೇಮಾದ ಮಾರುಕಟ್ಟೆಯನ್ನು ಜೂಜಿನಂತೆ ಪರಿವರ್ತಿಸುವ ಸಾಧನ ಆಗದಂತೆ ನೋಡಿಕೊಳ್ಳುವುದು. ಫಿಲಂನ ಮೇಲೆ ತೆರಿಗೆ ಹೆಚ್ಚಿಸುತ್ತಾ ಹೋಗುವ ನೀತಿ ಬಿಟ್ಟು, ಸಿನೇಮಾದ ವ್ಯಾಪಕತೆ ಹೆಚ್ಚಿಸುವ ಮೂಲಕ ಹೆಚ್ಚಿನ ತೆರಗೆಯ ಆದಾಯ ಪಡೆಯುವ ನೀತಿ ಅನುಸರಿಸುವುದು.
12. ಭಾರತ ಮತ್ತು ಅಂತರಾಷ್ಟ್ರೀಯ ಸಿನೇಮಾಗಳು ಪರಸ್ಪರ ಪ್ರತಿಸ್ಪಂದಿಸುವಂತೆ ಮಾಡಲು ತಾಂತ್ರಿಕ ಮತ್ತು ಕಲಾತ್ಮಕ ಉತ್ಕೃಷ್ಟತೆಯನ್ನು ಪ್ರತಿನಿಧಿಸುವ ಚಲನಚಿತ್ರಗಳನ್ನು ಆಮದು ಮಾಡುವುದು. ಭಾರತದ ಫಿಲಂಗಳು ವಿದೇಶಿ ವಿನಿಮಯ ಗಳಿಸುವ ಸಾಧ್ಯತೆಯನ್ನು ದುಡಿಸಿಕೊಳ್ಳುವುದು. ಇದಕ್ಕಾಗಿ ರಫ್ತು ನೀತಿ-ನಿಯಮಗಳನ್ನು ಸರಳೀಕರಿಸುವುದು ಮತ್ತು ತಜ್ಞ ಮಾರುಕಟ್ಟೆ ಮಾಹಿತಿ ಒದಗಿಸುವುದು. ವಿದೇಶಿ ಫಿಲಂ ತಯಾರಕರ ಜತೆ ಸಹ-ಉತ್ಪಾದನೆಗೆ ಉತ್ತೇಜನ ನೀಡುವುದು.

## ಡಾ॥ ಕಾರಂತ ಸಮಿತಿ ಕಂಡಂತೆ ಸಿನೇಮಾ

ಸಿನೇಮಾ ಎಂದರೆ

1. ಜನಪ್ರಿಯ ಸಂಸ್ಕೃತಿಯ ಅತಿ ದೊಡ್ಡ ಪ್ರಸಾರ.
2. ಅತ್ಯಂತ ಜನಪ್ರಿಯ ಹಾಗೂ ಮೂಲಭೂತ ಅವಶ್ಯಕತೆಯಂತೆ ಆಗಿರುವ ಶ್ರವ್ಯ-ದೃಶ್ಯ ಮನರಂಜನಾ ಮಾಧ್ಯಮ (ಟಿ. ವಿ. ಇತ್ಯಾದಿ ಹೊಸ ಮಾಧ್ಯಮಗಳು ಬಂದಾಗ್ಯೂ).
3. ಎಪ್ಪತ್ತು ವರ್ಷಗಳ ದೀರ್ಘ ಇತಿಹಾಸವಿದ್ದು, ರಾಷ್ಟ್ರೀಯ ಅಂತರಾಷ್ಟ್ರೀಯ ಖ್ಯಾತಿಯ ಫಿಲಂ ತಯಾರಕರು ಜಗತ್ತಿನ ಮನ್ನಣೆ ಪಡೆದಿದ್ದು ಬರಿಯ ಮನರಂಜನಾ ಮಾಧ್ಯಮವಾಗಿರದೆ ಕಲಾ ಪ್ರಕಾರವಾಗಿರುವ ಮಾಧ್ಯಮ ಅತ್ಯಂತ ಪ್ರತಿಭಾವಂತ ಕಲಾವಿದರನ್ನು ಆಕರ್ಷಿಸಿರುವ ಮಾಧ್ಯಮ.
4. ಅತ್ಯಂತ ಹೆಚ್ಚಿನ ಮಟ್ಟದ ಹಣ ತೊಡಗಿಸುವಿಕೆ ಮತ್ತು ಭಾರಿ ಸಂಖ್ಯೆಯಲ್ಲಿ ಅರೆ ಜಾಣ್ಮೆಯ, ಹೆಚ್ಚಿನ ಜಾಣ್ಮೆಯ ಮತ್ತು ಸೃಷ್ಟಿ ಶೀಲ ಕೆಲಸಗಾರರು ದುಡಿಯುವ ಒಂದು ಪ್ರಮುಖ ಉದ್ಯಮ.
5. ಸಿನೇಮಾದ ಕೈಗಾರಿಕಾ ತಳಹದಿ ಎಲ್ಲಾ ರೀತಿಯ ಫಿಲಂಗಳಿಗೆ (ಕಥಾ ಫಿಲಂಗಳು, ವಿಶಿಷ್ಟ ಫಿಲಂಗಳು) ಸಾಮಾನ್ಯವಾದುದು.
6. ಸತತವಾಗಿ ಅಭಿವೃದ್ಧಿ ಹೊಂದುತ್ತಿರುವ ಉತ್ಕೃಷ್ಟ ತಂತ್ರಜ್ಞಾನದ ತಳಹದಿ ಇರುವಂತದ್ದು.
7. ಬಹಳ ಕಡಿಮೆ ಸಾರ್ವಜನಿಕ ಹಣ ತೊಡಗಿಸಿ ಸರ್ಕಾರಕ್ಕೆ ಭಾರಿ ಆದಾಯ ನೀಡುವ ಸಾಧನ] (ಒಟ್ಟು ಸಿನೇಮಾದಲ್ಲಿ ಅಂದಾಜು ಹಣ ತೊಡಗಿಸುವಿಕೆ 2000 ಕೋಟಿ ರೂ.ಗಳಷ್ಟು. ಬಾಕ್ಸ್ ಆಫೀಸು ಲಾಭ 500 ಕೋಟಿ ರೂ. ಸರ್ಕಾರಕ್ಕೆ ವರಮಾನ 600 ಕೋಟಿ ರೂ.)
8. ವಿದೇಶಿ ವಿನಿಮಯ ಸಂಪಾದಿಸಲು ಸಾಧ್ಯತೆ ಇರುವ ಉದ್ಯಮ.

# ರಾಜ್ಯದಲ್ಲಿ ಹೆಂಚಿನ ಕೈಗಾರಿಕೆ ಮತ್ತು ಕಾರ್ಮಿಕರು ಎದುರಿಸುವ ಸಮಸ್ಯೆಗಳು

ಕರ್ನಾಟಕ ರಾಜ್ಯದಲ್ಲಿ 150ಕ್ಕೂ ಮಿಕ್ಕಿ ಹಂಚಿನ ಕಾರ್ಖಾನೆಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಂಚಿನ ಕೈಗಾರಿಕೆ ಒಂದು ಮುಖ್ಯ ಕೈಗಾರಿಕೋದ್ಯಮವಾಗಿದೆ. ಇಲ್ಲಿ 70 ಕಾರ್ಖಾನೆಗಳಿದ್ದು 7000ಕ್ಕೂ ಮಿಕ್ಕಿದ ಕಾರ್ಮಿಕರು ಈ ಕೈಗಾರಿಕೆಯಲ್ಲಿ ದುಡಿಯುತ್ತಿದ್ದಾರೆ. ಈ ಕೈಗಾರಿಕೆಯು ಚಿಕ್ಕ ಕೈಗಾರಿಕೆಯಾಗಿಯೂ ಬಹುತೇಕ ಪಶ್ಚಿಮ ಕರಾವಳಿಯಲ್ಲಿ ಕೇಂದ್ರೀಕೃತವಾಗಿದೆ. ಕರ್ನಾಟಕ ಕಾರ್ಮಿಕ ಚಳವಳಿಯಲ್ಲಿ ಈ ಪ್ರದೇಶದ ಹಂಚಿನ ಕಾರ್ಮಿಕರು ವಹಿಸುವ ಪಾತ್ರ ಚಿಕ್ಕದಲ್ಲವೆಂದು ಅಭಿಮಾನದಿಂದ ಹೇಳಬೇಕಾಗಿದೆ.

ರಾಜ್ಯದ ಕೋಲಾರ ಜಿಲ್ಲೆಯಲ್ಲಿ ಸುಮಾರು 50 ಹಂಚಿನ ಕಾರ್ಖಾನೆಗಳಿದ್ದು, ಸುಮಾರು 4000 ಕಾರ್ಮಿಕರು ದುಡಿಯುತ್ತಿದ್ದಾರೆ. ಹೆಚ್ಚಿನ ಕಾರ್ಖಾನೆಗಳಲ್ಲಿ ಸಂಘಟನೆ ಇಲ್ಲದುದ್ದರಿಂದ ಕಡಿಮೆ ಕೂಲಿಯನ್ನು ಪಡೆದು ಹೆಚ್ಚಿನ ಶ್ರಮಭಾರ ಹಾಕಿ ದುಡಿಯುತ್ತಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ 15 ಹಂಚಿನ ಕಾರ್ಖಾನೆಗಳಿವೆ. ಕಡಿಮೆ ಕೂಲಿಯಲ್ಲಿ ದುಡಿಯುತ್ತಿದ್ದಾರೆ. ಹೆಚ್ಚಿನ ಕಾರ್ಖಾನೆಗಳಲ್ಲಿ ಸಂಘಟನೆ ಇಲ್ಲಾ.

ಹೀಗೆ ಬೆಂಗಳೂರು, ಮೈಸೂರು, ಹಾಸನ, ಚಿತ್ರದುರ್ಗ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಕೂಡಾ ಒಂದೆರಡು ಹಂಚಿನ ಕಾರ್ಖಾನೆಗಳಿವೆ. ಸಂಘಟನೆ ಸರಿಯಾಗಿ ಇಲ್ಲದುದ್ದರಿಂದ ಕಡಿಮೆ ಕೂಲಿ ಪಡೆದು ಕಾನೂನು ರೀತಿಯ ಸವಲತ್ತುಗಳು ಸಿಗದ ಸ್ಥಿತಿ ಕೂಡಾ ಇದೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿರುವ ಕೆಲವು ಹಂಚು ಕಾರ್ಖಾನೆಗಳು ನೂರು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಕಾರ್ಯ ನಿರ್ವಹಿಸುತ್ತಿವೆ. ಮಂಗಳೂರಿನಲ್ಲಿ ಹೆಚ್ಚಿನ ಕಾರ್ಖಾನೆಗಳ ರಚನೆಯು ಹಳೆಯ ಮಾದರಿಯವಾಗಿದ್ದು ಕುಂದಾಪುರ ಮತ್ತು ಉಡುಪಿ ಈ ಪ್ರದೇಶಗಳಲ್ಲಿ ಇತ್ತೀಚೆಗೆ ಹೊಸ ಯಂತ್ರಗಳನ್ನು ಅಳವಡಿಸಿ ಹೆಚ್ಚು ಉತ್ಪಾದನೆ ಹಾಗೂ ಲಾಭವನ್ನು ಪಡೆಯಲು ಮಾಲಿಕರಿಗೆ ಸಾಧ್ಯವಾಗುತ್ತಿದೆ. ವಿಶೇಷತಃ ಮಂಗಳೂರಿನ ಹಂಚುಗಳಿಗೆ ಈ ಹಿಂದಿನಿಂದಲೂ ದೇಶದಲ್ಲೂ ಹಾಗೂ ವಿದೇಶದಲ್ಲೂ ಹೆಚ್ಚಿನ ಬೇಡಿಕೆಯಿದ್ದು ಹೇರಳ ದಾಯಕ ಲಾಭ ಕೈಗಾರಿಕೆಯಾಗಿದೆ. ಇಲ್ಲಿ ತಯಾರಾದ ಹಂಚುಗಳು ಮಹಾರಾಷ್ಟ್ರ, ಗುಜರಾತ್ ಹಾಗೂ ಇತರ ಪ್ರದೇಶಗಳಿಗೆ ಹೆಚ್ಚು ಸರಬರಾಜಾಗುತ್ತಿದ್ದು ಇತ್ತೀಚೆಗೆ ಗುಜರಾತ್ ರಾಜ್ಯದಲ್ಲಿ ಹೆಚ್ಚಿನ ಹಂಚು ಕಾರ್ಖಾನೆಗಳು ಸ್ಥಾಪನೆಯಾಗಿದ್ದು ಹೆಚ್ಚು ಉತ್ಪಾದನೆ ಮಾಡಿ, ಕಡಿಮೆ ಬೆಲೆಯಲ್ಲಿ ಮಹಾರಾಷ್ಟ್ರ ಹಾಗೂ ಇತರ ಪ್ರದೇಶಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಈ ಹಿಂದೆ ಈ ಕೈಗಾರಿಕೆಯಲ್ಲಿ ಸ್ಪರ್ಧೆ ಇಲ್ಲದಿದ್ದು, ಇತ್ತೀಚೆಗೆ ಇದರಿಂದಾಗಿ ಸ್ಪರ್ಧೆ ಉಂಟಾಗಿದೆ.

ಇಲ್ಲಿ ತಯಾರಾದ ಹಂಚುಗಳಿಗೆ ಬೆಲೆಯೇರಿಸುವುದಾಗಲಿ, ಈವರೆಗೆ ಇದ್ದ ಬೆಲೆಯಲ್ಲಿ ಹೆಚ್ಚು ಹಂಚುಗಳು ಮಾರಾಟವಾಗುವುದಾಗಲಿ ಕಡಿಮೆಯಾಗಿ ಈ ಕೈಗಾರಿಕೆಯಲ್ಲಿ ಕಳೆದ ಒಂದೆರಡು ವರ್ಷಗಳಿಂದೀಚೆಗೆ ಹಂಚಿನ ಮಾಲಿಕರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇದು ತಾತ್ಕಾಲಿಕ ಬಿಕ್ಕಟ್ಟು ಎನ್ನಬಹುದು.

ಕಾರ್ಮಿಕರು ಬೇಡಿಕೆಗಳನ್ನು ಇಟ್ಟಾಗ ಈ ಮೇಲಿನ ಕಾರಣಗಳನ್ನು ಮುಂದಿಟ್ಟು ನ್ಯಾಯವಾದ ಬೇಡಿಕೆಗಳನ್ನು ಇತ್ಯರ್ಥಗೊಳಿಸುವುದಕ್ಕೆ ಮಾಲಿಕರು ಮುಂದಾಗುವುದಿಲ್ಲ. ರಾಜ್ಯದ ಹೆಚ್ಚಿನ ಪ್ರದೇಶಗಳಲ್ಲಿ "ಕನಿಷ್ಠ ಕೂಲಿ ಮತ್ತು ಪರಿಮಿತ ತುಟ್ಟಿ ಭತ್ಯೆ"ಯನ್ನು ಕೂಡ ಜಾರಿ ಮಾಡದೇ ಕಾರ್ಮಿಕರನ್ನು ಕಷ್ಟಕ್ಕೆ ದೂಡಿಸುತ್ತಾರೆ.

ರೈತರು ಬೆಳೆಸಿದ ಫಸಲಿಗೆ ಸರಿಯಾಗಿ ಬೆಲೆ ಇಂದಿನ ಈ ಸಮಾಜದ ವ್ಯವಸ್ಥೆಯಲ್ಲಿ ಸಿಗದೆ, ಬಹಳ ಕಷ್ಟ-ನಷ್ಟಕ್ಕೆ ಒಳಗಾದ ರೈತರು ಹಾಗೂ ಜನಸಾಮಾನ್ಯರಲ್ಲಿ ಕೊಂಡುಕೊಳ್ಳುವ ಶಕ್ತಿ ಕಡಿಮೆಯಾದುದರಿಂದ ಹಾಗೂ ಸರಕಾರ ಅನುಸರಿಸಿದ ಆರ್ಥಿಕ ಮತ್ತು ಕೈಗಾರಿಕಾ ನೀತಿಯಿಂದಾಗಿ ಹೆಚ್ಚಿನ ಕೈಗಾರಿಕೆಗಳ ಮೇಲೆ ಪರಿಣಾಮವಾದಂತೆ ಈ ಕೈಗಾರಿಕೆ ಮೇಲೆ ಕೂಡಾ ಆಗಿದೆ. ಬೇರೆ ಕಾರಣಗಳಿದ್ದರೂ ಮುಖ್ಯ ಕಾರಣ ಇದಾಗಿದೆಯೆಂದು ತಿಳಿದುಕೊಳ್ಳಬೇಕಾಗಿದೆ. ಈ ಎಲ್ಲಾ ಕಾರಣದಿಂದಾಗಿ ಉಂಟಾದ ಸಮಸ್ಯೆಗಳ ಹೊರೆಯನ್ನು ಮಾಲಿಕ ವರ್ಗ ಕಾರ್ಮಿಕರ ಮೇಲೆ ಹೊರಿಸಲು ಪ್ರಯತ್ನಿಸುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೂ ಇತರ ಪ್ರದೇಶಗಳಲ್ಲಿ ಹಂಚು ಕೈಗಾರಿಕೆಯಲ್ಲಿ ಈ ಹಿಂದಿನಿಂದಲೂ ನಡೆದು ಬಂದ ಕೆಲಸದ ಪದ್ಧತಿಯು 'ಟಾಸ್ಕ್' ಪದ್ಧತಿ, ಅಂದರೆ ಒಂದು ನಿರ್ದಿಷ್ಟ ಕೆಲಸವನ್ನು ನಿರ್ದಿಷ್ಟ ಕಾರ್ಮಿಕರು ಮಾಡಿದರೆ, ಅದು ಒಂದು ಹಾಜರಿ ಹಾಗೂ ಒಂದು ದಿನದ ಕೆಲಸಕ್ಕೆ ಸಮಾನ. ಹಬ್ಬದ ರಜೆ, ರಜೆ ಸಂಬಳ ಹಾಗೂ ಗ್ರ್ಯಾಚ್ಯುಟಿ ಕೊಡುವಾಗ 'ಟಾಸ್ಕ್' ಪದ್ಧತಿಯಂತೆ ವೇತನವನ್ನು ಒಂದು ದಿನದ ವೇತನವೆಂದು ಲೆಕ್ಕ ಹಾಕಿಕೊಡುತ್ತ ಬಂದಿರುವುದು ಕ್ರಮವಾಗಿದೆ.

ಕನಿಷ್ಠ ವೇತನ ಪ್ರಕಟಣೆಯಂತೆ 'ಟಾಸ್ಕ್' ಎಂದು ಗಂಟೆಯ ಕೆಲಸವಲ್ಲ ಎಂಬ ವಾದವನ್ನು ಮಾಲಿಕರು ಮಂಡಿಸಿ ಕನಿಷ್ಟ ವೇತನವನ್ನು ಜಾರಿಗೊಳಿಸಲು ನಿರಾಕರಿಸಿ ಹೈಕೋರ್ಟಿನಲ್ಲಿ ರಿಟ್ ದಾಖಲು ಮಾಡಿ ತಾತ್ಕಾಲಿಕ ತಡೆಯಾಜ್ಞೆ ಕೂಡಾ ತಂದಿರುತ್ತಾರೆ.

ಮಂಗಳೂರು ಹಂಚಿನ ಕಾರ್ಖಾನೆಗಳ ಕಾರ್ಮಿಕರು ಸಲ್ಲಿಸಿದ ಬೇಡಿಕೆಗೆ ಪ್ರತಿಯಾಗಿ ಮಾಲಿಕರು ಬೇಡಿಕೆಗಳನ್ನು ಸಲ್ಲಿಸಿ ಕಾರ್ಮಿಕರ ಮುಖ್ಯ ಬೇಡಿಕೆಗಳನ್ನು ನಿರಾಕರಿಸುವುದರೊಂದಿಗೆ ಶ್ರಮಭಾರವನ್ನು ಹೆಚ್ಚಿಸಿ ಎಂಟು ಗಂಟೆಯ ಕೆಲಸ ಮಾಡಬೇಕೆಂದು ಮಾಲಿಕರ ವಾದ ಹಾಗೂ ಬೇಡಿಕೆಯಾಗಿದೆ. ಮಂಗಳೂರು ಹಂಚಿನ ಕಾರ್ಮಿಕರ ಕೇಳಿಕೆಯು ಬೆಂಗಳೂರು ಕೈಗಾರಿಕಾ ನ್ಯಾಯಾಲಯ (ಇಂಡಸ್ಟ್ರಿಯಲ್ ಟ್ರಿಬ್ಯುನಲ್)ದಲ್ಲಿ ಇತ್ಯರ್ಥಕ್ಕೆ ಬಾಕಿಯಾಗಿದೆ.

ಹೆಚ್ಚಿನ ಕೈಗಾರಿಕೆಗಳಲ್ಲಿ ಕನಿಷ್ಟ ಕೂಲಿ ಮತ್ತು ಬೆಲೆಯೇರಿಕೆಗೆ ಅನುಗುಣವಾಗಿ 'ಪರಿಮಿತ ತುಟ್ಟಿಭತ್ಯೆ' ನಿರ್ಣಯವಾಗಿ ಜಾರಿಗೊಳ್ಳುತ್ತಿರುವಾಗಲೇ ಈ ಕೈಗಾರಿಕೆಗೂ ಪರಿಮಿತ ತುಟ್ಟಿಭತ್ಯೆ ಸಹಿತ 'ಕನಿಷ್ಟ ಕೂಲಿ' ಪ್ರಕಟಣೆ ಮಾಡಬೇಕೆಂದೂ ವಿವಿಧ ಹೋರಾಟಗಳ ಮೂಲಕ ಒತ್ತಾಯಿಸಿದ ಪರಿಣಾಮವಾಗಿ 1986 ಫೆಬ್ರವರಿಯಲ್ಲಿ ಸರಕಾರ ಕರಡು ಪ್ರಕಟಣೆ ಹೊರಡಿಸಿತು. ಹಂಚಿನ ಕೈಗಾರಿಕೆಯಲ್ಲಿ ಬಹಳ ಹಿಂದಿನಿಂದಲೂ ಅನುಸರಿಸಿಕೊಂಡು ಬಂದಂತ ಕೆಲಸದ ಪದ್ಧತಿಯನ್ನು ತೋರಿಸಿ ಆಕ್ಷೇಪ ಹಾಕಲಾಗಿದೆ. 1987 ಫೆಬ್ರವರಿವರೆಗೆ ಅಂತಿಮ ಪ್ರಕಟಣೆ ಬಾರದಿರುವಾಗ ಪರಿಮಿತ ತುಟ್ಟಿಭತ್ಯ ಸಹಿತ ಕನಿಷ್ಟ ಕೂಲಿ ಜಾರಿಗೆ ಒತ್ತಾಯಿಸಿ ಚಳುವಳಿ ಮಾಡಿ 600ಕ್ಕೂ ಮಿಕ್ಕಿದ ಕಾರ್ಮಿಕರು ಬಂಧನಕ್ಕೊಳಗಾದರು, ಸುಮಾರು 1,000 ಕಾರ್ಮಿಕರು 3 ತಿಂಗಳು ಮುಷ್ಕರ ನಡೆಸಿದರು. ನಂತರ ಮಾರ್ಚ್ 13 ರಿಂದ ಜಾರಿಯಾಗುವಂತೆ ಸರಕಾರ ಹಂಚಿನ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿ ಮಾಡಿ ತುಟ್ಟಿಭತ್ಯೆಯೊಂದಿಗೆ ಅಂತಿಮ ಪ್ರಕಟಣೆ ಹೊರಡಿಸಿತು. ಆದರೆ ಇದರ ವಿರುದ್ಧ ಮುಖ್ಯವಾಗಿ ಉತ್ತರ ಕನ್ನಡ ಜಿಲ್ಲೆಯ ಮಾಲಿಕರು ಹೈಕೋರ್ಟಿಗೆ ರಿಟ್ ಸಲ್ಲಿಸಿದರು. ರಿಟ್ ಸ್ವೀಕರಿಸಿದ ಹೈಕೋರ್ಟ್ ಪ್ರಕಟಣೆಯಲ್ಲಿದ್ದ ಮೂಲ ಕೂಲಿಯ ಬಗ್ಗೆ ತಾತ್ಕಾಲಿಕ ಆಜ್ಞೆ ಕೊಟ್ಟಿದೆ. ಇದರ ಪ್ರಕಾರ ಕರಡು ಪ್ರಕಟಣೆ ಹಾಗೂ ಅಂತಿಮ ಪ್ರಕಟಣೆಗೂ ಇದ್ದ ವ್ಯತ್ಯಾಸದ ಅರ್ಧಾಂಶವನ್ನು ಕೊಡಬೇಕೆಂದೂ ಬಾಕಿ ಅರ್ಧಾಂಶವನ್ನು ಪ್ರತ್ಯೇಕ ಲೆಕ್ಕದಲ್ಲಿ ಇಡಬೇಕೆಂದೂ ಮೂಲ ಕೂಲಿಯ ಬಗ್ಗೆ ಈ ತಾತ್ಕಾಲಿಕ ಆಜ್ಞೆ ಕೊಟ್ಟಿತು. ಆದರೆ ಪರಿಮಿತ ತುಟ್ಟಿ ಭತ್ಯೆ ಬಗ್ಗೆ ಯಾವ ಬದಲಾವಣೆಯನ್ನೂ ಮಾಡಲಿಲ್ಲ. ಕುಂದಾಪುರ ಹಂಚಿನ ಕಾರ್ಖಾನೆಗಳ ಮಾಲಿಕರು ಈ ತಾತ್ಕಾಲಿಕ ಆಜ್ಞೆ ಇದ್ದರೂ ಮೊದಲೇ ಒಪ್ಪಂದವಾದಂತೆ ಕನಿಷ್ಟ ಕೂಲಿ ಮತ್ತು ತುಟ್ಟಿಭತ್ಯೆ ಜಾರಿ ಮಾಡಿರುತ್ತಾರೆ.

ಅದರಂತೆ 1987 ಎಪ್ರಿಲ್ ತಿಂಗಳಿಂದ ರೂ—2.40 ನಲ್ಲಿ ಮತ್ತು 1988 ಎಪ್ರಿಲ್‌ನಿಂದ ಹೆಚ್ಚಳವಾದ ಪಾಯಿಂಟ್‌ಗೆ ಅನುಸಾರವಾಗಿ ರೂ. 1-56 ನ್ನು ಕೊಟ್ಟಿರುತ್ತಾರೆ. ಒಟ್ಟಿಗೆ ರೂ. 3-96 ತುಟ್ಟಿಭತ್ಯೆ ದ.ಕ. ಜಿಲ್ಲೆಯ ಎಲ್ಲಾ ಹಂಚಿನ ಕಾರ್ಮಿಕರು ಪಡೆಯುತ್ತಿದ್ದಾರೆ. ಆದರೆ ಉತ್ತರ ಕನ್ನಡ ಜಿಲ್ಲೆ, ರಾಜ್ಯದ ಇತರ ಪ್ರದೇಶಗಳ ಯಾವ ಹಂಚಿನ ಕಾರ್ಖಾನೆಗಳಲ್ಲಿಯೂ ಈ ತಟ್ಟಿ ಭತ್ಯೆ ಜಾರಿಯಾಗಲಿಲ್ಲ. ಇದು ರಾಜ್ಯದ ಹಂಚು ಕಾರ್ಮಿಕರಿಗೆ ಆದ ದೊಡ್ಡ ವಂಚನೆಯಾಗಿದೆ.

ಆದುದರಿಂದ ಈ ತುಟ್ಟಿಭತ್ಯೆಯನ್ನು ಪಡೆಯಲು ಹಾಗೂ ಕೋರ್ಟು ಆಜ್ಞೆಯಂತೆ ಕಡಿಮೆಯಿರುವ ಮೂಲ ವೇತನವನ್ನು ಭರ್ತಿ ಮಾಡಿ 1987 ಮಾರ್ಚ್ 13 ರಿಂದ ಈ ತನಕ ಬಾಕಿಯನ್ನು ಮಾಲಕರು ಕೊಡುವಂತೆಯೂ ಹಾಗೂ ಇದಕ್ಕೆ ಸಂಬಂಧಿತ ಅಧಿಕಾರಿಗಳು ಈ ತನಕ ಗಮನ ಹರಿಸದಿರುವುದನ್ನು ಸೌತ್ ಕೆನರಾ ಟೈಲ್ ವರ್ಕರ್ಸ್ ಯೂನಿಯನ್ (ಸಿ.ಐ.ಟಿ.ಯು.) ಪ್ರತಿಭಟಿಸಿದೆ.

ರಾಜ್ಯ ಮಟ್ಟದಲ್ಲಿ ಸಂಘಟನೆ ಮತ್ತು ಹೋರಾಟವನ್ನು ರೂಪಿಸಲು ಅನುಕೂಲವಾಗುವಂತೆ, ರಾಜ್ಯ ಮಟ್ಟದಲ್ಲಿ ಹಂಚಿನ ಕಾರ್ಮಿಕರ ಸಮಾವೇಶ ನಡೆಸಲು ಸಿ.ಐ.ಟಿ.ಯು. ರಾಜ್ಯ ಸಮಿತಿ ಯೋಜಿಸಿದ್ದು, ಅದರ ಪೂರ್ವಭಾವಿಯಾಗಿ ದ.ಕ. ಜಿಲ್ಲಾ ಹಂಚಿನ ಕಾರ್ಮಿಕರ ಸಮಾವೇಶ 1988ರ ಮಾರ್ಚ್ 27 ರಂದು ನಡೆಯಿತು. ರಾಜ್ಯ ಮಟ್ಟದಲ್ಲಿ ಕಾರ್ಮಿಕರು ಸಂಘಟಿತರಾಗಿ ರಾಜ್ಯಮಟ್ಟದ ಬೇಡಿಕೆಗಳಿಗಾಗಿ. ಮಾಲಿಕರ ಹಾಗೂ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ "ಸಂಘಟನೆ ಮತ್ತು ಐಕ್ಯ ಹೋರಾಟ" ಬೆಳೆದು ಬಂದಲ್ಲಿ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ. ರಾಜ್ಯದ ಇತರ ಜಿಲ್ಲೆಗಳ ಹೆಚ್ಚಿನ ಪ್ರದೇಶಗಳಲ್ಲಿ ಹಂಚಿನ ಕಾರ್ಮಿಕರು ಸಂಘಟಿತರಾಗಿಲ್ಲ. ಕೆಲಸದ ಪದ್ಧತಿಯಲ್ಲಿ ಬದಲಾವಣೆಯಾಗಿಲ್ಲ; ಹಾಗೂ ಇತರ ಬೇಡಿಕೆಗಳನ್ನು ಪಡೆಯಲಾಗದ ಪರಿಸ್ಥಿತಿ ಇನ್ನೂ ಉಳಿದು ಕೊಂಡಿದೆ.

ಅತೀ ಕಡಿಮೆ ಸಂಬಳಕ್ಕೆ ದುಡಿಯುವ ಪರಿಸ್ಥಿತಿಯನ್ನು ಬದಲಾಯಿಸಲು, 'ಕನಿಷ್ಟ ಕೂಲಿ-ತುಟ್ಟಿಭತ್ಯೆ' ಜಾರಿಗೊಳಿಸಲು, ಕೆಲಸದ ಪದ್ಧತಿಯ ಬದಲಾವಣೆ, ಹೆಚ್ಚಿನ 'ಶ್ರಮ ಭಾರದ ವಿರುದ್ಧ, ಕಾನೂನು ರೀತಿಯಲ್ಲಿ ಸಿಗಬೇಕಾದ ಸೌಲಭ್ಯಗಳು ಸಿಗುವಂತಾಗಲು ರಾಜ್ಯ ಮಟ್ಟದಲ್ಲಿ ಸಂಘಟನೆಯನ್ನು ವಿಸ್ತರಿಸಿ ತನ್ಮೂಲಕ 'ಸಂಘಟಿತ ಐಕ್ಯಹೋರಾಟ' ವನ್ನು ಬೆಳೆಸ ಬೇಕಾಗಿದೆ.

**ಕೆ. ಶಂಕರ್**

ಪ್ರಧಾನ ಕಾರ್ಯದರ್ಶಿ
ಎಸ್. ಕೆ. ಟೈಲ್ ವರ್ಕರ್ಸ್
ಯೂನಿಯನ್ (ಸಿ.ಐ.ಟಿ.ಯು.)
ಬೋಳಾರ, ಮಂಗಳೂರು

## ಸಂವಿಧಾನದ 59 ನೇ ತಿದ್ದುಪಡಿ ವಿರುದ್ಧ

# ಸಿ. ಪಿ. ಐ. (ಎಂ), ಸಿ. ಪಿ. ಐ. ಜಂಟಿ ಸಮಾವೇಶ

### ಮೈಸೂರು

ಸಂವಿಧಾನದ 59 ನೇ ತಿದ್ದುಪಡಿ ಹಾಗೂ ಪಂಜಾಬ್, ತ್ರಿಪುರ ಪರಿಸ್ಥಿತಿ ಕುರಿತು ಸಿ. ಪಿ. ಐ. (ಎಂ) ಹಾಗೂ ಸಿ.ಪಿ.ಐ. ನ ಮೈಸೂರಿನ ಜಿಲ್ಲಾ ಸಮಿತಿಗಳು ಜಂಟಿಯಾಗಿ ಜಿಲ್ಲಾ ಸಮಾವೇಶವನ್ನು ಜುಲೈ 17 ರಂದು ಮೈಸೂರು ನಗರದ ಸಹಕಾರ ಭವನದಲ್ಲಿ ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಿ.ಪಿ.ಐ.(ಎಂ) ಮೈಸೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ॥ ಎಂ.ಎನ್. ಉಗ್ರಪ್ಪನವರು ವಹಿಸಿದ್ದರು.

ಸಮಾವೇಶವನ್ನುದ್ದೇಶಿಸಿ ಖ್ಯಾತ ವಕೀಲರಾದ ಪ್ರೊ॥ ಎಲ್. ಶ್ರೀಕಂಠಯ್ಯನವರು ಮಾತನಾಡಿ ಸಂವಿಧಾನದ 59ನೇ ತಿದ್ದುಪಡಿಯಿಂದ ದೇಶದ ಮೇಲೆ ಮತ್ತೊಮ್ಮೆ ತುರ್ತು ಪರಿಸ್ಥಿತಿಯ ಕರಾಳ ದಿನಗಳು ಕವಿಯುವ ಅಪಾಯ ಉಂಟಾಗಲಿದ್ದು ಜನತೆ ಜಾಗೃತರಾಗಿ ಹೋರಾಟ ನಡೆಸಬೇಕೆಂದು ಅವರು ಕರೆನೀಡಿದರು. ಸಿ.ಪಿ.ಐ.(ಎಂ) ಪಕ್ಷದ ರಾಜ್ಯ ಸೆಕ್ರಟಾರಿಯೇಟ್ ಸದಸ್ಯರಾದ ಕಾ॥ ಸಿ. ನಂಜುಂಡಪ್ಪನವರು ಮಾತನಾಡಿ ಇತ್ತೀಚೆಗೆ ತ್ರಿಪುರದಲ್ಲಿ ನಡೆದ ಚುನಾವಣೆಯಲ್ಲಿ ಹಾಗೂ ನಂತರದಲ್ಲಿ ಕಾಂಗ್ರೆ ಗೂಂಡಾಗಳು ನಡೆಸಿದ ಮುಗ್ಧ ಜನರ ಕಗ್ಗೊಲೆ, ಹೆಣ್ಣು ಮಕ್ಕಳ ಮೇಲೆ ನಡೆದ ಸಾಮೂಹಿಕ ಅತ್ಯಾಚಾರಗಳು, ಸಂಘ ಸಂಸ್ಥೆಗಳ ನವೀಕರಣ ನಿರಾಕರಣೆ ಮುಂತಾದ ಘಟನೆಗಳು ದೇಶದ ಪ್ರಜಾಪ್ರಭುತ್ವ ಉಳಿದಿದೆಯೇ ಎಂಬುದರ ಸಂಕೇತವೆಂದು ಹೇಳಿದ ಅವರು ಈ ಎಲ್ಲಾ ಅಮಾನುಷ ದಬ್ಬಾಳಿಕೆ ಎದುರಿಸಿ ಹೋರಾಡುತ್ತಿರುವ ತ್ರಿಪುರ ಜನತೆಗೆ ದೇಶದ ಎಲ್ಲಾ ಪ್ರಜಾಪ್ರಭುತ್ವವಾದ ಶಕ್ತಿಗಳು ನೆರವಾಗಬೇಕೆಂದು ಕರೆನೀಡಿದರು.

ಸಿ.ಪಿ.ಐ. ನ ಕಾ॥ ಎಂ.ಸಿ. ವೆಂಕಟರಾವ್‌ರವರು ಮಾತನಾಡಿ ಪಂಜಾಬ್‌ನಲ್ಲಿ ಉಗ್ರಗಾಮಿಗಳ ವಿರುದ್ಧ ಅಲ್ಲಿಯ ಜನತೆ ನಡೆಸುತ್ತಿರುವ ಹೋರಾಟಕ್ಕೆ ದೇಶದ ಜನತೆ ಬೆಂಬಲ ನೀಡಬೇಕೆಂದು ವಿನಂತಿಸಿದರು. ಜಿಲ್ಲಾ ಸಮಾವೇಶವನ್ನು ಪ್ರಾರಂಭದಲ್ಲಿ ಸಿ.ಪಿ.ಐ.(ಎಂ)ನ ಮೋಹನ್ ಕುಮಾರ್ ಸ್ವಾಗತಿಸಿದರು. ಸಿ.ಪಿ.ಐ. ಜಿಲ್ಲಾ ಕಾರ್ಯದರ್ಶಿ ಕಾ॥ ವೆಂಕಟರಾಮಯ್ಯ ವಂದಿಸಿದರು.

### ರಾಯಚೂರು

ರಾಯಚೂರು ಜಿಲ್ಲಾ ಸಮಾವೇಶವು ಜುಲೈ 11 ರಂದು ನಗರದ ಕರ್ನಾಟಕ ಸಂಘದಲ್ಲಿ ನಡೆಯಿತು. ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ಸದಸ್ಯರು ಹಾಗೂ ರಾಜ್ಯ ಕಾರ್ಯದರ್ಶಿಗಳಾದ ಕಾ॥ ಪಿ. ರಾಮಚಂದ್ರರಾವ್‌ರವರು ಮಾತನಾಡಿ ರಾಜೀವ್‌ಗಾಂಧಿ ಸರ್ಕಾರದ ಆರ್ಥಿಕ ನೀತಿ ಬಂಡವಾಳಶಾಹಿ ಪರವಾಗಿದ್ದು ದುಡಿಯುವ ಜನತೆಯು ತಮ್ಮ ಹಕ್ಕುಗಳ ಉಳಿವಿಗಾಗಿ ತೀವ್ರಗೊಳ್ಳುತ್ತಿರುವ ಹೋರಾಟವನ್ನು ಸರ್ವಾಧಿಕಾರಿ ರೀತಿಯಲ್ಲಿ ದಮನ ಮಾಡುವ ನೀತಿಯನ್ನು ಅನುಸರಿಸಲಾಗುತ್ತಿದೆ ಎಂದು ಟೀಕಿಸಿದರು.

ತ್ರಿಪುರದಲ್ಲಿ ಶೇಕಡ 52 ರಷ್ಟು ಮತಗಳಿಸಿದ ಎಡರಂಗ ಜನತೆಯ ಸ್ಪಷ್ಟ ಬಹುಮತಗಳಿಸಿದ್ದರೂ ಮಿಲಿಟರಿ, ಚುನಾವಣಾ ಅಧಿಕಾರಿಗಳು ಹಾಗೂ ಕಾಂಗ್ರೆ ಟಿ.ಯು.ಜೆ.ಎಸ್. ಗೂಂಡಾಗಳ ನೆರವಿನಿಂದ ಅಧಿಕಾರವನ್ನು ಕಸಿದುಕೊಳ್ಳಲಾಗಿದೆ ಎಂದು ಆರೋಪಿಸಿದರು. 59ನೇ ತಿದ್ದುಪಡಿ ತಂದು ಇಡೀ ದೇಶದಲ್ಲಿ ಅಘೋಷಿತ ತುರ್ತುಪರಿಸ್ಥಿತಿಯನ್ನು ತರಲಾಗಿದೆ ಎಂದು ಹೇಳಿದ ಅವರು ಸಮಸ್ತ ಜನತೆ ಈ ಅಪಾಯದ ವಿರುದ್ಧ ಹೋರಾಡಿ ಕಾಂಗ್ರೆಗೆ ಪರ್ಯಾಯವಾದ ಎಡ-ಪ್ರಜಾಸತ್ತಾತ್ಮಕ ಜಾತ್ಯಾತೀತ ಶಕ್ತಿಗಳನ್ನು ಬಲಪಡಿಸುವುದರ ಮೂಲಕ ಸರ್ವಾಧಿಕಾರಿ ಕಾಂಗ್ರೆಯನ್ನು ಧಿಕ್ಕರಿಸಬೇಕೆಂದು ಕರೆ ನೀಡಿದರು.

ಸಭೆಯಲ್ಲಿ ಕಾ॥ ಪುರುಷೋತ್ತಮ ಕಲಾಲಬಂಡಿ, ಹರಿಣಿಕಕ್ಕೇರಿಯವರು ಮಾತನಾಡಿದರು. ಸಮಾವೇಶವನ್ನು ಕಾ॥ ರಾಘವೇಂದ್ರ ಕುಷ್ಟಗಿ ಸ್ವಾಗತಿಸಿ ಚಂದ್ರಶೇಖರ ಬಾಳೆಯವರು ಅಧ್ಯಕ್ಷತೆಯನ್ನು ವಹಿಸಿದ್ದರು.

### ಕೋಲಾರ

ಜುಲೈ 12 ರಂದು ಚಿಂತಾಮಣಿಯ ವಾಸವಿ ಮಂಟಪದಲ್ಲಿ ಕೋಲಾರ ಜಿಲ್ಲಾ ರಾಜಕೀಯ ಸಮಾವೇಶ ನೆರವೇರಿತು. ಕಾ॥ ಸಿ. ನಂಜುಂಡಪ್ಪನವರು ಮಾತನಾಡಿ ತ್ರಿಪುರದ ಎಡರಂಗ ಸರ್ಕಾರದ ಜನಪ್ರಿಯತೆಯನ್ನು ಸಹಿಸಲಾರದ ಕಾಂಗ್ರೆ ಆರೆಫ್ಯಾಸಿಸ್ಟ್ ದಬ್ಬಾಳಿಕೆ ನಡೆಸಿದೆ. ಚುನಾವಣೆಗಳು ಹೇಗೆ ನಡೆಯುತ್ತವೆ ಎಂಬುದನ್ನು ತ್ರಿಪುರ ಚುನಾವಣೆಯಿಂದ ತಿಳಿಯಬಹುದಾಗಿದೆ ಎಂದು ಹೇಳಿದರು.

ಪಂಜಾಬ್‌ನಲ್ಲಿ ಪ್ರಜಾಪ್ರಭುತ್ವ ರೀತಿ ಆರಿಸಲ್ಪಟ್ಟ ಸರ್ಕಾರವನ್ನು ವಜಾಗೊಳಿಸಿದ ರಾಜೀವ್ ಸರ್ಕಾರ ಅಲ್ಲಿಯ ಉಗ್ರಗಾಮಿಗಳು ದೇಶವನ್ನು ಅಭದ್ರಗೊಳಿಸುವಂತೆ ಮಾಡಿ ಮುಗ್ಧ ಜನತೆ ಹಾಗೂ ಸಾಮೂಹಿಕ ಸಂಘಟನೆಯ ಅಸಂಖ್ಯಾತ

(6ನೇ ಪುಟ ನೋಡಿ)

# ಆಗಸ್ಟ್ 1947 : ರಾಜಕೀಯ ಅಧಿಕಾರದ 'ಶಾಂತಿಯುತ ಹಸ್ತಾಂತರ'

**ಭಾರತ ಬ್ರಿಟಿಶ್ ಸಾಮ್ರಾಜ್ಯಶಾಹಿಗಳಿಂದ ರಾಜಕೀಯ ಸ್ವಾತಂತ್ರ್ಯ ಪಡೆದು 41 ವರ್ಷ ಮುಗಿಯುತ್ತಿದೆ. ಎಲ್ಲಾ ರಂಗಗಳಲ್ಲೂ ತೀವ್ರ ವಿಫಲರಾಗಿರುವ ಕಾಂಗ್ರೆಸ್ ಮುಖಂಡರು 1885ರಲ್ಲಿ ಕಾಂಗ್ರೆಸ್ ಸ್ಥಾಪನೆಯಾದಂದಿನಿಂದ, ವಿಶೇಷವಾಗಿ 1917ರಲ್ಲಿ ಗಾಂಧೀಜಿಯವರ ಪ್ರವೇಶದಿಂದ ನಡೆಸಿಕೊಂಡು ಬಂದ ಶಾಂತಿಯುತ ವಿಧಾನಗಳಿಂದ ಸ್ವಾತಂತ್ರ್ಯ ದೊರೆಯಿತು ಎಂದು ಮತ್ತೊಮ್ಮೆ ಡಂಗುರ ಆರಂಭಿಸುತ್ತಾರೆ. ಆದರೆ ಇದು ಸತ್ಯಕ್ಕೆ ಎಂತಹ ಅಪಚಾರ ಎಂಬುದನ್ನು ಇಲ್ಲಿ ಕಾಂ. ಎಂ. ಬಸವಪೊನ್ನಯ್ಯನವರು ಚಾರಿತ್ರಿಕವಾಗಿ ವಿಶ್ಲೇಷಿಸಿದ್ದಾರೆ.**

**ಇದು 1984ರಲ್ಲಿ ಪ್ರಕಟವಾದ ಕಾಂ. ಎಂ. ಬಿ. ಯವರ ಪುಸ್ತಕ "ಕ್ವಿಟ್ ಇಂಡಿಯಾ ಕರೆ ಮತ್ತು ಕಮ್ಯುನಿಸ್ಟರ ಪಾತ್ರ–ಅರುಣ್‌ಶೌರಿಗೊಂದು ಉತ್ತರ"ದ ಕೊನೆಯ ಅಧ್ಯಾಯದ ಸಂಕ್ಷಿಪ್ತ ಅನುವಾದ.**

ಆರಂಭದಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ಕೊಳ್ಳೆ, ನಂತರ ಬ್ರಿಟಿಷ್ ಮಹಾರಾಣಿಯ ನೇರ ಆಳ್ವಿಕೆ ಹೀಗೆ ಸುಮಾರು ಎರಡು ಶತಮಾನಗಳ ವಿದೇಶೀ ಬ್ರಿಟಿಶ್ ಪ್ರಾಬಲ್ಯದ ನಂತರ 1947ರ ಆಗಸ್ಟ್ 15 ರಂದು ಭಾರತ ರಾಜಕೀಯ ಸ್ವಾತಂತ್ರ್ಯ ಪಡೆಯಿತು. ಅದೊಂದು ಅಪಾರ ರಾಷ್ಟ್ರೀಯ, ಅಂತರ್ರಾಷ್ಟ್ರೀಯ ಸಾಮಾಜಿಕ-ರಾಜಕೀಯ ಮಹತ್ವದ ಘಟನೆ. ಅತ್ಯಂತ ಶಕ್ತಿಶಾಲೀ ಜಾಗತಿಕ ಸಾಮ್ರಾಜ್ಯಶಾಹೀ ಆಳ್ವಿಕೆಯ ಅಂತ್ಯದ ಆರಂಭವನ್ನು ಸ್ಪಷ್ಟವಾಗಿ ಸೂಚಿಸಿದ ಘಟನೆಯದು.

ಬ್ರಿಟಿಷರು ಏಕೆ ರಾಜಕೀಯ ಅಧಿಕಾರವನ್ನು ವರ್ಗಾಯಿಸಲೇಬೇಕಾಗಿ ಬಂತು, ಯಾವ ವರ್ಗ ಅಥವಾ ವರ್ಗಗಳಿಗೆ, ಯಾವ ರಾಜಕೀಯ ಪಕ್ಷ ಹಾಗೂ ಪಕ್ಷಗಳಿಗೆ ಅಧಿಕಾರದ ಹಸ್ತಾಂತರವಾಯಿತು ? ಇಂತಹದೊಂದು ಪ್ರಶ್ನೆ ಕೇವಲ ಚಾರಿತ್ರಿಕ ಕುತೂಹಲದ ಪ್ರಶ್ನೆ ಮಾತ್ರವೇ ಅಲ್ಲ. ನಮ್ಮ ದೇಶದ ಸದ್ಯದ ರಾಜಕೀಯ ಬೆಳವಣಿಗೆಗಳ ಸರಿಯಾದ ವಿಶ್ಲೇಷಣೆಯ ದೃಷ್ಟಿಯಿಂದಲೂ ಮಹತ್ವಪೂರ್ಣವಾದದ್ದು.

1921,1931 ಮತ್ತು 1942 ರ ಕ್ವಿಟ್ ಇಂಡಿಯಾ ಚಳುವಳಿಗಳನ್ನು ನಿರ್ದಯವಾಗಿ ಹತ್ತಿಕ್ಕಿದ ಬ್ರಿಟಿಷರ ಮೇಲೆ ಆಗಸ್ಟ್ 1947 ರಲ್ಲಿ, ಜರ್ಮನಿ' ಇಟಲಿ ಹಾಗೂ ಜಪಾನ್‌ನ ಫ್ಯಾಸಿಸ್ಟ್ ಕೂಟದ ಮೇಲೆ ಮಿತ್ರಕೂಟದ ವಿಜಯದ ಎರಡೇ ವರ್ಷಗಳಲ್ಲಿ ಒತ್ತಡ ಬಂತೇ ?

ಭಾರತ ಪಡೆದ ರಾಜಕೀಯ ಸ್ವಾತಂತ್ರ್ಯದ ಸ್ವರೂಪವೇನು ? ಇದು ನಿಜವಾದ ಸ್ವಾತಂತ್ರ್ಯವೇ ಅಥವಾ ಹೊರ ನೋಟಕ್ಕಷ್ಟೇ ಸೀಮಿತವಾದದ್ದೇ ? ನಿಜ, ಇಂತಹ ಪ್ರಶ್ನೆ ಆಗ ಹೆಚ್ಚಾಗಿ ಕಮ್ಯೂನಿಸ್ಟ್‌ರಲ್ಲಿ ಮಾತ್ರವೇ ಎದ್ದಿತ್ತು. ಯಾಕೆಂದರೆ ಆಧುನಿಕ ಸಾಮ್ರಾಜ್ಯಶಾಹಿಯ ಸೂಕ್ಷ್ಮಾತಿಸೂಕ್ಷ್ಮಗಳ ಆಳಕ್ಕಿಳಿದು ಪರೀಸುವ ಸೈದ್ಧಾಂತಿಕ ಪರಿಕರಗಳನ್ನು ಪಡೆದ ಕಮ್ಯೂನಿಸ್ಟರು ಇಂತಹ ರಾಜಕೀಯ ಅಧಿಕಾರದ ವರ್ಗಾವಣೆಯಲ್ಲಿ ಅಡಕವಾಗಿರುವ ಕುಂದು ಕೊರತೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಬಂಡವಾಳಶಾಹಿಗಳು ಮತ್ತು ಪುಟ್ಟ ಬಂಡವಾಳಶಾಹಿಗಳಂತೆ ಆನಂದ ಪರವಶರಾಗುವುದು ಸಾಧ್ಯವಿರಲಿಲ್ಲ.

ಕಮ್ಯುನಿಸ್ಟರು ಅಂದು ಏಕೆ ಈ ರಾಜಕೀಯ ಅಧಿಕಾರದ ವರ್ಗಾವಣೆಯ ಬಗ್ಗೆ ಸಂದೇಹಪಟ್ಟರು ? 1923 ರಷ್ಟು ಹಿಂದೆನೇ ಲೆನಿನ್ ಸಾಮ್ರಾಜ್ಯಶಾಹಿಗಳ ಚಾಣಾಕ್ಷತನ ಹಾಗೂ ಕುತಂತ್ರಗಳ ಬಗ್ಗೆ ಕಾರ್ಮಿಕ ವರ್ಗವನ್ನು ಹಾಗೂ ಕಮ್ಯುನಿಸ್ಟರನ್ನು ಎಚ್ಚರಿಸಿದ್ದರು. ಸಾಮ್ರಾಜ್ಯಶಾಹಿಗಳು ರಾಜಕೀಯವಾಗಿ ಸ್ವತಂತ್ರವಾದ ದೇಶಗಳಿಗೆ ಅವಕಾಶ ಕೊಡುತ್ತೇವೆ ಎಂಬುದರ ಮರೆಯಲ್ಲಿ ತಮ್ಮ ಮೇಲೆ ಸಂಪೂರ್ಣವಾಗಿ ಅವಲಂಬಿಸಿರುವ ಪ್ರಭುತ್ವಗಳನ್ನು ಪ್ರತಿಷ್ಠಾಪಿಸುತ್ತಾರೆ ಎಂದಿದ್ದರು.

ಇಷ್ಟೇ ಅಲ್ಲ. ಬ್ರಿಟಿಷರು ಹೇರಿದ ಕೋಮುವಾರು ವಿಭಜನೆಯನ್ನು ಒಡ್ಡಿದ್ದ, ಬ್ರಿಟಿಷ್ ಕಾಮನ್‌ವೆಲ್ತ್ ಸದಸ್ಯತ್ವ ಮುಂದುವರಿಕೆ, ಭಾರತದಲ್ಲಿ ಬ್ರಿಟಿಶ್ ಬಂಡವಾಳಕ್ಕೆ ರಕ್ಷಣೆಯ ಭರವಸೆ, ಬ್ರಿಟಿಶ್ ಗವರ್ನರ್ ಜನರಲ್‌ನ ಮುಂದುವರಿಕೆಗೆ ಒಪ್ಪಿಗೆ, ವಿಶ್ವಸಂಸ್ಥೆಯಲ್ಲಿ ಮಹತ್ವದ ಪ್ರಶ್ನೆಗಳ ಮೇಲೆ ತಡವರಿಕೆ,ಅಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿ ಕೂಟದ ಜತೆಗೆ ಮತದಾನ ಇವೆಲ್ಲಾ ನಮ್ಮ ಸಂದೇಹವನ್ನು ಇನ್ನಷ್ಟು ಹೆಚ್ಚಿಸಿದವು.

ಆದರೆ ನಂತರದ ಇತಿಹಾಸ ಬೇರೆ ರೀತಿಯಲ್ಲೇ ರೂಪುಗೊಂಡಿತು. ಸಾಮ್ರಾಜ್ಯಶಾಹಿಗಳು ಬಯಸಿದಂತೆ ಭಾರತದ ರಾಜಕೀಯ ಸ್ವಾತಂತ್ರ್ಯ ಕೇವಲ ಹೊರನೋಟದ್ದು ಮತ್ತು ಕಪಟದ್ದಾಗಲಿಲ್ಲ. ಇಲ್ಲಿ ಏಳುವ ಪ್ರಶ್ನೆಯೆಂದರೆ ಭಾರತದ ಹೊಸ ಆಳುವ ವರ್ಗಗಳು ಸಾಮ್ರಾಜ್ಯಶಾಹಿಯ ಪ್ರಯತ್ನಗಳನ್ನು ಎದುರಿಸಿ ತಮ್ಮ ರಾಜಕೀಯ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವುದು ಹೇಗೆ ಸಾಧ್ಯವಾಯಿತು ? ಸಾಮ್ರಾಜ್ಯ ಶಾಹಿಯ ಕುತಂತ್ರಗಳು ಏಕೆ ವಿಫಲವಾದವು ?

ನಮ್ಮ ಆಳುವ ವರ್ಗಗಳು, ಮುಖ್ಯವಾಗಿ ಆಳುವ ಕಾಂಗ್ರೆಸ್ ಪಕ್ಷ ಜಾಣತನದಿಂದ 'ಶಾಂತಿಯುತ' ಅಧಿಕಾರ ವರ್ಗಾವಣೆ ಪಡೆದ ನಂತರ ತಮ್ಮ ಸಮರ್ಥ ಆಂತರಿಕ ಹಾಗೂ ವಿದೇಶೀ ನೀತಿಗಳ ಮೂಲಕ ಅದನ್ನು ಬಲಗೊಳಿಸಿದ ತಮ್ಮ ರಾಜಕೀಯ ನಿಪುಣತೆಯನ್ನು ಕೊಚ್ಚಿಕೊಳ್ಳುತ್ತಿವೆ. ಆದರೆ ಇವು ಹೆಚ್ಚೆಂದರೆ ಅರೆಸತ್ಯಗಳಷ್ಟೇ, ಅಂತರರಾಷ್ಟ್ರೀಯ ಸನ್ನಿವೇಶದಲ್ಲಿನ ಮೂಲಭೂತ ವಾಸ್ತವತೆಗಳನ್ನು ಮರೆಮಾಚುವ ಅರೆಸತ್ಯಗಳು.

ಮೊದಲನೆಯದಾಗಿ, ಫ್ಯಾಸಿಸ್ಟ್ ವಿರೋಧಿ ವಿಶ್ವ ಜನತೆಯ ಯುದ್ಧದಲ್ಲಿ ವಿಜಯ ಅಮೇರಿಕಾ ಬಿಟ್ಟು ಬೇರೆಲ್ಲಾ ಸಾಮ್ರಾಜ್ಯಶಾಹೀ ಶಕ್ತಿಗಳ ಪ್ರಾಬಲ್ಯವನ್ನು ಬುಡಮೇಲು ಮಾಡಿತು. ಎರಡನೆಯದಾಗಿ, ಸಮಾಜವಾದೀ ಸೋವಿಯೆತ್ ಒಕ್ಕೂಟ ಫ್ಯಾಸಿಸಂ ವಿರುದ್ಧ ವಿಜಯಿಯಾಯಿತು, ಮಾತ್ರವಲ್ಲ, ಆ ವಿಜಯದ ಮುಖ್ಯ ರಾಜಕೀಯ, ಸೈನಿಕ ಶಕ್ತಿಯಾಗಿ ಹೊರಹೊಮ್ಮಿ, ಒಂದು ಸಮಾಜವಾದೀ ಬಣ ಅಸ್ತಿತ್ವಕ್ಕೆ ಬಂದು ಸಾಮ್ರಾಜ್ಯಶಾಹಿಯ ಕುತಂತ್ರಗಳಿಗೆ ದೊಡ್ಡ ಅಡ್ಡಿಯಾಗಿ ಮೂಡಿ ಬಂತು. ಮೂರನೆಯದಾಗಿ, ಯುದ್ಧ ನಂತರದ ರಾಷ್ಟ್ರೀಯ ವಿಮೋಚನಾ ಹೋರಾಟಗಳ ಮಹಾಪೂರ ವಸಾಹತು ಪ್ರಭುತ್ವಗಳ ಸೇನೆಗಳನ್ನು ತಟ್ಟಿತು. ಭಾರತದಲ್ಲಿ ಅಝಾದ್ ಹಿಂದ್ ಸೇನೆಯ ಬಂಡಾಯ, ರಿನ್ ಬಂಡಾಯ ಇದಕ್ಕೆ ಉದಾಹರಣೆಗಳು.

ರಾಷ್ಟ್ರೀಯ ವಿಮೋಚನಾ ಹೋರಾಟಗಳ ಬೂರ್ಜ್ವಾ ನೇತೃತ್ವ ಹಾಗೂ ಬೂರ್ಜ್ವಾ ಚರಿತ್ರೆಗಾರರು ಕಮ್ಯುನಿಸ್ಟ್ ವಿರೋಧಿ ಪೂರ್ವಾಗ್ರಹಗಳಿಂದಾಗಿ ಈ ಅಂಶವನ್ನು ಮರೆಮಾಚುತ್ತಾರೆ. ಸಾಮ್ರಾಜ್ಯಶಾಹಿ ಮತ್ತು ಸಮಾಜವಾದೀ ಬಣಗಳ ನಡುವಿನ ವೈರುಧ್ಯದ ಸನ್ನಿವೇಶದಲ್ಲಿ ಸಮಾಜವಾದಿ ದೇಶಗಳಿಂದ ಹೆಚ್ಚೆಚ್ಚು ನೆರವು ಪಡೆದು ಸಾಮ್ರಾಜ್ಯಶಾಹಿಗಳಿಂದ ಚೌಕಾಸಿ ನಡೆಸಿ ಬಂಡವಾಳಶಾಹೀ ದಾರಿ ಹಿಡಿಯಲು ಅವರಿಗೆ ಸಾಧ್ಯವಾಯಿತು.

ಭಾರತದ ಸ್ವಾತಂತ್ರ್ಯದ ಸ್ವರೂಪ ಹಾಗೂ ಬೂರ್ಜ್ವಾ ಮುಖಂಡರ ಹೆಗ್ಗಳಿಕೆಗಳನ್ನು ವಿಮರ್ಶಿಸಲು ಕಾಂಗ್ರೆಸ್ ಪಕ್ಷ ಭಾರತದ ಬೂರ್ಜ್ವಾ ವರ್ಗದ ಪ್ರಮುಖ ಪಕ್ಷವಾಗಿ ಮೂಡಿಬಂದ ಚಾರಿತ್ರಿಕ ಹಿನ್ನೆಲೆಯನ್ನು ಪರಿಶೀಲಿಸಬೇಕು.

ಕಾಂಗ್ರೆಸ್ಸಿನಂತಹ ಸಂಘಟನೆಯ ಸ್ಥಾಪನೆ ಕೆಲವು ಮಹಾನ್ ಚಿಂತಕರ ಬುದ್ಧಿಮತ್ತೆಯ ಫಲವಲ್ಲ, ಬದಲಾಗಿ ಅದರ ಮೊದಲಿನ ಸುಮಾರು 50ವರ್ಷಗಳ ರಾಜಕೀಯ-ಸಾಂಸ್ಕೃತಿಕ ಆಂದೋಲನಗಳ ಫಲ.

ಸಿ. ಎಫ್. ಆಂಡ್ರೂರ್ರುಝ್ ಹಾಗೂ ನೀತಾ ಮುಖರ್ಜಿ ಬರೆದ "ಭಾರತದಲ್ಲಿ ಕಾಂಗ್ರೆಸ್ಸಿನ ಉದಯ ಮತ್ತು ಬೆಳವಣಿಗೆ" ಎಂಬ ಇಂಗ್ಲಿಷ್ ಗ್ರಂಥ ಓದಿದಾಗ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಮೂಲ ಬೆಳವಣಿಗೆ ಹಾಗೂ ವಿಕಾಸದ ಸ್ಫೂರ್ತಿ ಯಾವುದೇ ಸಂಪೂರ್ಣ "ಸ್ವದೇಶೀ ಚಿಂತನೆ"ಯಲ್ಲ, ಬದಲಾಗಿ ಪಶ್ಚಿಮದಿಂದ ಬಂದ ಸ್ವಾತಂತ್ರ್ಯ, ಸಮಾನತೆ ಮುಂತಾದ ವಿಚಾರಗಳು ಎಂಬುದು ಸ್ಪಷ್ಟವಾಗಿ ಕಾಣಬರುತ್ತದೆ. ಆದರೂ ಕಾಂಗ್ರೆಸ್ಸಿಗರು ಮಾತ್ರವೇ ಈ ದೇಶದ "ಮೌಲಿಕ ಚಿಂತಕರು." ಕಮ್ಯುನಿಸ್ಟರು ವಿದೇಶೀ ವಿಚಾರಗಳಿಂದ ಸ್ಫೂರ್ತಿ ಪಡೆಯುವವರು ಎಂಬ ಮಿಥ್ಯೆಯನ್ನು ಹರಡಿಸಲಾಗಿದೆ.

ಡಾ. ಪಟ್ಟಾಭಿಯವರ ಅಧಿಕೃತ ಕಾಂಗ್ರೆಸ್ ಇತಿಹಾಸದ ಮೊದಲ ವಾಕ್ಯ "ಕಾಂಗ್ರೆಸ್ಸಿನ ಇತಿಹಾಸ ನಿಜವಾಗಿ ಭಾರತದ ಸ್ವಾತಂತ್ರ್ಯದ ಇತಿಹಾಸ" ಎಂದು ಬೆನ್ನು ತಟ್ಟಿಕೊಳ್ಳುತ್ತದೆ. ಹಾಗಾದರೆ 1857–58 ರ ಪ್ರಥಮ ಸ್ವಾತಂತ್ರ್ಯ ಸಮರ ನಮ್ಮ ಸ್ವಾತಂತ್ರ್ಯ ಇತಿಹಾಸದ ಅಂಗವೇ ಅಲ್ಲವೆ? ಆಧುನಿಕ ಭಾರತದ ಸ್ಥಾಪಕನೆನಿಸಿಕೊಂಡ ರಾಜಾರಾಮ ಮೋಹನರಾಯ್ ಬ್ರಹ್ಮಸಮಾಜ, ಆರ್ಯ ಸಮಾಜ, ರಾಮಕೃಷ್ಣ ಮಿಶನ್ ಮುಂತಾದ ಪುನರುಜ್ಜೀವನ ಆಂದೋಲನಗಳು 1885 ರ

## ಕಾ. ಎಂ. ಬಸವಪೊನ್ನಯ್ಯ

ಮೊದಲು ಇನ್ನೂ ಹಲವಾರು ಸಂಘಟನೆಗಳ ಸ್ಥಾಪನೆ ಜನತೆಯಲ್ಲಿ ಉಂಟಾಗುತ್ತಿದ್ದ ಹೊಸ ಜಾಗೃತಿಯ ಲಕ್ಷಣಗಳು. ಸ್ವಾತಂತ್ರ್ಯ ಸಮರದ ಪರಿಶೀಲನೆಯಲ್ಲಿ ಇವನ್ನೆಲ್ಲ ನಿರ್ಲಕ್ಷ್ಯ ಮಾಡುವುದೆಂದರೆ ಭಾರತ ಸಂಗ್ರಾಮದ ಚಾರಿತ್ರಿಕ ವಿಕಾಸ ಹಾಗೂ ಸಾಮಾಜಿಕ-ಆರ್ಥಿಕ-ರಾಜಕೀಯ ಹಿನ್ನೆಲೆಯ ವಸ್ತುನಿಷ್ಠ ವಿಮರ್ಶೆಗೆ ಅಪಚಾರ ಬಗೆದಂತೆ.

'ಶತಮಾನಗಳ ಕಾಲ ಭಾರತ ರಾಷ್ಟ್ರ ವಿದೇಶೀ ಪ್ರಾಬಲ್ಯದಲ್ಲಿತ್ತು. ಕಾಂಗ್ರೆಸ್ ದೇಶವನ್ನು ಈ ದಾಸ್ಯದಿಂದ ಮುಕ್ತಗೊಳಿಸಲು ಪ್ರಯತ್ನಿಸಿತು' ಎನ್ನುತ್ತದೆ ಡಾ|| ಪಟ್ಟಾಭಿಯವರ ಇತಿಹಾಸದ ಎರಡನೇ ವಾಕ್ಯ. ಆದರೆ ಈ ಪರಿಕಲ್ಪನೆಯಲ್ಲೂ ಗಂಭೀರ ತಪ್ಪುಗಳಿವೆ. ಯಾಕೆಂದರೆ ಮಾರ್ಕ್ಸ್ ಹೇಳಿರುವಂತೆ ಬ್ರಿಟಿಶ್ ಸಾಮ್ರಾಜ್ಯಶಾಹಿಗಳ ಖಡ್ಗ ಸೃಷ್ಟಿಸಿದ ರಾಜಕೀಯ ಏಕತೆಗಿಂತ ಮೊದಲು ಭಾರತದ ಉಪಖಂಡ ಎಂದೂ ಒಂದು ಏಕೀಕೃತ ರಾಜಕೀಯ ಘಟಕ ಅಥವಾ ವೈಜ್ಞಾನಿಕ ಅರ್ಥದಲ್ಲಿ ಒಂದು 'ದೇಶ' ಆಗಿರಲೇ ಇಲ್ಲ. ಆದ್ದರಿಂದ ಭಾರತದ ಸಾಮ್ರಾಜ್ಯಶಾಹೀ-ವಿರೋಧಿ ಹೋರಾಟ ಅಥವಾ 'ರಾಷ್ಟ್ರೀಯ' ಆಂದೋಲನ ಆರಂಭವಾದದ್ದು ಬ್ರಿಟಿಶ್ ಸಾಮ್ರಾಜ್ಯಶಾಹಿಗಳ ಶೋಷಕ ಆಳ್ವಿಕೆಯ ಆರಂಭದ ನಂತರವೇ.

1885 ರಲ್ಲಿ ಕಾಂಗ್ರೆಸ್ಸಿನ ಜನ್ಮ ಮುಂತಾದ ಘಟನೆಗಳ ಅಂತರ್ರಾಷ್ಟ್ರೀಯ ಹಿನ್ನೆಲೆಯನ್ನೂ ಕಾಂಗ್ರೆಸ್ಸಿನ ಅಧಿಕೃತ ಇತಿಹಾಸಕಾರರು ವಿಶ್ಲೇಷಿಸುವುದಿಲ್ಲ.

ಭಾರತದ ಸಾಮ್ರಾಜ್ಯಶಾಹೀ-ವಿರೋಧಿ ಸಮರದ ಸ್ಥಾಪಕರಲ್ಲೊಬ್ಬರಾದ ಗೋಪಾಲ ಕೃಷ್ಣ ಗೋಖಲೆಯವರು 1913 ರಲ್ಲಿ ಹೀಗೆಂದಿದ್ದರು.— 'ಯಾವುದೇ ಭಾರತೀಯ ಆತ ಎ. ಓ. ಹ್ಯೂಮ್‌ರಂತಹ ವ್ಯಕ್ತಿತ್ವ ಹೊಂದಿದ್ದರೂ ಕೂಡಾ ಭಾರತ ರಾಷ್ಟ್ರೀಯ ಕಾಂಗ್ರೆಸ್ಸನ್ನು ಸ್ಥಾಪಿಸಲು ಸಾಧ್ಯವಿರಲಿಲ್ಲ. ಯಾಕೆಂದರೆ ಸರ್ಕಾರೀ ಅಧಿಕಾರಿಗಳು ಅದು ಅಸ್ತಿತ್ವಕ್ಕೆ ಬರದಂತೆ ನೋಡಿಕೊಳ್ಳುತ್ತಿದ್ದರು.'

ಗಾಂಧೀಜಿಯ ಸಹವರ್ತಿ ಆಂಡ್ರೂರ್ಸ್ ಕೂಡ ಮೇಲೆ ಹೇಳಿದ ತಮ್ಮ ಗ್ರಂಥದಲ್ಲಿ ಮಾಡಿರುವ ಈ ತೀಕ್ಷ್ಣ ಟಿಪ್ಪಣಿಯನ್ನು ನೋಡಿ.

'ಈ ಅಖಿಲ ಭಾರತ ಆಂದೋಲನಕ್ಕೆ ಸಮಯ ಮಾಗಿತ್ತು. ವಿದ್ಯಾವಂತ ವರ್ಗಗಳ ಬೆಂಬಲ ಪಡೆಯಬಹುದಾಗಿದ್ದ ಒಂದು ಕೃಷಿಕ್ರಾಂತಿಯ ಬದಲು, ಕಾಂಗ್ರೆಸ್ಸಿನ ಸ್ಥಾಪನೆ ಈ ವರ್ಗಗಳಿಗೆ ನವಭಾರತ ಕಟ್ಟುವ ಒಂದು ಪರ್ಯಾಯ ವೇದಿಕೆ ಒದಗಿಸಿತು.

ಸಿಮ್ಲಾದಲ್ಲಿ ಬ್ರಿಟಿಷ್ ಸರಕಾರದ ಅಧಿಕಾರಿಯಾಗಿದ್ದಾಗ ವ್ಯಾಪಕ ಅಸಂತೋಷದ ಸಿ.ಐ.ಡಿ. ವರದಿಗಳನ್ನು ನೋಡಿದ್ದ ಎ. ಓ. ಹ್ಯೂಮ್ ಕಾಂಗ್ರೆಸ್ಸಿನ ಸ್ಥಾಪನೆಗೆ ಪ್ರಯತ್ನಿಸಿದ ಹಿಂದಿನ ಉದ್ದೇಶ ಹೀಗಿತ್ತು. ಈ ರೀತಿ ಕಾಂಗ್ರೆಸ್ಸಿನ ಜನ್ಮ ಮತ್ತು ವಿಕಾಸದ ವಾಸ್ತವ ಸನ್ನಿವೇಶಗಳನ್ನು ಮರೆಮಾಚುವ ಬೂರ್ಜ್ವಾ ಇತಿಹಾಸಕಾರರು **1921, 1931, 1941 ಹಾಗೂ 1942 ರ ಸೀಮಿತ ಸಾಮೂಹಿಕ ಹೋರಾಟಗಳ ಬಗ್ಗೆಯಷ್ಟೇ ಹೇಳುತ್ತಾ, ಕಾಂಗ್ರೆಸ್ಸಿನ ಸಂಧಾನದ, ರಾಜಿಯ, ಕೇವಲ ಸುಧಾರಣಾವಾದೀ ಪಾತ್ರದ ಮೇಲೆ ಮುಸುಕೆಳೆಯಲು ಪ್ರಯತ್ನಿಸುತ್ತಾರೆ; ಕಾಂಗ್ರೆಸ್ಸು ಪಾಳೆಯಗಾರ, ಅರೆ ಪಾಳೆಯಗಾರಿ, ಭೂಮಾಲಿಕತ್ವ, ಶೋಷಣೆಗಳ ವಿರುದ್ಧ ಸಾಮೂಹಿಕ ಹೋರಾಟಗಳಿಗೆ, ವಿಶೇಷವಾಗಿ ರೈತಾಪಿ ಜನಸಮೂಹಗಳ ಹೋರಾಟಕ್ಕೆ, ವಿರುದ್ಧವಾಗಿತ್ತು ಎಂಬ ನಗ್ನಸತ್ಯವನ್ನು ಮರೆಮಾಚುತ್ತಾರೆ. ಕಾಂಗ್ರೆಸ್ಸು ನಿಜವಾಗಿ ಬೂರ್ಜ್ವಾ–ಭೂಮಾಲಕ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಿದ್ದ, ಹಿಂದೂ ಕೋಮುವಾದೀ ದೃಷ್ಟಿಕೋನದತ್ತ ವಾಲಿದ್ದ ಸಂಘಟನೆಯೆಂಬ ವಾಸ್ತವ ಸಂಗತಿಯನ್ನು ಮರೆಮಾಚುತ್ತಾರೆ.**

ಕಾಂಗ್ರೆಸ್ ಮುಖಂಡರು ತಾವು "ದರಿದ್ರ ನಾರಾಯಣ", "ರಾಮರಾಜ್ಯ", 'ಸಮಾನತಾವಾದ', "ಸಮಾಜವಾದ" ಪರವಹಿಸುವವರು ಎಂಬ ಗೋಸುಂಬಿತನದ ಘೋಷಣೆ ಹಾಕುತ್ತಾರೆ. ಪಟ್ಟಭದ್ರ ಹಿತಾಸಕ್ತಿಗಳ ಕೈಂಕರ್ಯ ಮಾಡುವುದು, ಇತ್ತ ಜನತಾ ಮಾನ್ಯರಿಗೆ ಟೊಳ್ಳು ಭರವಸೆಗಳ ರೊಟ್ಟಿ ತುಣುಕುಗಳನ್ನು ಎಸೆಯುವುದು, ರಾಜಕೀಯ ಅಧಿಕಾರದ ವರ್ಗಾವಣೆಯ ಮೊದಲು ಕೂಡ ಮತ್ತು ಆನಂತರ ಕೂಡ ಕಾಂಗ್ರೆಸ್ಸಿನ ಮುಖ್ಯ ಲಕ್ಷಣವಾಗಿ ಬಿಟ್ಟಿದೆ.

ಬ್ರಿಟೀಶರು ರಾಜಕೀಯ ಅಧಿಕಾರ ವರ್ಗಾಯಿಸಲು ಏಕೈಕ ಕಾರಣ ಕಾಂಗ್ರೆಸ್ 1942 ರ ಕ್ವಿಟ್‌ಇಂಡಿಯಾ ಚಳುವಳಿ ಮೂಲಕ ನೀಡಿದ "ಒದೆತ" ಎಂದು ತೋರಿಸಲು ಬೂರ್ಜ್ವಾ ಇತಿಹಾಸಕಾರರು ಪ್ರಯತ್ನಿಸುತ್ತಾರೆ. ಆದರೆ ಈ ನಡುವೆ ಬ್ರಿಟಿಶ್ ಸರ್ಕಾರ ಮತ್ತು ಕಾಂಗ್ರೆಸ್ ಮಧ್ಯೆ "ಶಾಂತಿಯುತ ರಾಜಿ"ಗಾಗಿ ನಡೆದ ಪತ್ರ ವ್ಯವಹಾರಗಳ ಎರಡು ದೊಡ್ಡ ಸಂಪುಟಗಳೇ ಇವೆ ಎಂಬುದನ್ನು ಅವರು ಬೇಕೆಂದೇ ಮರೆತು ಬಿಡುತ್ತಾರೆ.

1942 ರಲ್ಲಿ "ಮಾಡು ಇಲ್ಲವೆ ಮಡಿ" ಎಂಬ ಘೋಷಣೆ ನೀಡಿದ ಗಾಂಧೀಜಿ 1944 ರ ಜುಲೈ 27 ರಂದು ವೈಸರಾಯನಿಗೆ ಬರೆದ ಪತ್ರದಲ್ಲಿ "ನಾನು ನಿಮ್ಮ ಕೈಯಲ್ಲಿದ್ದೇನೆ. ಒಂದು ಗೌರವಯುತ ಇತ್ಯರ್ಥದ ಆಶಾಕಿರಣ ಎಷ್ಟೇ ಕ್ಷೀಣವಾಗಿದ್ದರೂ ಅದುವರೆಗೆ ನಾನು ನಿಮ್ಮ ಬಾಗಿಲು ತಟ್ಟುತ್ತಲೇ ಇರುತ್ತೇನೆ" ಎಂದರು. 1942 ರಲ್ಲಿ ಅವರು ಜನ ವಿರೋಧಿ, ಸಾಮ್ರಾಜ್ಯಶಾಹೀ ಪರ ಎಂದಿದ್ದ ಮಹಾಯುದ್ಧಕ್ಕೆ 1944 ರ ಹೊತ್ತಿಗೆ ಸಹಕಾರ ನೀಡಲು ತಾವು ಸಿದ್ಧ ಎಂದು ಕಾಂಗ್ರೆಸ್ಸಿಗರ ಪರವಾಗಿ ಗಾಂಧೀಜಿ ವೈಸರಾಯಿಗೆ ಭರವಸೆ ನೀಡುತ್ತಾರೆ ! ಇಂತಹ ಎಷ್ಟೋ ಉದಾಹರಣೆಗಳನ್ನು ನಾವು ಕೊಡಬಹುದು.

ರಾಜಕೀಯ ಅಧಿಕಾರದ ಹುಚ್ಚಿನಿಂದಾಗಿ ಕಾಂಗ್ರೆಸ್ ಮುಖಂಡತ್ವ ಭಾರತದ ವಿಭಜನೆಯ ಬೆಲೆ ತೆರಲೂ ಸಿದ್ಧವಾಯಿತು. ಶಾಂತಿಯುತ ಎಂದು ಅವರು ಡಂಗುರ ಸಾರುವ ರಾಜಕೀಯ ಅಧಿಕಾರ ವರ್ಗಾವಣೆ ರೂಪಗೊಂಡ ಬಗೆಯಿದು. ಈ ವರ್ಗಾವಣೆ ಯಾವ ರೀತಿಯಲ್ಲೂ ಶಾಂತಿಯುತವಾಗಿರಲಿಲ್ಲ. ಭಯಾನಕ ಕೋಮು ಹಿಂಸಾಚಾರದಲ್ಲಿ ಲಕ್ಷಾಂತರ ಮಂದಿ ನಾಶವಾದರು, ಮಿಲಿಯಾಂತರ ಮಂದಿ "ನಿರಾಶ್ರಿತ"ರಾದರು.

ಈ "ಶಾಂತಿಯುತ ರಾಜಕೀಯ ಅಧಿಕಾರ ವರ್ಗಾವಣೆ" ಸಾಧ್ಯವಾದದ್ದು ಕೇವಲ ಅಥವಾ ಮುಖ್ಯವಾಗಿ ಶಾಂತಿಯುತ ಸತ್ಯಾಗ್ರಹ ವಿಧಾನದಿಂದ ಎಂದು ಹೇಳಲು ಸಾಧ್ಯವಿಲ್ಲ. ವಿಶ್ವ ಫ್ಯಾಸಿಸಂನ ರಕ್ಕಸನನ್ನು ನಾಶಮಾಡಲು ಸಾಮ್ರಾಜ್ಯಶಾಹಿಯನ್ನು ಬುಡಮೇಲು ಮಾಡಲು ಕೋಟಿಗಟ್ಟಲೆ ಮಂದಿ ಬಸಿದ ರಕ್ತ, ನೀಡಿದ ಬಲಿದಾನವನ್ನು ನಿರ್ಲಕ್ಷಿಸುವುದು ಸತ್ಯಕ್ಕೆ ಬಗೆಯುವ ಅಪಚಾರ. ಇವಿಲ್ಲದಿದ್ದರೆ ಈ ಶಾಂತಿಯುತ ವರ್ಗಾವಣೆ ಕೇವಲ ಹಗಲುಗನಸಾಗೇ ಉಳಿಯುತ್ತಿತ್ತು.

'ಶಾಂತಿಯುತ ಅಧಿಕಾರ ವರ್ಗಾವಣೆ' ಮೂಲಕ ಹೀಗೆ ಪಡೆದ ರಾಷ್ಟ್ರೀಯ ಸ್ವಾತಂತ್ರ್ಯದಲ್ಲಿ ಹಿಂದೆ ಭಾರತವನ್ನು ದುರ್ಬಲವಾಗಿಸಿ, ಪ್ರತಿಯೊಬ್ಬ ಆಕ್ರಮಣಕಾರನ ಬೇಟೆ ಪಶುವಾಗುವಂತೆ ಮಾಡಿದ ಎಲ್ಲಾ ಕೆಟ್ಟ ದೌರ್ಬಲ್ಯಗಳು ಅಡಕವಾಗಿದ್ದವು. ವಿಚ್ಛಿದ್ರಕಾರೀ, ಕೋಮುವಾದಿ ಹಾಗೂ ಜಾತಿವಾದಿ ಶಕ್ತಿಗಳು ಅಮೆರಿಕನ್ ಮತ್ತು ಇತರ ಸಾಮ್ರಾಜ್ಯಶಾಹಿಗಳಿಗೆ ದೇಶವನ್ನು ಅಸ್ಥಿರಗೊಳಿಸುವ ಪಿತೂರಿ ನಡೆಸಲು ಫಲವತ್ತಾದ ಮಣ್ಣು ಒದಗಿಸುತ್ತಿವೆ. ಕೇಂದ್ರ-ರಾಜ್ಯ ಸಂಬಂಧಗಳು ಉಲ್ಬಣಗೊಳ್ಳುತ್ತಿವೆ, ಕಾಂಗ್ರೆಸ್ ಕೇಂದ್ರ ಏಕಘಟಕ, ಸರ್ವಾಧಿಕಾರೀ ಆಡಳಿತ ಸ್ಥಾಪಿಸಲು ಯತ್ನಿಸುತ್ತಿದೆ.

ಈಗ ಐಕ್ಯತೆ, ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಮತ್ತು ಸಮಾಜವಾದದ ಸಮರದ ನೇತೃತ್ವ ವಹಿಸುವ ಕೆಲಸವನ್ನು ಕಾರ್ಮಿಕ ವರ್ಗ ಮತ್ತು ಆದರ ಕಮ್ಯುನಿಸ್ಟ್ ಪಕ್ಷವೇ ಮಾಡಬೇಕು. ಭಾರತ ಉಪಖಂಡವನ್ನು ಅಮೆರಿಕಾ ನೇತೃತ್ವದ ಸಾಮ್ರಾಜ್ಯಶಾಹೀ ಬಣದ ಪಿತೂರಿಗಳಿಂದ ರಕ್ಷಿಸುವುದು ಬೇರೆ ಯಾವುದೇ ವರ್ಗದಿಂದ, ಬೇರೆ ಯಾವುದೇ ದಾರಿಯಿಂದ ಸಾಧ್ಯವಿಲ್ಲ.

### ರೈತ ಮತ್ತು ಕೃಷಿ ಕೂಲಿಕಾರರ ಸೆಪ್ಟೆಂಬರ್ ಚಳುವಳಿಯತ್ತ

# ನಾವೇಕೆ ಲಾಭದಾಯಕ ಬೆಲೆಗಳಿಗೆ ಒತ್ತಾಯಿಸುತ್ತೇವೆ?

**ರೈತ ಚಳುವಳಿಗೆ—"ಫಸಲಿಗೆ ಲಾಭದಾಯಕ ಬೆಲೆಗಳಿಗಾಗಿ ಒತ್ತಾಯ" ಒಂದು—ಪ್ರಮುಖ ಬೇಡಿಕೆಯಾಗಿದೆ. ಹೊಸ ಕೃಷಿ ತಂತ್ರಜ್ಞಾನದ ಸಂದರ್ಭದಲ್ಲಿ ಇದು ಇನ್ನಷ್ಟು ಸಮಯೋಚಿತವಾಗಿದೆ.**

ಇಂದಿನ ರೈತ ಸಾಂಪ್ರದಾಯಿಕ ಕೃಷಿಗೆ ಹೊರತಾಗಿ–ಕೃಷಿ ಸಂಬಂಧ ಸರಕುಗಳ ಮೇಲೆ ಸಾಕಷ್ಟು ಖರ್ಚು ಮಾಡುತ್ತಾನೆ. ಅದು ಉತ್ತಮ ತಳಿ ಬೀಜ ಕೊಳ್ಳಲು ಇರಬಹುದು. ಗೊಬ್ಬರ, ಕೀಟನಾಶಕಗಳಿಗಿರಬಹುದು. ಕೃಷಿ ಯಂತ್ರಗಳಾದ ಟ್ರಾಕ್ಟರುಗಳು, ಪಂಪುಗಳ ಉಪಯೋಗಕ್ಕಿರಬಹುದು. ಹೆಚ್ಚಾಗಿ ಇವೆಲ್ಲವನ್ನು ಕೊಳ್ಳಲು ಬ್ಯಾಂಕ್ ಸಾಲ ತೆಗೆದುಕೊಳ್ಳಬೇಕಾಗುತ್ತದೆ.

ಆದ್ದರಿಂದ ಫಸಲಿಗೆ ಸಿಗುವ ಬೆಲೆಗೂ, ಕೃಷಿಗೆ ಅಗತ್ಯ ಸರಕುಗಳ ಬೆಲೆಗೂ ಸಂಬಂಧ ಇರಬೇಕಾಗುತ್ತದೆ. ಇದಲ್ಲದೆ ಕೃಷಿಯಲ್ಲಿ 4–5 ವರ್ಷಗಳಿಗೊಮ್ಮೆ ಇಡೀ ಫಸಲು ನಷ್ಟವಾಗುವ ಅಪಾಯವಿದ್ದೇ ಇರುತ್ತದೆ. ಇಂತಹ ಕಷ್ಟದ ವರ್ಷಗಳ ನಷ್ಟವನ್ನು ಫಸಲಿನ ಬೆಲೆಗಳು ತುಂಬಿಕೊಡಬೇಕು. ಅಲ್ಲದೆ ಬೇರೆ ಯಾವುದೇ ಆರ್ಥಿಕ ಚಟುವಟಿಕೆಯಂತೆ ಹಾಕಿದ ಬಂಡವಾಳ ಮತ್ತು ಶ್ರಮಕ್ಕೆ ತಕ್ಕ ಪ್ರತಿಫಲ ದೊರೆತರೆ ಮಾತ್ರ ರೈತ ಭೂಮಿ ಅಭಿವೃದ್ಧಿಗೆ ತೊಡಗುತ್ತಾನೆ. ಇಂತಹ ಪ್ರೋತ್ಸಾಹವಿಲ್ಲದೆ ಜನರ ಅಗತ್ಯಕ್ಕೆ ತಕ್ಕ ಕ್ರಮ ಬೆಳೆಯಲಾರದು.

ನಮ್ಮ ಕೃಷಿ ಯೋಜನಾಕಾರರ ಅಲ್ಪ ತೃಪ್ತಿ ಮನೋಭಾವದಿಂದಾಗಿ ಬರಿಯ ಮೂರನೆಯ ಒಂದು ಕೃಷಿ ಯೋಗ್ಯ ಜಮೀನಿಗೆ ನೀರಾವರಿ ಸೌಲಭ್ಯವಿದೆ. ನಮ್ಮ ಕೃಷಿ ಉತ್ಪಾದಕತೆ ಅಂತರ್‌ರಾಷ್ಟ್ರೀಯ ಮಾನಕ್ಕೆ ಹೋಲಿಸಿದರೆ ಬಹಳ ಕಡಿಮೆ ಇದೆ. ಉದಾ– ಭಾರತದಲ್ಲಿ ಪ್ರತಿ ಹೆಕ್ಟೇರಿಗೆ 2183 ಕಿಲೋ ಅಕ್ಕಿ ಉತ್ಪಾದನೆಯಾದರೆ, ಜಪಾನಿನದ್ದು 5701 ಕಿಲೋ, ಚೀನಾದ್ದು 5067 ಕಿಲೋ, ಈಜಿಪ್ಟಿನದ್ದು 5768 ಕಿಲೋ. ಇದೇ ಕಥೆ ಗೋಧಿಯ ಬಗೆಗೂ ಇದೆ. ಹಸಿರು ಕ್ರಾಂತಿ ಸಹ ಉತ್ಪಾದಕತೆಯನ್ನು ಹೆಚ್ಚಿಸುವುದರಲ್ಲಿ ಬಹಳ ದೊಡ್ಡ ಪಾತ್ರ ವಹಿಸಿಲ್ಲ. ಲಾಭದಾಯಕ ಬೆಲೆಗಳು ಉತ್ಪಾದಕತೆ ಹೆಚ್ಚಿಸಲು ಪರಿಣಾಮಕಾರಿಯಾಗಬಲ್ಲವು.

## ಮಾತಿನಲ್ಲೊಂದು ಕೃತಿಯಲ್ಲೊಂದು

ಆದರೆ ಫಸಲಿಗೆ ಲಾಭದಾಯಕ ಬೆಲೆಗೆ ಸರ್ಕಾರದ ವಿರೋಧವಿದೆ ಎಂದಲ್ಲ. ಕನಿಷ್ಟ ಪಕ್ಷ ಮಾತಿನಲ್ಲಿ "ಕೃಷಿ ಬೆಲೆ ನೀತಿ-ಒಂದು ದೂರಗಾಮಿ ಕಣ್ನೋಟ" ಎಂಬ ಕೃಷಿ ಖಾತೆಯ ದಸ್ತಾವೇಜಿನಲ್ಲಿ ರೈತರಿಗೆ ಲಾಭದಾಯಕ ಭದ್ರ ಮಾರುಕಟ್ಟೆ ಬೆಲೆಗಳನ್ನು ಕೊಡುವುದು ಸರ್ಕಾರದ ಕೃಷಿ ನೀತಿಯ ಮೂರು ಮುಖ್ಯ ಭಾಗಗಳಲ್ಲೊಂದು ಎನ್ನಲಾಗಿದೆ. ಕೃಷಿ ವೆಚ್ಚ ಮತ್ತು ಬೆಲೆಗಳ ಕಮಿಶನ್ (CACP) ಅಧ್ಯಯನಕ್ಕಾಗಿ ಮೊದಲ ಅಂಶವೆಂದು ಕೃಷಿ ಉತ್ಪಾದನೆಗೆ ಪ್ರೋತ್ಸಾಹಕರ ಬೆಲೆಗಳನ್ನು ಗುರುತಿಸಲಾಗಿದೆ. ಪ್ರೋತ್ಸಾಹಕಾರಿ ಬೆಲೆಗಳಿಗೆ ರೈತ ಉತ್ಪಾದನೆ ಹೆಚ್ಚಿಸುವುದರ ಮೂಲಕ ಉತ್ಸಾಹದಿಂದ ಪ್ರತಿಕ್ರಿಯಿಸುತ್ತಾನೆ ಎಂಬ ಅಂಶವನ್ನು ಕಬ್ಬಿನ ಬೆಳೆಗಾರರ ಬಗ್ಗೆ 1986-87 ಆರ್ಥಿಕ ಸಮೀಕ್ಷೆ ಗುರುತಿಸಿದೆ. ಆದರೆ ಈ ಸದುದ್ದೇಶ ಕೃತಿಗೆ ಇಳಿದಿದೆಯೇ ಎಂಬುದು ಪರೀಕ್ಷಿಸುವುದು ಮುಖ್ಯ.

ಎರಡು ರೀತಿಯ ಸರ್ಕಾರಿ ಸಂಸ್ಥೆಗಳು ರೈತನಿಗೆ ಲಾಭದಾಯಕ ಬೆಲೆ ಸಿಗುವಂತೆ ಮಾಡುವ ಜವಾಬ್ದಾರಿ ಹೊಂದಿವೆ. ಮೊದಲನೆಯದು ಕೃಷಿ ಬೆಲೆ ಮತ್ತು ವೆಚ್ಚಗಳ ಕಮಿಶನ್ 1965 ರಿಂದ ಅಸ್ತಿತ್ವದಲ್ಲಿದೆ. ಈ ಕಮಿಶನ್ ಬೇರೆ ಬೇರೆ ಬೆಳೆಗಳಿಗೆ ಖರೀದಿ ಬೆಲೆಗಳನ್ನು ನಿರ್ಧರಿಸಿ, ಮಾರುಕಟ್ಟೆಯಲ್ಲಿ ಬೆಲೆ ಇದಕ್ಕಿಂತ ಕೆಳಗೆ ಹೋಗದಂತೆ ನೋಡಿಕೊಳ್ಳಬೇಕು. ಅಲ್ಲದೆ ಬೇರೆ ಬೇರೆ ಬೆಳೆಗಳಿಗೆತಕ್ಕ ಬೆಲೆಗಳನ್ನು ನಿರ್ಧರಿಸುವುದರ ಮೂಲಕ ರಾಷ್ಟ್ರೀಯ ಅವಶ್ಯಕತೆಯ ಪ್ರಕಾರ ಯಾವ ಯಾವ ಬೆಳೆ ಎಷ್ಟೆಷ್ಟು ಪ್ರಮಾಣದಲ್ಲಿ ಬೆಳೆಯಬೇಕೆಂಬುದನ್ನು ಪರೋಕ್ಷವಾಗಿ ನಿಯಂತ್ರಿಸಬೇಕು.

ಎರಡನೆಯ ರೀತಿಯ ಸಂಸ್ಥೆಗಳು ಭಾರತದ ಆಹಾರ ಕಾರ್ಪೊರೇಷನ್ (FCI), ಭಾರತದ ಸಣಬು ಕಾರ್ಪೋರೇಷನ್ (JCI), ಭಾರತದ ಹತ್ತಿ ಕಾರ್ಪೋರೇಷನ್ (CCI), NAFEED ಮುಂತಾದವು. ಇವು ನೇರವಾಗಿ ರೈತನ ಫಸಲು ನಿಗದಿತ ಬೆಲೆಗೆ ಖರೀದಿ ಮಾಡುವ ಮೂಲಕ ಕೆಲಸ ನಿರ್ವಹಿಸಬೇಕು. ಆಹಾರ ಬೆಳೆಗಳನ್ನು ಖರೀದಿ ಮಾಡಿ ಸಾರ್ವಜನಿಕ ವಿತರಣ ವ್ಯವಸ್ಥೆಯ ಮೂಲಕ ಮತ್ತು ಬಡತನ ನಿವಾರಣಾ ಕಾರ್ಯಕ್ರಮಗಳಿಗೆ ಇವನ್ನು ಸರಬರಾಜು ಮಾಡಬೇಕು. ಸಣಬು, ಹತ್ತಿಯಂತಹ ವಾಣಿಜ್ಯ ಬೆಳೆಗಳನ್ನು ಖರೀದಿ ಮಾಡಿ ಕೈಗಾರಿಕೆಗಳಿಗೆ ಈ ಸಂಸ್ಥೆಗಳು ಮಾರುತ್ತವೆ.

ಆದರೆ ನಿಜವಾದ ಸ್ಥಿತಿ ಏನು ? ಇಡೀ ಕಾರ್ಯಾಚರಣೆ ರೈತನಿಗೆ ಫಲಕಾರಿಯಾಗುವ ರೀತಿಯಲ್ಲಿ ನಡೆಯುವುದಿಲ್ಲ, ಬೆಲೆಗಳು ಕೃಷಿ ಅವಧಿಗೆ ಮುಂಚಿತವಾಗಿ ನಿರ್ಧರಿಸಲ್ಪಡುವುದಿಲ್ಲ. ಆದ್ದರಿಂದ ರೈತನಿಗೆ ಇವು ಯಾವ ಬೆಳೆ ಹಾಕಬೇಕು ಎಂದು ನಿರ್ಧರಿಸುವುದರಲ್ಲಿ ಮಾರ್ಗದರ್ಶಿಯಾಗುವುದಿಲ್ಲ. ವಿಳಂಬದಿಂದ ನಿರ್ಧರಿಸುವ ಬೆಲೆಗಳು ವರ್ಷಕ್ಕೆ ಯಾಂತ್ರಿಕವಾಗಿ ಕಾಟಾಚಾರಕ್ಕೋ ಎಂಬಂತೆ 3–5 ರೂ. ರಷ್ಟು ಹೆಚ್ಚಿಸಲ್ಪಡುತ್ತವೆ. ಇದು ಏರುತ್ತಿರುವ ಕೃಷಿ ಅಗತ್ಯ ಸರಕುಗಳ ಬೆಲೆಗೆ ತಕ್ಕುದಾಗಿರುವುದಿಲ್ಲ. (ಗೊಬ್ಬರ, ಕೀಟನಾಶಕ ಡೀಸೆಲ್, ವಿದ್ಯುತ್ ಇತ್ಯಾದಿ) ಮಾತ್ರವಲ್ಲ ರೈತ ಬಳಕೆದಾರನಾಗಿ ತೆರಬೇಕಾದ ಕೈಗಾರಿಕಾ ಉತ್ಪನ್ನಗಳ (ಸೋಪು, ಬಟ್ಟೆ, ಸೀಮೆಎಣ್ಣೆ ಇತ್ಯಾದಿ) ಬೆಲೆಯನ್ನು ಸರಿದೂಗಿರುವುದಿಲ್ಲ. ಇದರಿಂದಾಗಿ ರೈತನ ಆರ್ಥಿಕ ಮಟ್ಟ ಕುಸಿಯುತ್ತಾ ಹೋಗುತ್ತದೆ. ಈ ಲಾಭದಾಯಕವಲ್ಲದ ಬೆಲೆಗಳಲ್ಲೂ ಸರ್ಕಾರಿ ಸಂಸ್ಥೆಗಳು ಸರಿಯಾದ ಸಮಯಕ್ಕೆ (ಅಂದರೆ ಬೆಳೆಗಳು ಕಟಾವಾಗುವ ಹೊತ್ತಿಗೆ ಸರಿಯಾಗಿ) ಕೊಳ್ಳುವುದಿಲ್ಲ. ರೈತನಿಗೆ ತನ್ನ ಬೆಳೆಗಳನ್ನು ಶೇಖರಿಸಿ ನಿಗದಿತ ಬೆಲೆಗೆ ಕಾಯುವ ಚೈತನ್ಯವಿಲ್ಲದ್ದರಿಂದ ಮಧ್ಯವರ್ತಿಕ ಕಾಳ ಸಂತೆಕೋರರಿಗೆ ಕಡಿಮೆ ಬೆಲೆಗೆ ಮಾರಬೇಕಾಗುತ್ತದೆ.

## ಅವೈಜ್ಞಾನಿಕ ಬೆಲೆ ನಿರ್ಧಾರ

ಕೃಷಿ ಬೆಲೆ ಕಮಿಶನ್ (ಸಿ.ಎ.ಸಿ.ಪಿ.) ಕೃಷಿ ಉತ್ಪನ್ನಗಳಿಗೆ ಬೆಲೆ ನಿರ್ಧಾರ ಮಾಡುವುದಕ್ಕೆ ಯಾವುದೇ ವೈಜ್ಞಾನಿಕ ಮಾನದಂಡ, ವಿಧಾನವನ್ನು ಉಪಯೋಗಿಸುವುದಿಲ್ಲ. ಬೆಲೆಗಳ ಬಗೆಗಿನ ಸರ್ಕಾರಿ ಅಂಕಿ ಸಂಖ್ಯೆಗಳನ್ನೇ ಕಮಿಶನ್ ಸಂಶಯದಿಂದ ನೋಡಿದೆ, ಕಳೆದ ವರ್ಷದ ವರದಿಯಲ್ಲಿ. ಆದರೆ ಒಂದು ಮಾತ್ರ ಸತ್ಯವಾಗಿದೆ. ಕೃಷಿ–ಅಗತ್ಯ ಸರಕುಗಳ ಬೆಲೆ ಮತ್ತು ಬಳಕೆ ವಸ್ತುಗಳ ಬೆಲೆ ಹೆಚ್ಚುತ್ತಿರುವ ದರಕ್ಕಿಂತ ಕೃಷಿ–ಉತ್ಪನ್ನಗಳ ಬೆಲೆ ಹೆಚ್ಚಳ ಎಷ್ಟೋ ಕಡಿಮೆ ಇದೆ.

ಉದಾಹರಣೆಗೆ 1987–88 ಬೆಲೆ ಸೂಚ್ಯಂಕ ಶೇಕಡಾ 9.8 ರಷ್ಟು ಏರಿತು. ಬಳಕೆದಾರ ಧಾನ್ಯಗಳಿಗೆ ತೆರಬೇಕಾದ ಬೆಲೆ ಶೇಕಡಾ 11.46 ರಷ್ಟು ಏರಿತು. ಆದರೆ ಭತ್ತದ ಸರ್ಕಾರಿ ಖರೀದಿ ಬೆಲೆ ಕೇವಲ ಶೇಕಡಾ 3ರಷ್ಟು ಏರಿದರೆ, ಗೋಧಿಯದ್ದು ಶೇ. 2.5 ರಷ್ಟು ಏರಿತಷ್ಟೆ. ಇದು ಬರೇ ಈ ವರ್ಷದ ಕಥೆ ಅಲ್ಲ. ಪ್ರತಿ ವರ್ಷವೂ ಇದೇ ಗೋಳು.

ಈ ಸಂದರ್ಭದಲ್ಲಿ ಮೇಲೆ ಹೇಳಿದ 'ದೂರಗಾಮಿ ಕಣ್ನೋಟ'ದ ದಸ್ತಾವೇಜು ಏನು ಹೇಳುತ್ತದೆ ಎಂಬುದು ತಿಳಿಯಬೇಕು. ಈ ದಸ್ತಾವೇಜು ಅದರ ಹೆಸರು ಹೇಳುವಂತೆ ಯಾವುದೇ 'ಕಣ್ನೋಟ' ಕೊಡುವಂತೆ ಕಂಡು ಬರುವುದಿಲ್ಲ. ಸರ್ಕಾರದ ಇತ್ತೀಚಿನ ಕೆಲವು ನೀತಿಗಳಿಂದ ಅಸಹಾಯಕ್ಕೊಳಗಾಗಿರುವ ಎರಡು ಬೆಳೆಗಳ ಬಗ್ಗೆ- ಹತ್ತಿ ಮತ್ತು ಸೆಣಬು–ಯಾವ ಪ್ರಸ್ತಾಪವಿಲ್ಲ. ಅಲ್ಲದೆ ಈ ದಸ್ತಾವೇಜು ದೇಶ ಆಹಾರ ಬೆಳೆಗಳಲ್ಲಿ ಸ್ವಯಂ-ಪರಿಪೂರ್ಣತೆ ಸಾಧಿಸಿದೆ ಎಂದು ಬೆನ್ನು ತಟ್ಟಿಕೊಂಡಿದೆ. ಇನ್ನೂ ಮುಂದುವರಿದು 60ರ ದಶಕದಲ್ಲಿ ಆಹಾರ ಧಾನ್ಯಗಳ ಬೆಳೆಗೆ ತಕ್ಕುದಾದ 'ಬೆಲೆಯ ಪರಿಸರ' ನಿರ್ಮಾಣ ಮಾಡಬೇಕಾಗಿತ್ತು. ಈಗಿನ ಸ್ವಯಂ-ಪರಿಪೂರ್ಣತೆಯ ಕಾಲಾವಧಿಯಲ್ಲಿ ಇದು ಬೇಕಾಗಿಲ್ಲ ಎಂದಿದೆ !

## ಸಬ್ಸಿಡಿ ಖೋತಾ

ದಸ್ತಾವೇಜು ಗೊಬ್ಬರ ಸಬ್ಸಿಡಿ ಏರುತ್ತಿರುವ ಬಗ್ಗೆ ತನ್ನ ಕಳವಳ ವ್ಯಕ್ತಪಡಿಸಿದೆ. ಅದರ ಪ್ರಕಾರ ಈ ಸಬ್ಸಿಡಿ ಬೆಳವಣಿಗೆ ಯೋಜನೆಗಳ ಕಡಿತಕ್ಕೆ ಮತ್ತು ಬಜೆಟ್ ಖೋತಾಕ್ಕೆ ಕಾರಣವಾಗಬಲ್ಲುದಂತೆ. ಆದ್ದರಿಂದ ರೈತ ಗೊಬ್ಬರ, ನೀರಾವರಿ ವಿದ್ಯುತ್ ಮುಂತಾದವುಗಳಿಗೆ 'ನೈಜ ಬೆಲೆ' ಕೊಡಲು ತಯಾರಾಗಬೇಕಂತೆ. ಈ ದೂರಗಾಮಿ ಕಣ್ನೋಟ'ದ ಪ್ರಕಾರ ರೈತನಿಗೆ ಲಾಭದಾಯಕ ಬೆಲೆ ನಿಗದಿ ಮಾಡುವ ಅವಶ್ಯಕತೆ ಇಲ್ಲ. ಈಗ ಕೊಡುತ್ತಿರುವ ಸಬ್ಸಿಡಿಗಳನ್ನೂ ಖೋತಾ ಮಾಡಬೇಕು. ಮಾತ್ರವಲ್ಲ ಈ ರೀತಿ ಏರುವ ಉತ್ಪಾದನಾ ವೆಚ್ಚಗಳನ್ನು ರೈತ ತನ್ನ ಉತ್ಪನ್ನಗಳ ಏರಿಸಿ ಭರ್ತಿಮಾಡಲಾರದಂತೆ ಬರಿಯ ಉತ್ಪಾದಕತೆ ಹೆಚ್ಚಿಸಿ ಭರ್ತಿ ಮಾಡಬೇಕಂತೆ. ಹೇಗಿದೆ ಅಷ್ಟೇನೂ ದೂರಗಾಮಿಯಲ್ಲದ ಈ ಕಣ್ನೋಟ !

ಅಲ್ಲದೆ ದಸ್ತಾವೇಜಿನುದ್ದಕ್ಕೂ ಈಗಾಗಲೇ ಸರ್ಕಾರ ಲಾಭದಾಯಕ ಬೆಲೆಗಳನ್ನು ನಿಗದಿ ಪಡಿಸಿ ಜಾರಿ ಮಾಡಲು ಅದ್ಭುತ ವ್ಯವಸ್ಥೆ ನಿರ್ಮಿಸಿದೆಯೇನೋ ಎಂಬಂತೆ ವರ್ಣಿಸಲಾಗಿದೆ, ಆದರೆ ಈ ದಸ್ತಾವೇಜು ಬರೆದು ಒಂದು ವರ್ಷದೊಳಗೆ 10 ಲಕ್ಷ ಟನ್ನು ಆಹಾರ ಆಮದು ಮಾಡಬೇಕಾಯಿತು. ಅಲ್ಲದೆ ರೈತರ ಅತೃಪ್ತಿ ಎದುರಿಸಲಾಗಿದೆ. ಗೊಬ್ಬರ ಸಬ್ಸಿಡಿ ಏರಿಸಬೇಕಾಯಿತು ಎಂಬುದು ಇಂತಹ ದಸ್ತಾವೇಜುಗಳ 'ದೂರಗಾಮಿ'ತನವನ್ನು ಬಯಲು ಪಡಿಸುತ್ತದೆ.

### ಕೃಷಿ ಬೆಲೆಗಳ ಬಗ್ಗೆ ನಮ್ಮ ಪ್ರಮುಖ ಬೇಡಿಕೆಗಳು

1 ಕೃಷಿ ಬೆಲೆ ನಿಗದಿ ಮಾಡುವಾಗ ಕೃಷಿಗೆ ಅಗತ್ಯ ಸರಕುಗಳ (ಗೊಬ್ಬರ, ವಿದ್ಯುತ್, ನೀರಾವರಿ ಇತ್ಯಾದಿ) ಬೆಲೆ ಏರಿಕೆಯನ್ನು ಭರ್ತಿಮಾಡಬೇಕು.

2 ಕೃಷಿ ಬೆಲೆ ಸಗಟು ಬೆಲೆ ಸೂಚ್ಯಂಕವನ್ನು ಭರ್ತಿ ಮಾಡುವಂತಿರಬೇಕು. ಕೃಷಿಯೇತರ ಸರಕುಗಳ ಬೆಲೆಗಳ ಜತೆ ಕೃಷಿ ಬೆಲೆ ಏರಬೇಕು.

3 ಕೃಷಿ ಉತ್ಪನ್ನಗಳ ಖರೀದಿ ಸಮಯಕ್ಕೆ ಸರಿಯಾಗಿ ನಡೆಯುವಂತೆ ಸರ್ಕಾರಿ ಸಂಸ್ಥೆಗಳನ್ನು ಚುರುಕುಗೊಳಿಸಬೇಕು. ರೈತ ನಿರ್ವಾಹವಿಲ್ಲದೆ ಮಧ್ಯವರ್ತಿಗಳಿಗೆ ಮಾರಾಟ ಮಾಡುವುದನ್ನು ತಡೆಯುವುದು ಇದರ ಉದ್ದೇಶವಾಗಬೇಕು.

4 ಇಂತಹ ಖರೀದಿಗೆ ತಕ್ಕ ದಾಸ್ತಾನು ಮತ್ತು ಹಣ ವ್ಯವಸ್ಥೆ ಮಾಡಬೇಕು.

5 ಹದಿನಾಲ್ಕು ಜೀವನಾವಶ್ಯಕ ಸಾಮಗ್ರಿಗಳನ್ನು ದೇಶದಾದ್ಯಂತ ನ್ಯಾಯಯುತ ಸಬ್ಸಿಡಿ ಕೊಟ್ಟ ಬೆಲೆಗೆ ಪರಿಣಾಮಕಾರಿಯಾಗಿ ವಿತರಿಸಲು ಕೇಂದ್ರ ಸರ್ಕಾರ ವ್ಯವಸ್ಥೆ ಮಾಡಬೇಕು.

## ಬಳಕೆದಾರರನ್ನು ಛೂ ಬಿಡುವ ಪ್ರವೃತ್ತಿ

ಈ ದಸ್ತಾವೇಜು ಉದ್ದಕ್ಕೂ ಕೃಷಿ ಉತ್ಪನ್ನಗಳ ಬೆಳೆಗಾರರು ಮತ್ತು ಬಳಕೆದಾರರ ಹಿತಾಸಕ್ತಿಗಳು ಪರಸ್ಪರ ವಿರುದ್ಧವಾಗಿವೆ ಎಂದು ಒತ್ತಿ ಒತ್ತಿ ಹೇಳುತ್ತದೆ. ಅಂದರೆ ರೈತರಿಗೆ ಹೆಚ್ಚಿನ ಖರೀದಿ ಬೆಲೆ ಬಳಕೆದಾರರಿಗೆ ನಷ್ಟ ಎಂದು. ಇದು ರೈತರ ಮೇಲೆ ಬಳಕೆದಾರರನ್ನು ಛೂ ಬಿಡುವ ಪ್ರವೃತ್ತಿ. ರೈತನಿಗೆ ಸಿಗುವ ಬೆಲೆಗೂ, ಬಳಕೆದಾರ ತೆರುವ ಬೆಲೆಗೂ ಅಗಾಧ ವ್ಯತ್ಯಾಸವಿದ್ದು ಇದು ಮಧ್ಯವರ್ತಿಗಳ ಜೇಬಿಗೆ ಹೋಗುತ್ತದೆ ಎಂಬ ಸತ್ಯವನ್ನು ಮರೆಮಾಚುವ ಯತ್ನ. ಸರಿಯಾದ ಖರೀದಿ ಮತ್ತು ಸಾರ್ವಜನಿಕ ವಿತರಣ ವ್ಯವಸ್ಥೆ ನಿರ್ವಹಿಸಿ ಮಧ್ಯವರ್ತಿಗಳ ಪ್ರಾಬಲ್ಯ ಮುರಿಯುವ ಮೂಲಕ ರೈತರಿಗೆ ಲಾಭದಾಯಕ ಬೆಲೆ, ಬಳಕೆದಾರನಿಗೆ ನ್ಯಾಯಯುತ ಬೆಲೆ ಎರಡೂ ಕೊಡುವುದು ಸಾಧ್ಯವಿದೆ ಎಂಬುದನ್ನು ಒಪ್ಪಿಕೊಳ್ಳಲು ತಯಾರಿಲ್ಲ. ಯಾಕೆಂದರೆ ಸರ್ಕಾರದ ನೀತಿಯ ವಿಫಲತೆಯ ಮೂಲ ತಿರುಳು ಇದು. ಕೃಷಿ ಬೆಳೆಗಾರರಲ್ಲಿ ಶೇಕಡಾ 10 ರಷ್ಟು ಮಾತ್ರವಾದ ಕಬ್ಬು ಮತ್ತು ಎಣ್ಣೆ ಬೀಜಗಳ ಬೆಲೆಗಳ ಬಗ್ಗೆ ಮಾತ್ರ ದಸ್ತಾವೇಜು ಗಮನ ಕೊಟ್ಟಂತಿದೆ.

## ರೇಶನ್ ವ್ಯವಸ್ಥೆ ಉತ್ತಮಪಡಿಸಿ

ಅಖಿಲ ಭಾರತ ಕಿಸಾನ್ ಸಭಾ ಬಳಕೆದಾರರ ಹಿತಾಸಕ್ತಿಗಳನ್ನು ಪೂರ್ಣವಾಗಿ ಗಮನಕ್ಕೆ ತೆಗೆದುಕೊಳ್ಳುತ್ತದೆ. ಆದ್ದರಿಂದಲೇ ಕಿಸಾನ್‌ಸಭಾ ಹದಿನಾಲ್ಕು ಅವಶ್ಯಕ ವಸ್ತುಗಳನ್ನು ರೇಶನ್ ವ್ಯವಸ್ಥೆ ಮೂಲಕ ನ್ಯಾಯಯುತ ಸಬ್ಸಿಡಿ ಕೊಟ್ಟ ಬೆಲೆಗಳಲ್ಲಿ ಎಲ್ಲಾ ಬಳಕೆದಾರರಿಗೆ ವಿತರಿಸಬೇಕು ಎಂದು ಒತ್ತಾಯಿಸುತ್ತದೆ. ಈ ರೀತಿ ಮಾತ್ರವೇ ಹಳ್ಳಿಯ ಮತ್ತು ನಗರಗಳ ಬಡವರ ಜೀವನ ಮಟ್ಟ ಇನ್ನೂ ಇಳಿಯದಂತೆ ತಡೆಯಲು ಸಾಧ್ಯ. ಇದನ್ನು ದೇಶದ ಆರ್ಥಿಕತೆಯ ಮೇಲೆ ಪೂರ್ಣ ಹಿಡಿತವಿರುವ ಕೇಂದ್ರ ಸರ್ಕಾರ ಮಾತ್ರ ಮಾಡಲು ಸಾಧ್ಯ. ಈಗಿನ 3.3 ಲಕ್ಷ ನ್ಯಾಯ ಬೆಲೆ ಅಂಗಡಿಗಳ ಸಂಖ್ಯೆ ಕಡಿಮೆ. ಸೀಮಿತ ವಸ್ತುಗಳಷ್ಟೆ-ಅಕ್ಕಿ, ಗೋಧಿ, ಸಕ್ಕರೆ, ಖಾದ್ಯತೈಲ ಅದೂ ಸೀಮಿತ ಪ್ರಮಾಣದಲ್ಲಿ ದೊರೆಯುತ್ತವೆ. ಕೆಟ್ಟ ಗುಣಮಟ್ಟ ಮತ್ತು ಅನಿಯಮಿತ ಪೂರೈಕೆಯ ದೂರುಗಳು ಹೇರಳವಾಗಿದೆ. ಇದನ್ನು ತಕ್ಷಣವೇ ಸರಿಪಡಿಸಬೇಕು.

ಸರ್ಕಾರದ ಗೋಮುಖ ವ್ಯಾಘ್ರತನ ಪ್ರಕಟವಾಗುವುದು ರೇಶನ್ ಅಕ್ಕಿ, ಗೋಧಿ, ಸಕ್ಕರೆಗಳ ಬೆಲೆ ಏರಿಕೆಯಲ್ಲಿ. ಬೆಳೆಗಾರರಿಗೆ ಬೆಲೆ ಏರಿಸದಂತೆ ಉಪದೇಶ ಮಾಡುವ ಸರ್ಕಾರ ಬಳಕೆದಾರರಿಗೆ ಬೆಲೆ ಏರಿಸಲು ಹಿಂದೆ ನೋಡುವುದಿಲ್ಲ.

ಈ ರೀತಿ ಲಾಭದಾಯಕ ಬೆಲೆಗಳಿಗೆ ಒತ್ತಾಯ ಸೆಪ್ಟೆಂಬರ್ ಚಳುವಳಿಯ ಪ್ರಮುಖ ಘೋಷಣೆಗಳಲ್ಲೊಂದು.

## ಪುರಿ ಸ್ವಾಮಿ ವಿರುದ್ಧ ಕ್ರಮಕ್ಕೆ ಒತ್ತಾಯ

ಪುರಿಯ ನಿರಂಜನ ದೇವ ತೀರ್ಥ ಸ್ವಾಮಿಯ ವಿರುದ್ಧ ಕ್ರಮ ಕೈಗೊಳ್ಳಲು ಒತ್ತಾಯಿಸಿ ಬೆಂಗಳೂರು ನಗರದಲ್ಲಿ ಡಿ.ವೈ.ಎಫ್. ಐ. ಆರ್.ಜಿ.ಐ. ಕಾಲೋನಿ ಘಟಕದ ಆಶ್ರಯದಲ್ಲಿ ಜುಲೈ 24ರಂದು ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು.

ರಾಜ್ಯ ಅಧ್ಯಕ್ಷ ಹೆಚ್. ಎನ್. ನಾಗಮೋಹನದಾಸರು ಮಾತನಾಡಿ ಶತಮಾನಗಳಿಂದ ಹರಿಜನರನ್ನು ತುಳಿಯುತ್ತ ಬಂದಿರುವ ಪುರೋಹಿತ ಶಾಹಿಯ ವಿರುದ್ಧ ಎಚ್ಚರಗೊಂಡು ಶೋಷಣೆಗೊಳಪಟ್ಟ ಜನತೆಯನ್ನು ಐಕ್ಯಗೊಳಿಸಿ ಹೋರಾಟ ನಡೆಸಬೇಕೆಂದು ಕರೆನೀಡಿದರು.

ದೇಶದ ಪ್ರಜಾಸತ್ತಾತ್ಮಕ ಜಾತ್ಯಾತೀತ ನೀತಿಗೆ ಸವಾಲಾಗಿ ಇಷ್ಟು ಮಾನವತಾ ವಿರೋಧಿಯಾಗಿ ನಡೆದುಕೊಂಡಿರುವ ಸ್ವಾಮಿಯನ್ನು ಬಂಧಿಸುವಲ್ಲಿ ವಿಫಲವಾಗಿರುವ ಕೇಂದ್ರ ಸರ್ಕಾರವನ್ನು ಅವರು ಖಂಡಿಸಿದರು.

ಜಿಲ್ಲೆಯಾದ್ಯಂತ ಪ್ರತಿಭಟನಾ ಸಭೆ ಮೆರವಣಿಗೆಗಳನ್ನು ನಡೆಸಲಾಗುವುದೆಂದು ಜಿಲ್ಲಾ ಕಾರ್ಯದರ್ಶಿ ಕಾ|| ಟಿ. ಶಿವಶಂಕರ್ ರವರು ಹೇಳಿದರು. ಆರ್. ರಾಜಶೇಖರ ರವರು ಅಧ್ಯಕ್ಷತೆ ವಹಿಸಿದ್ದರು. ಸಭೆಯ ನಂತರ 'ಹೆಣ್ಣು' ಎಂಬ ನಾಟಕವನ್ನು ಪ್ರದರ್ಶಿಸಲಾಯಿತು.

### ಕಾರ್ಮಿಕ ಕಾಯ್ದೆ ತಿದ್ದುಪಡಿ ವಿರೋಧಿಸಿ

# ರಾಜ್ಯಾದ್ಯಂತ ರಸ್ತೆ ರೋಖೊ ಚಳುವಳಿ

ದೇಶದ ದುಡಿಯುವ ಜನತೆ ಹೋರಾಟ, ತ್ಯಾಗ, ಬಲಿದಾನದಿಂದ ಗಳಿಸಿದ ಸೌಲಭ್ಯಗಳು ಹಾಗೂ ಹಕ್ಕುಗಳನ್ನು ಕಸಿದುಕೊಳ್ಳಲು ರಾಜೀವ್‌ಗಾಂಧಿ ಸರ್ಕಾರ ತರುತ್ತಿರುವ ಕಾರ್ಮಿಕ ಸಂಘಗಳ ಕಾಯ್ದೆ ಮತ್ತು ಕೈಗಾರಿಕಾ ವಿವಾದಗಳ ಕಾಯ್ದೆಗಳ ತಿದ್ದುಪಡಿಯನ್ನು ವಿರೋಧಿಸಿ ದೆಹಲಿಯಲ್ಲಿ ನಡೆದ ಟ್ರೇಡ್ ಯೂನಿಯನ್ಸ್ ಸಮಾವೇಶ ನೀಡಿದ ಕರೆಯಂತೆ ಜುಲೈ 27 ರಂದು ರಾಜ್ಯಾದಾದ್ಯಂತ ವ್ಯಾಪಕ ಪ್ರತಿಭಟನೆ ನಡೆದಿರುವ ವರದಿಗಳು ಬಂದಿವೆ.

## ಬೆಂಗಳೂರು

ಜುಲೈ 27 ರಂದು ಬೆಂಗಳೂರು ನಗರದ 6 ಭಾಗಗಳಲ್ಲಿ ಕಾರ್ಮಿಕರು ರಸ್ತೆತಡೆ ಚಳುವಳಿ ನಡೆಸಲಾಗಿದೆ. ಹೊಸೂರು ರಸ್ತೆಯಲ್ಲಿ ಕಾ|| ಸೂರ್ಯನಾರಾಯಣರಾವ್‌ರವರ ನೇತೃತ್ವದಲ್ಲಿ ಸುಮಾರು 300 ಮಂದಿ ಮೈಕೋ ಮತ್ತಿತರ ಕಾರ್ಮಿಕರು ರಸ್ತೆತಡೆ ಚಳುವಳಿಯಲ್ಲಿ ಪಾಲ್ಗೊಂಡಿದ್ದರು. ಯಶವಂತಪುರದ ಪೀಣ್ಯದ ಬಳಿ ಕಾ|| ಮಾರ್ಥಂಡಯ್ಯ ಹಾಗೂ ಮೋಹನ್ ಮೈಸೂರು ರಸ್ತೆಯಲ್ಲಿ ಕಾ||ಆರ್. ಶ್ರೀನಿವಾಸ್, ಕೃಷ್ಣರಾಜಪುರ ರೈಲ್ವೆ ನಿಲ್ದಾಣದ ಬಳಿ ಕಾ||ಜಾನ್ ವಿನ್ಸಂಟ್, ನಾರಾಯಣ ರಾವ್‌ಬಾನು, ಮಲ್ಲೇಶ್ವರಂ ವೃತ್ತದ ಬಳಿ ಕಾ|| ಪಿ. ಕೆ. ಸುಬ್ರಮಣಿ, ಎ. ವಿ. ರಮೇಶ್ ರವರ ನೇತೃತ್ವದಲ್ಲಿ ಮೈಸೂರು ಮಿಲ್ಸ್, ಮಿನರ್ವ ಆಟೋ ಸಂಘದ ಕಾರ್ಮಿಕರು, ಹಾಗೂ ಜನತಾ ಬಜಾರ್ ಮುಂದೆ ನಡೆದ ಪಿಕೆಟಿಂಗ್‌ನಲ್ಲಿ ಹೋಟೆಲ್ ಕಾರ್ಮಿಕರು, ಬ್ಯಾಂಕ್, ಎಲ್. ಐ. ಸಿ. , ಮುಂತಾದ ನೌಕರ ಕಾರ್ಮಿಕರು ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದರು. ನಗರದ 6 ಭಾಗದಲ್ಲಿ ಏಕಕಾಲದಲ್ಲಿ ನಡೆದ ಪಿಕೆಟಿಂಗ್ ಎದುರಿಸುವಲ್ಲಿ ಪೋಲೀಸರು ವಿಫಲರಾದರು. ಒಂದು ಗಂಟೆ ಕಾಲ ಸಂಚಾರ ಅಸ್ತವ್ಯಸ್ತಗೊಳಿಸಿ ಸಿ.ಐ.ಟಿ.ಯು. ಕಾರ್ಯಕರ್ತರು ಕೇಂದ್ರ ಸರ್ಕಾರಕ್ಕೆ ಪ್ರತಿಭಟನೆ ವ್ಯಕ್ತಪಡಿಸಿದರು.

## ಗುಲ್ಬರ್ಗಾ

ನಗರದ 6 ಭಾಗಗಳು ಮಿಲನಗೊಳ್ಳುವ ವಲ್ಲಭಾಯಿ ಪಟೇಲ್ ಚೌಕದಲ್ಲಿ ಎಂ. ಎಸ್. ಕೆ. ಮಿಲ್ಸ್ ಮತ್ತಿತರ ಕಾರ್ಮಿಕರು ರಸ್ತೆ ರೋಖೋ ಚಳುವಳಿ ನಡೆಸಿದ ಸುಮಾರು 400 ಮಂದಿ ಕಾರ್ಮಿಕರನ್ನು ಬಂಧಿಸಲಾಯಿತು. ಕಾರ್ಮಿಕ ಕಾಯ್ದೆಗಳ ತಿದ್ದುಪಡಿ ಹಾಗೂ ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಜವಳಿ ನೀತಿಯಿಂದ ಬೀಗಮುದ್ರೆಯಲ್ಲಿರುವ ಎಂ. ಎಸ್. ಕೆ. ಮಿಲ್ಸ್ ಆಡಳಿತ ವರ್ಗದ ಕಾರ್ಮಿಕ ವಿರೋಧಿ ಧೋರಣೆಯನ್ನು ಖಂಡಿಸಲಾಯಿತು.

## ಹರಿಹರ

ಸಿ. ಐ. ಟಿ. ಯು. ನೇತೃತ್ವದ ವಿವಿಧ ಕಾರ್ಮಿಕ ಸಂಘಗಳ ಸಹಸ್ರಾರು ಕಾರ್ಮಿಕರು ಮೆರವಣಿಗೆ ನಡೆಸಿ ಪೂನಾ–ಬೆಂಗಳೂರು ಮತ್ತು ಮಂಗಳೂರು-ಹೊಸಪೇಟೆ ರಸ್ತೆಗಳು ಸೇರುವ ವೃತ್ತದ ಮೂಲಕ ಹಾದು ಹೋಗುವ ವಾಹನಗಳನ್ನು ತಡೆದು ಸಂಚಾರ ಸ್ಥಗಿತಗೊಳಿಸಿದರು. ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಘೋಷಣೆ ಕೂಗುತ್ತಾ ತಹಸೀಲ್ದಾರ್ ಕಛೇರಿಗೆ ಮೆರವಣಿಗೆಯಲ್ಲಿ ಬಂದು ಮನವಿ ಪತ್ರ ಅರ್ಪಿಸಿದರು.

ನಂತರ ನಡೆದ ಸಭೆಯನ್ನುದ್ದೇಶಿಸಿ ಕಾ|| ನಿತ್ಯಾನಂದಸ್ವಾಮಿ, ಆರ್. ಬಿ. ಅಂಗಡಿ, ಧ್ರುವಕುಮಾರ್, ಇನಾಂದಾರ್ ಮಾತನಾಡಿ ಕಾರ್ಮಿಕ ಮಸೂದೆಗಳಿಗೆ ತಿದ್ದುಪಡಿ ತರುವುದನ್ನು ನಿಲ್ಲಿಸಬೇಕೆಂದು ಒತ್ತಾಯಿಸಿದರು.

## ಧಾರವಾಡ

ಕಾರ್ಮಿಕ ಕಾಯ್ದೆಗಳಿಗೆ ತಿದ್ದುಪಡಿ ತಂದು ಕಾರ್ಮಿಕರನ್ನು ಗುಲಾಮರನ್ನಾಗಿ ಮಾಡಲು ಕೇಂದ್ರ ಸರ್ಕಾರ ಹವಣಿಸಿ ದೇಶದ ಬಂಡವಾಳಶಾಹಿಗಳಿಗೆ ಪ್ರೋತ್ಸಾಹಿಸುತ್ತಿರುವ ರಾಜೀವ್ ಗಾಂಧಿ ಸರ್ಕಾರದ ಕಾರ್ಮಿಕ ವಿರೋಧಿ ನೀತಿ ಪ್ರತಿಭಟಿಸಿ ಸಿ. ಐ. ಟಿ. ಯು. ಗೆ ಸೇರಿದ 500 ಮಂದಿ ಕಾರ್ಮಿಕರು ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಅರ್ಪಿಸಲಾಯಿತು. ಕಾ|| ಎಸ್. ಆರ್. ಪರಪ, ಹಾಶಿಮಸಾಬ್,ಟಿ. ಎಸ್. ಪಾಟೀಲ್, ಕಲ್ಲಪ್ಪ ಬೆನಕೊಪ್ಪ, ಟಾಕೂರ್ಮುಂತಾದವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

## ಹುಬ್ಬಳ್ಳಿ

ಕಿರ್ಲೋಸ್ಕರ್, ಯು. ಪಿ. ಟಿ. ಹುಬ್ಬಳ್ಳಿ ಎಲೆಕ್ಟ್ರಿಕಲ್ಸ್ ಹಾಗೂ ಬೀಡಿ ಕೆಲಸಗಾರರು ಜುಲೈ 27 ರಂದು ಸುರಿಯುವ ಮಳೆಯಲ್ಲೇ ಮೆರವಣಿಗೆ ನಡೆಸಿ ತಹಸೀಲ್ದಾರರಿಗೆ ಮನವಿ ಅರ್ಪಿಸಲಾಯಿತು ಎಂದು ಸಿ. ಐ. ಟಿ. ಯು. ರಾಜ್ಯಸಮಿತಿ ಸದಸ್ಯರಾದ ಕಾ|| ವಿ. ಎಂ. ಪೂಜಾರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

## ಕಾ|| ಎನ್. ಎಲ್. ಸಹಾಯ ನಿಧಿಗೆ ನೆರವು

| | | |
|---|---|---|
| ಕಾ|| ಆರ್. ಸಿ. ಉನ್ನಿಕೃಷ್ಣನ್ (ಹರಿಹರ) | 100 | 00 |
| ಬೆಂಗಳೂರಿನ ಕೆ. ಆರ್. ಪುರಂ ಪ್ರದೇಶ : | | |
| ಕಾ|| ಎ. ಎಂ. ಜಾನ್‌ವಿನ್‌ಸೆಂಟ್ | 100 | 00 |
| ಪಿ. ಜಯರಾಂ | 50 | 00 |
| ಪಿ. ಓ. ವಿಜಯರೆಡ್ಡಿ | 50 | 00 |
| ಬಾಬುರಾವ್ | 50 | 00 |
| ಪಕ್ರಿಸ್ವಾಮಿ | 25 | 00 |
| ವಿಶ್ವನಾಥ ಹೆಗಡೆ | 25 | 00 |
| ರಾಮಚಂದ್ರ | 25 | 00 |
| ಸಿ. ರಮೇಶ್ | 25 | 00 |
| ನಾಯರ್ | 25 | 00 |

# ಸಿ. ಪಿ. ಐ. (ಎಂ), ಸಿ. ಪಿ. ಐ. ಜಂಟಿ ಸಮಾವೇಶ

(3ನೇ ಪುಟದಿಂದ)

ಸಂಗಾತಿಗಳು ಕೊಲೆಯಾಗಲು ಕಾರಣವಾಗಿದೆ ಎಂದು ಆರೋಪಿಸಿದರು.

ಸಿ.ಪಿ.ಐ. (ಎಂ) ಮುಳಬಾಗಿಲು ಶಾಸಕ ಆರ್. ವೆಂಕಟರಾಮಯ್ಯನವರು ರೈತರ ಮುಂದಿನ ಹಂತದ ಹೋರಾಟದ ಬಗ್ಗೆ ವಿವರಿಸಿದರು. ಕಾ|| ಜಿ. ವಿ. ಶ್ರೀರಾಮರೆಡ್ಡಿಯವರು ನಿರ್ಣಯ ಮಂಡಿಸಿದರು. ಶಾಸಕ ಟಿ. ಎಸ್. ಮಣಿಯವರು ಅಧ್ಯಕ್ಷತೆ ವಹಿಸಿದ್ದರು. ಕಾ|| ಜಿ. ವಿ. ಅಶ್ವತ್ಥನಾರಾಯಣರೆಡ್ಡಿಯವರು ಸ್ವಾಗತಿಸಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ|| ಕೆ.ಎಂ. ವೆಂಕಟೇಶ್‌ರವರು ಕೊನೆಯಲ್ಲಿ ವಂದಿಸಿದರು.

## ಚಿಕ್ಕಮಗಳೂರು

ನಗರದ ಪುರಭವನದಲ್ಲಿ "ಭಾರತದಲ್ಲಿ ಪ್ರಜಾಪ್ರಭುತ್ವ ರಕ್ಷಿಸಿರಿ" ಕುರಿತು ನಡೆಸಿದ ಜಿಲ್ಲಾ ಸಮಾವೇಶದಲ್ಲಿ ಸಿ.ಪಿ. ಐ.(ಎಂ) ರಾಜ್ಯ ಸೆಕ್ರಟಾರಿಯೇಟ್ ಸದಸ್ಯರಾದ ಕಾ|| ಸಿ. ನಂಜುಂಡಪ್ಪ ಹಾಗೂ ಕಾ|| ಎನ್ ಕೆ. ಉಪಾಧ್ಯಾಯರವರು ಮಾತನಾಡಿದರು.

ರಾಜೀವ್‌ಗಾಂಧಿ ಸರ್ಕಾರ ದೇಶದ ಪ್ರಜಾಪ್ರಭುತ್ವ, ಐಕ್ಯತೆ ಹಾಗೂ ಸಮಗ್ರತೆಯನ್ನು ಸರ್ವನಾಶ ಮಾಡುವುದರ ಮೂಲಕ ಸರ್ವಾಧಿಕಾರಿ ರೀತಿಯಲ್ಲಿ ವರ್ತಿಸುತ್ತಿದ್ದು ಜನತೆ ಸದಾ ಎಚ್ಚರದಿಂದಿದ್ದು ದೇಶದ ಪ್ರಜಾಪ್ರಭುತ್ವ ರಕ್ಷಿಸಲು ಎಲ್ಲಾ ರೀತಿಯ ತ್ಯಾಗಬಲಿದಾನಗಳಿಗೂ ಸಿದ್ಧರಾಗಬೇಕೆಂದು ಕರೆನೀಡಿದರು. ಕಾ|| ಎನ್ ಕೆ. ಉಪಾಧ್ಯಾಯರು ಮಾತನಾಡಿ ಸಂವಿಧಾನದ 59ನೇ ತಿದ್ದುಪಡಿಯಿಂದ ದೇಶದ ಮೇಲೆ ಪರೋಕ್ಷವಾಗಿ ತುರ್ತು ಪರಿಸ್ಥಿತಿಯನ್ನು ಹೇರುವ ಪಿತೂರಿಯಾಗಿದೆ. 1972 ರಿಂದಲೂ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ, ಕಾಂಗ್ರೆಸ್(ಐ) ನ ಸರ್ವಾಧಿಕಾರಿ ಪ್ರವೃತ್ತಿಯ ವಿರುದ್ಧ ಜನರಲ್ಲಿ ಜಾಗೃತಿಯನ್ನುಂಟು ಮಾಡುತ್ತಾ ಬಂದಿದೆ. ವಿರೋಧ ಪಕ್ಷಗಳು ಇಂತಹ ಗಂಡಾಂತರಕಾರಿ ನೀತಿಯ ವಿರುದ್ಧ ಹೋರಾಟದ ಅಗತ್ಯದ ಬಗ್ಗೆ ಗಂಭೀರವಾಗಿ ಚಿಂತಿಸದಿರುವುದರ ಬಗ್ಗೆ ತಿಳಿಸಿ ಪಕ್ಷದ ಕಾರ್ಯಕರ್ತರು ಹಾಗೂ ಜನಸಮುದಾಯ ಇಂತಹ ಕರಾಳ ತಿದ್ದುಪಡಿಗಳು ಜಾರಿಯಾಗದ ರೀತಿಯಲ್ಲಿ ಐಕ್ಯಹೋರಾಟ ಬೆಳೆಸಬೇಕೆಂದು ಕರೆನೀಡಿದರು.

ಸಭೆಯ ಅಧ್ಯಕ್ಷತೆಯನ್ನು ಕಾ||ಹಾಲಪ್ಪ ವಹಿಸಿದ್ದರು. ಚಿಕ್ಕಮಗಳೂರು ಶಾಖೆ ಕಾರ್ಯದರ್ಶಿ ಕಾ|| ವಿಶ್ವನಾಥ ಸ್ವಾಗತಿಸಿ ಕಳಸ ಮಂಡಲ ಪಂಚಾಯಿತಿ ಸದಸ್ಯ ಕಾ|| ಕೆ. ಸುಕುಮಾರ್ ವಂದಿಸಿದರು.

### ನೆಲ್ಸನ್ ಮಂಡೆಲಾ ಬಿಡುಗಡೆಗೆ ಒತ್ತಾಯಿಸಿ

# ರಾಜ್ಯದ ವಿವಿಧೆಡೆ ಸಭೆ, ಮೆರವಣಿಗೆ

ನೆಲ್ಸನ್ ಮಾಂಡೆಲಾರ ಬಿಡುಗಡೆಗಾಗಿ ವಿಶ್ವದ್ಯಾಂತ ನಡೆಯುತ್ತಿರುವ ಚಳುವಳಿಯಲ್ಲಿ ಭಾಗವಹಿಸಲು ಸಿ. ಐ. ಟಿ. ಯು. ನೀಡಿದ ಕರೆಯಂತೆ ರಾಜ್ಯದ ವಿವಿಧ ಕಡೆಗಳಲ್ಲಿ ಸಭೆ, ಮೆರವಣಿಗೆ, ಪ್ರದರ್ಶನ ನಡೆಸಿದ ವರದಿಗಳು ಬಂದಿವೆ.

## ಬೆಂಗಳೂರು

ಜುಲೈ 18ರಂದು ನೆಲ್ಸನ್ ಮಾಂಡೆಲಾರ 70ನೇ ಜನ್ಮದಿನಾಚರಣೆ ದಿನದಂದು ಬೆಂಗಳೂರು ನಗರದಲ್ಲಿ ಸಿ.ಐ.ಟಿ.ಯು.ವಿಗೆ ಸೇರಿದ ಕಾರ್ಯಕರ್ತರು ಚಿಕ್ಕಲಾಲ್‌ಬಾಗ್‌ನಿಂದ ಬೃಹತ್ ಮೆರವಣಿಗೆಯಲ್ಲಿ ಮೈಸೂರು ಬ್ಯಾಂಕ್ ಚೌಕದಲ್ಲಿ 'ಬೋಥಾ'ನ ಪ್ರತಿಕೃತಿಯನ್ನು ದಹನ ಮಾಡಿ ಬಹಿರಂಗ ಸಭೆ ನಡೆಸಲಾಯಿತು. ಕಾರ್ಯಕ್ರಮದಲ್ಲಿ ವಿಮಾ ಕಾರ್ಪೊರೇಷನ್ ನೌಕರರ ಸಂಘ ಹಾಗೂ ಬ್ಯಾಂಕ್ ನೌಕರರ ಸಮನ್ವಯ ಸಮಿತಿ (ಬಿ.ಇ.ಎಫ್.ಐ.) ಯು ಭಾಗವಹಿಸಿತು.

## ದ. ಕನ್ನಡ ಜಿಲ್ಲೆ

'ನೆಲ್ಸನ್ ಮಾಂಡೆಲಾರನ್ನು ಬಿಡುಗಡೆ ಮಾಡಿರಿ' ದಿನಾಚರಣೆಯನ್ನು ಸಿ. ಪಿ. ಐ. (ಎಂ) ಗುರುಪುರ ಪ್ರದೇಶ ಸಮಿತಿ ಆಶ್ರಯದಲ್ಲಿ ಜುಲೈ 18ರಂದು ಕೈಕಂಬದಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ನಾಮಂಜೂರು ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾ|| ಗಂಗಯ್ಯ ಅಮೀನ್ ವಹಿಸಿದ್ದರು. ಸುತ್ತಮುತ್ತಲಿನ ಪ್ರದೇಶದ ರೈತರು ಕಾರ್ಮಿಕರು, ವಿದ್ಯಾರ್ಥಿ, ಯುವ ಜನರು ಭಾಗವಹಿಸಿದ್ದರು. ಡಿ. ವೈ. ಎಫ್. ಐ. ನ ವಸಂತಭಂಡಾರಿ, ರೈತ ಸಂಘದ ಎಂ. ಎಸ್. ನಾರಾಯಣರವರು ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಮಾತನಾಡಿದ ಗುರುಪುರ ಪ್ರದೇಶ ಸಮಿತಿಯ ಪಕ್ಷದ ಕಾರ್ಯದರ್ಶಿ ಕಾ|| ಯು.ಬಿ. ಲೋಕಯ್ಯನವರು ನೆಲ್ಸನ್ ಮಾಂಡೆಲಾರಂತಹ ಸಾವಿರಾರು ಮಂದಿ ಇಂದು ಸ್ವಾತಂತ್ರ್ಯ ಹೋರಾಟದ ಕಣದಲ್ಲಿ ಧುಮುಕಿ ಬಿಳಿಯ ಸರ್ಕಾರಕ್ಕೆ ಸವಾಲೆಸೆಯುತ್ತಿದ್ದಾರೆ. ನೆಲ್ಸನ್ ಮಾಂಡೆಲಾರ ಬಿಡುಗಡೆಗಾಗಿ ಧ್ವನಿ ಎತ್ತಿರುವ ವಿಶ್ವದ ಜನರೊಂದಿಗೆ ಸಿ. ಐ. ಟಿ. ಯು. ಹಾಗೂ ಪ್ರಗತಿಪರ ಶಕ್ತಿಗಳು ಧ್ವನಿ ಗೂಡಿಸಲು ಕರೆನೀಡಿದರು. ಕಾ|| ವಾಸುದೇವ ಆಚಾರಿ ಸ್ವಾಗತಿಸಿ ಕಾ|| ಹೊನ್ನಯ್ಯ ವಂದಿಸಿದರು.

## ಉಡುಪಿ

ಸಿ. ಐ. ಟಿ. ಯು. ವಿಗೆ ಸೇರಿದ ಕಾರ್ಮಿಕ ಸಂಘಗಳು ಜಂಟಿಯಾಗಿ ಉಡುಪಿಯ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ ಆಚರಿಸಲಾಯಿತು. ಎಲ್. ಐ. ಸಿ. ಯ ವಿಶ್ವನಾಥರೈ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿ. ರಾಜಶೇಖರ್‌ರವರು ಮಾತನಾಡಿ ಆಫ್ರಿಕಾದ ಸ್ವಾತಂತ್ರ್ಯ ಹೋರಾಟದ ಅದಮ್ಯ ಚೇತನವನ್ನು ಜೈಲಿನ ಗೋಡೆಯೊಳಗೆ ಬಚ್ಚಿಡಲು ಸಾಧ್ಯವಿಲ್ಲವೆಂದು ಹೇಳಿದರು. ಯಾವುದೇ ಶಕ್ತಿಯಿಂದಲೂ ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕಲು ಸಾಧ್ಯವಿಲ್ಲವೆಂದು ಇತಿಹಾಸ ತೋರಿಸಿ ಕೊಟ್ಟಿದೆ ಎಂದು ಹೇಳಿದ ಅವರು ಚಂದ್ರಶೇಖರ ಪಾಟೀಲ್‌ರವರು ಬರೆದ ಕವನವನ್ನು ಓದಿದರು. ಕಾ||ಸಂಜೀವನಾಯ್ಕ ಸ್ವಾಗತಿಸಿ ಡೆವಿಡ್ ಎ. ಕರ್ಕಡ ಧನ್ಯವಾದ ಸಲ್ಲಿಸಿದರು.

## ಅಳಪೆ ಪ್ರದೇಶ

ಜುಲೈ 18ರಂದು ಮಂಡಲ ಪಂಚಾಯಿತಿ ಸದಸ್ಯ ಕೆ. ಯಾದವಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಕಾ|| ಜೆ. ಬಾಲಕೃಷ್ಣಶೆಟ್ಟಿ, ಸೀತಾರಾಮ ಕೊಟ್ಟಾರಿಯವರುಗಳು ಮಾತನಾಡಿದರು. ದ. ಆಫ್ರಿಕಾ ಜನರ ಹೋರಾಟಕ್ಕೆ ಬೆಂಬಲ ನೀಡುವ ಹಾಗೂ ನೆಲ್ಸನ್ ಮಂಡೆಲಾರನ್ನು ಬಿಡುಗಡೆಗೊಳಿಸಲು ಒತ್ತಾಯಿಸುವ ನಿರ್ಣಯಗಳನ್ನು ಸಭೆ ಅಂಗೀಕರಿಸಿತು.

## ಕೆ. ಜಿ. ಎಫ್.

ದಿನಾಂಕ 18-7-1988 ರಂದು ಕೆ. ಜಿ. ಎಫ್. ರಾಬರ್ಟ್‌ಸನ್ ಪೇಟೆಯ ಗೀತಾ ರಸ್ತೆಯುದ್ದಕ್ಕೂ ಬೀದಿ ಬೀದಿಯ ಸಭೆಗಳು ಮತ್ತು ಹಾಡುಗಳ ಕಾರ್ಯಕ್ರಮದ ಮೂಲಕ ನೆಲ್ಸನ್ ಮಂಡೆಲಾರನ್ನು ಬಿಡುಗಡೆಗೊಳಿಸಲು ಆಗ್ರಹಪಡಿಸುವ ಕಾರ್ಯಕ್ರಮವನ್ನು ಬಂಗಾರಪೇಟೆ ತಾಲ್ಲೂಕು ಎ. ಐ. ಡಿ. ಡಬ್ಲ್ಯು. ಎ. (ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ) ಮತ್ತು ಡಿ. ವೈ. ಎಫ್. ಐ. (ಭಾರತ ಪ್ರಜಾಸತ್ತಾತ್ಮಕ ಯುವ ಜನ ಸಂಘಟನೆ) ನಡೆಸಿದವು.

ಈ ಪ್ರದೇಶದಲ್ಲಿ ಇದೊಂದು ಭಿನ್ನವಾದ ಕಾರ್ಯಕ್ರಮವಾಗಿತ್ತು. ನೆಲ್ಸನ್ ಮಂಡೆಲಾರ ಭಿತ್ತಿ ಚಿತ್ರವನ್ನು ಮತ್ತು ವರ್ಣದ್ವೇಷಿ ಬೋಥಾ ಸರಕಾರದ ವಿರುದ್ಧ, ಸಾಮ್ರಾಜ್ಯ ಶಾಹಿಯ ವಿರುದ್ಧ ಮತ್ತು ಮಂಡೆಲಾರನ್ನು ಬಿಡುಗಡೆಗೊಳಿಸಬೇಕೆಂಬ ಘೋಷಣೆಗಳಿರುವ ಭಿತ್ತಿ ಪತ್ರಗಳನ್ನು ಕೈಯಲ್ಲಿ ಹಿಡಿದುಕೊಂಡು ಡಿ.ವೈ.ಎಫ್.ಐ. ಮತ್ತು ಎ.ಐ.ಡಿ.ಡಬ್ಲ್ಯು. ಎ.ದ ಸದಸ್ಯರು ಸಾಯಂಕಾಲ ಸುಮಾರು 3 ಗಂಟೆಗಳ ಕಾಲ ಬೀದಿಯುದ್ದಕ್ಕೂ ಸಭೆಗಳನ್ನು ಮತ್ತು ಹಾಡುಗಳ ಕಾರ್ಯಕ್ರಮವನ್ನು ನಡೆಸಿದರು. ಸಭೆಗಳಲ್ಲಿ ಬಂಗಾರಪೇಟೆ ತಾಲ್ಲೂಕು ಉಪಾಧ್ಯಕ್ಷ ಕಾ|| ಮಲ್ಲೇಶ್, ಕಾ|| ಎಸ್. ಜ್ಯೋತಿಬಾಸು, ಕಾ|| ಎಸ್. ಆನಂದನ್, ಕಾ|| ಬಾಬು, ಮಹಿಳಾ ಸಂಘಟನೆಯ ಜಿಲ್ಲಾ ಸಂಚಾಲಕ ಕಾ|| ಫ್ಲೋರಾರವರು ಮಾತಾಡಿದರು. ಕೆ. ಜಿ. ಎಫ್. ಸಮುದಾಯದ ರಾಮಚಂದ್ರ ಮತ್ತು ಭಾಸ್ಕರ ಹಾಡಿನ ತಂಡದ ನೇತೃತ್ವ ವಹಿಸಿದ್ದರು.

ರಾಬರ್ಟ್‌ಸನ್ ಪೇಟೆಯ ಮಹಾತ್ಮ ಗಾಂಧಿ ಪ್ರತಿಮೆಯ ಬಳಿ ಸಂಜೆ 8-00 ಗಂಟೆಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ಜನರು ಬೀದಿ ಬದಿಯಲ್ಲಿ ಅಲ್ಲಲ್ಲೇ ನಿಂತು, ಕೂತು ಭಾಷಣ ಹಾಡುಗಳನ್ನು ಕೇಳಿದರು. ಒಟ್ಟಿನಲ್ಲಿ ಕೆ. ಜಿ. ಎಫ್.ನಲ್ಲಿ ಇದೊಂದು ಭಿನ್ನವಾದ ಪ್ರತಿಭಟನಾ ಕಾರ್ಯಕ್ರಮವಾಗಿತ್ತು.

## ರಾಯಚೂರಿನಲ್ಲಿ ಧರಣಿ

ಪುರಿ ಶಂಕರಾಚಾರ್ಯ ಅವರ ದಲಿತ ವಿರೋಧಿ, ಮಹಿಳಾ ವಿರೋಧಿ ಹೇಳಿಕೆಗಳು, ಕೋಮು ಗಲಭೆಗೆ, ರಾಷ್ಟ್ರೀಯ ಐಕ್ಯತೆಗೆ ಗಂಡಾಂತರಕಾರಿಯಾಗಿದ್ದು, ಕೂಡಲೇ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಕಾಂಗ್ರೆ ಸರಕಾರಕ್ಕೆ ಒತ್ತಾಯಿಸಲು ಒಂದು ದಿನದ ಧರಣಿ ಸತ್ಯಾಗ್ರಹವನ್ನು ನಡೆಸಿ ಪ್ರಧಾನ ಮಂತ್ರಿಗೆ ತಂತಿ ಸಂದೇಶವನ್ನು ನೀಡಿ 3000 ಕರಪತ್ರಗಳನ್ನು ಹಾಕಿ ಜನ ಬೆಂಬಲ ರೂಪಿಸಲು ಪ್ರಯತ್ನಿಸಲಾಯಿತು.

ಧರಣಿಯಲ್ಲಿ ಸಿ.ಐ.ಟಿ.ಯು. ಕಿಸಾನ್ ಸಭಾ, ಪ್ರಾಂತ ಕೃಷಿ ಕೂಲಿಕಾರ ಸಂಘಟನೆ, ಪ್ರಜಾಸತ್ತಾತ್ಮಕ ಯುವಜನ ಸಂಘಟನೆ, ಭಾರತ ವಿದ್ಯಾರ್ಥಿ ಸಂಘಟನೆ ಪಾಲುಗೊಂಡಿದ್ದವು.

# ಗಮನ ಸೆಳೆದ ಸಿ.ಪಿ.ಎಸ್.ಯು. ಸಮ್ಮೇಳನ

ಜೂನ್ 28ರಿಂದ ನಾಲ್ಕು ದಿನಗಳ ಕಾಲ ಸೋವಿಯೆತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷದ 19ನೇ ಸಮ್ಮೇಳನ ನಡೆಯಿತು. 18ನೇ ಸಮ್ಮೇಳನ 47 ವರ್ಷಗಳ ಹಿಂದೆ 1941ರಲ್ಲಿ ನಡೆದಿತ್ತು. ಪಕ್ಷದ 27ನೇ ಮಹಾಧಿವೇಶನದ ನಿರ್ಣಯದ ಪ್ರಕಾರ ಈ ಸಮ್ಮೇಳನ ನಡೆಯಿತು. ಈ ಸಮ್ಮೇಳನದಲ್ಲಿ ಚರ್ಚೆಗಿದ್ದ ಅಂಶಗಳೆಂದರೆ,

1 ಹನ್ನೆರಡನೇ ಪಂಚವಾರ್ಷಿಕ ಯೋಜನೆಯ ಪೂರ್ವಾರ್ಧದಲ್ಲಿನ ಫಲಿತಾಂಶಗಳ ಹಾಗೂ ಪುನರ್ ಸಂಘಟನೆ ತೀವ್ರಗೊಳಿಸುವಲ್ಲಿ ಪಕ್ಷದ ಸರಿಘಟನೆಗಳ ಕರ್ತವ್ಯಗಳ ಪರಿಶೀಲನೆ ಹಾಗೂ (2) ಪಕ್ಷದಲ್ಲಿ ಮತ್ತು ಸಮಸ್ತ ಸೋವಿಯೆತ್ ಸಮಾಜದಲ್ಲಿ ಇನ್ನಷ್ಟು ಪ್ರಜಾಸತ್ತಾತ್ಮಕ ಕ್ರಮಗಳ ವಿಸ್ತರಣೆ.

ಸಮ್ಮೇಳನದ ಮುಂದೆ ಮಂಡಿಸುವ ಥೀಸಿಸ್‌ಗಳ ಕುರಿತು ದೇಶಾದ್ಯಂತ ನಡೆದ ಚರ್ಚೆಗಳಲ್ಲಿ 6 ಕೋಟಿ ಪಕ್ಷದ ಸದಸ್ಯರು ಹಾಗೂ ಇತರರು ಭಾಗವಹಿಸಿದ್ದರು. ಸುಮಾರು ಎಪ್ಪತ್ತು ಲಕ್ಷ ಮಂದಿ ಸಮ್ಮೇಳನದ ಪೂರ್ವಭಾವೀ ಸಭೆಗಳಲ್ಲಿ ಭಾಗವಹಿಸಿ ಸುಮಾರು 50 ಸಾವಿರ ಸಲಹೆ ಸೂಚನೆಗಳನ್ನು ನೀಡಿದ್ದರು.

ಸಮ್ಮೇಳನದಲ್ಲಿ 4991 ಚುನಾಯಿತ ಪ್ರತಿನಿಧಿಗಳು ಭಾಗವಹಿಸಿದರು. ಇವರಲ್ಲಿ 1638 ಮಂದಿ ಕೈಗಾರಿಕಾ ಕಾರ್ಮಿಕರು, 866 ಕೃಷಿ ಕಾರ್ಮಿಕರು, 436 ಬುದ್ಧಿಜೀವಿಗಳು ಹಾಗೂ 43 ಪತ್ರಕರ್ತರು 25 ಶೇಕಡಾ ಪ್ರತಿನಿಧಿಗಳು ಮಹಿಳೆಯರು.

ಈ ಸಮ್ಮೇಳನ ಸೋವಿಯೆತ್ ಒಕ್ಕೂಟದ ಒಳಗೆ ಹಾಗೂ ಹೊರಗೆ ಕೂಡಾ ವಿಶೇಷ ಕುತೂಹಲ ಕೆರಳಿಸಿತ್ತು. ನೂರಾರು ವಿದೇಶೀ ಪತ್ರಕರ್ತರು, ಟಿ.ವಿ, ರೇಡಿಯೋ ಮಂದಿ ಸಮ್ಮೇಳನ ಆರಂಭವಾಗುವ ಮೊದಲೇ ಮಾಸ್ಕೋಗೆ ಧಾವಿಸಿದ್ದರು. ಸೋವಿಯೆತ್ ಜನಗಳೂ ಸಮ್ಮೇಳನದ ಚರ್ಚೆಯ ವಿವರ ತಿಳಿಯಲು ಪತ್ರಿಕೆಗಳಿಗಾಗಿ ಅತ್ಯುತ್ಸಾಹದಿಂದ ಭಾರೀ ಸಂಖ್ಯೆಯಲ್ಲಿ ಕಾಯುತ್ತಿದ್ದರು ಎಂದು ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ಮುಖ ಪತ್ರ 'ಪೀಪಲ್ಸ್ ಡೆಮಾಕ್ರಸಿ' ಪರವಾಗಿ ಮಾಸ್ಕೋಗೆ ಹೋಗಿದ್ದ ಕಾಂ. ಕಿಟ್ಟಿ ಮೆನನ್ ವರದಿ ಮಾಡಿದ್ದಾರೆ.

ನಾಲ್ಕು ದಿನಗಳ ಮುಕ್ತ ಹಾಗೂ ತೀವ್ರ ಚರ್ಚೆಯ ನಂತರ ಸಮ್ಮೇಳನ ಆರು ಠರಾವುಗಳನ್ನು ಅಂಗೀಕರಿಸಿತು. ಅವುಗಳಲ್ಲಿ ಎರಡು ಮುಖ್ಯ ಠರಾವುಗಳು ಪಕ್ಷ ಮತ್ತು ಸರಕಾರವನ್ನು ಬೇರ್ಪಡಿಸುವ ನೀತಿಯ ಆಧಾರದ ಮೇಲೆ ರಾಜಕೀಯ ವ್ಯವಸ್ಥೆಯ ಸುಧಾರಣೆ ಕುರಿತಾಗಿದ್ದವು. ಇತರ ನಾಲ್ಕು ಠರಾವುಗಳು ಅಧಿಕಾರಶಾಹಿ ಮತ್ತು ಕೆಂಪುಪಟ್ಟಿ, ಮುಕ್ತ ವಾತಾವರಣ, ಕಾನೂನು ಸುಧಾರಣೆ ಹಾಗೂ ಜನಾಂಗಗಳ ನಡುವಿನ ಸಂಬಂಧಗಳನ್ನು ಕುರಿತದ್ದು.

# ಪ್ಯಾಲೆಸ್ಟೈನ್ ವಿಮೋಚನಾ ಹೋರಾಟ ಹೊಸ ಘಟ್ಟದಲ್ಲಿ

ಇಸ್ರೇಲಿ ಆಕ್ರಮಿತ ಪ್ರದೇಶಗಳಲ್ಲಿ ಪ್ಯಾಲೆಸ್ಟೈನ್ ಜನತೆಯ ಬಂಡಾಯ ಆರಂಭವಾಗಿ ಈಗ ಏಳು ತಿಂಗಳು ಆಗಿವೆ. ಪಿ. ಎಲ್. ಓ. ನೇತೃತ್ವದ ಬಂಡಾಯ ತಾಯ್ನಾಡಿಗಾಗಿ ಪ್ಯಾಲೆಸ್ಟೈನ್ ಜನತೆಯ ಹೋರಾಟವನ್ನು ಒಂದು ಹೊಸ ಘಟ್ಟಕ್ಕೆ ತಲುಪಿಸಿದೆ. ಇದೇ ಜೂನ್ 28 ರಿಂದ 30ರವರೆಗೆ ಸೈಪ್ರಸ್‌ನ ನಿಕೋಸಿಯಾದಲ್ಲಿ ನಡೆದ ಆಫ್ರೋ-ಏಷ್ಯನ್ ಜನತೆಯ ಸೌಹಾರ್ದ ಸಂಘಟನೆಯ "ಪ್ಯಾಲೆಸ್ಟೈನ್ ಬಂಡಾಯಕ್ಕೆ ಅಂತರ್ರಾಷ್ಟ್ರೀಯ ಬೆಂಬಲಾರ್ಥ ಸಭೆಗೆ" ಈ ಹೋರಾಟಗಾರರು ನೀಡಿದ ಸಂದೇಶದಿಂದ ಇದು ತಿಳಿದು ಬಂದಿದೆ. ಈ ಸಭೆಯಲ್ಲಿ ಅಖಿಲ ಭಾರತ ಶಾಂತಿ ಹಾಗೂ ಸೌಹಾರ್ದ ಸಂಘಟನೆಯ ಪರವಾಗಿ ಚಂದ್ರಜಿತ್‌ಯಾದವ್, ಪೆರಿನ್ ಚಂದ್ರ ಹಾಗೂ ಸೀತಾರಾಂ ಯೆಚೂರಿ ಈ ಮೂವರು ಸದಸ್ಯರ ಭಾರತೀಯ ನಿಯೋಗವೂ ಭಾಗವಹಿಸಿತ್ತು.

ಆಫ್ರೋ-ಏಷ್ಯನ್ ಸೌಹಾರ್ದ ಸಂಘಟನೆ ಈ ಮೊದಲೇ ಒಂದು ನಿಯೋಗವನ್ನು ಇಸ್ರೇಲ್-ಆಕ್ರಮಿತ ಪ್ರದೇಶದಲ್ಲಿನ ಸ್ಥಿತಿಯ ಪ್ರತ್ಯಕ್ಷ ವರದಿ ಸಲ್ಲಿಸಲೆಂದು ಕಳುಹಿಸಿತ್ತು. ಇಸ್ರೇಲಿ ಅಧಿಕಾರಿಗಳು ಈ ನಿಯೋಗ ಮೇಲೆ ಹೇಳಿದ ಸಭೆಗೆ ಹಾಜರಾಗದಂತೆ ಮಾಡಲು ಅವರನ್ನು ಬಂಧಿಸಿಟ್ಟಿತು. ಸೈಪ್ರಸ್‌ನಲ್ಲಿ ಇದರ ವಿರುದ್ಧ ಕಂಡು ಬಂದ ತೀವ್ರ ಆಕ್ರೋಶ ಹಾಗೂ ವಿಶ್ವಸಂಸ್ಥೆಯ ಮಧ್ಯಪ್ರವೇಶದ ನಂತರವೇ ಅವರನ್ನು ಬಿಡುಗಡೆ ಮಾಡಲಾಯಿತು.

ಈ ನಿಯೋಗ ನೂರಾರು ಅಮಾನುಷ ಅತ್ಯಾಚಾರಗಳನ್ನು ಕಣ್ಣಾರೆ ಕಂಡಿತು. ವಿಶೇಷವಾಗಿ ಈಗ ಬಂಧನದಲ್ಲಿರುವ 13-17 ವರ್ಷ ವಯೋಗುಂಪಿನ 5000 ಯುವಕರ ಮೇಲೆ. ಆದರೂ ಪ್ಯಾಲೆಸ್ಟೈನ್ ಜನತೆ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಇಸ್ರೇಲೀ ಸರ್ಕಾರ ಹರಿಯ ಬಿಟ್ಟಿರುವ ಫ್ಯಾಸಿಸ್ಟ್ ಕಟುಕತನವನ್ನು ನೆನಪಿಸುವ ಭಯೋತ್ಪಾದಕತೆಯನ್ನು ಎದುರಿಸಿ ತಮ್ಮ ಹೋರಾಟವನ್ನು ಮುಂದುವರೆಸುತ್ತಿದ್ದಾರೆ.

# ತ್ರಿಪುರಾದಲ್ಲಿ ಭಯೋತ್ಪಾದಕ ವಿರೋಧಿ ದಿನಾಚರಣೆ

ಎಡರಂಗ ಪಕ್ಷಗಳ ಕರೆಗೆ ಓಗೊಟ್ಟು ತ್ರಿಪುರಾದ ಜನತೆ ಜೂನ್ 25 ರಂದು ರಾಜ್ಯಾದ್ಯಂತ ಭಯೋತ್ಪಾದನೆ ವಿರೋಧಿ ದಿನಾಚರಣೆಯನ್ನು ಆಚರಿಸಿದರು. ಭಯೋತ್ಪಾದಕ ತಂತ್ರಗಳನ್ನು ಎದುರಿಸಿ ಅವರು ಕಾಂಗ್ರೆಸ್ (ಐ) -ಟಿ. ಯು. ಜೆ. ಎಸ್. ಅಲ್ಪಮತದ ಸರ್ಕಾರದ ಕುಮ್ಮಕ್ಕಿನಿಂದ ಗೂಂಡಾ-ಪೋಲೀಸ್-ಸೇನಾಪಡೆಗಳು ಎಸಗುತ್ತಿರುವ ಅತ್ಯಾಚಾರಗಳ ವಿರುದ್ಧ ಪ್ರತಿಭಟನೆಯ ಐಕ್ಯದನಿಯನ್ನು ಎತ್ತಲು ಸಾವಿರಾರು ಸಂಖ್ಯೆಯಲ್ಲಿ ರ್‍ಯಾಲಿಗಳಲ್ಲಿ, ಮೆರವಣಿಗೆಗಳಲ್ಲಿ ಭಾಗವಹಿಸಿದರು.

ಎಲ್ಲಾ ಸಬ್-ಡಿವಿಜನ್ ಕೇಂದ್ರಗಳೂ ಸೇರಿದಂತೆ 17 ಸ್ಥಳಗಳಲ್ಲಿ ರ್‍ಯಾಲಿಗಳು, ಸಭೆಗಳು ನಡೆದವು.

ಬಿಲೋನಿಯಾದಲ್ಲಿನ ರ್‍ಯಾಲಿಯನ್ನುದ್ದೇಶಿಸಿ ಸಿ. ಪಿ. ಐ. (ಎಂ) ಪಾಲಿಟ್‌ಬ್ಯೂರೋ ಸದಸ್ಯ ಹಾಗೂ ತ್ರಿಪುರಾ ವಿಧಾನಸಭೆಯಲ್ಲಿ ವಿರೋಧ ಪಕ್ಷದ ಮುಖಂಡ ನೃಪೇನ್‌ಚಕ್ರವರ್ತಿಯವರು ಮಾತನಾಡಿದರು.

ಅಗರ್ತಲಾದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಸಿ. ಪಿ. ಐ. (ಎಂ) ಕೇಂದ್ರಸಮಿತಿ ಸದಸ್ಯ ದಶರತ್‌ದೇಬ್ ಮಾತನಾಡುತ್ತಾ ತ್ರಿಪುರಾದ ದೂರದ ಕಿರುಗ್ರಾಮವೊಂದರಲ್ಲಿ ಬುಡಕಟ್ಟು ಮಹಿಳೆಯರ ಮೇಲೆ ಅತ್ಯಾಚಾರ ನಡೆಯುತ್ತಿದ್ದಾಗ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಂಘಟಿಸಿರುವ ಕಾಂಗ್ರೆಸ್ (ಐ) ಮುಖಂಡರು ಎಲ್ಲಿದ್ದರು? ಟಿ. ಯು. ಜೆ. ಎಸ್. ನ ತ್ರಿಪುರಾ ಸುಂದರಿ ನಾರೀ ಬಾಹಿನಿ ಎಲ್ಲಿತ್ತು, ಬುಡಕಟ್ಟು ಮಹಿಳೆಯರ ಬಗ್ಗೆ ಮೊಸಳೆ ಕಣ್ಣೀರಿಡುವ ಮಹಾರಾಣಿ ವಿಭುಕುಮಾರಿದೇವಿ ಎಲ್ಲಿದ್ದರು ? ಎಂದು ಪ್ರಶ್ನಿಸಿದರು. ಟಿ. ಯು. ಜೆ. ಎಸ್. ಗೆ ಬುಡಕಟ್ಟು ಮಹಿಳೆಯರ ಮಾನಕ್ಕಿಂತ ಮಂತ್ರಿ ಕುರ್ಚಿಗಳು ಮುಖ್ಯ ಎಂದು ಅವರು ಟೀಕಿಸಿದರು.

ಒಟ್ಟಿನಲ್ಲಿ, ಭಯೋತ್ಪಾದನೆ-ವಿರೋಧಿ ದಿನಾಚರಣೆ ಜನರಲ್ಲಿ ಮತ್ತೆ ಭರವಸೆ ಮೂಡಿಸಿ ಅವರಲ್ಲಿ ಹೋರಾಟದ ಸ್ಫೂರ್ತಿಯನ್ನು ಹೆಚ್ಚಿಸಿದೆ ಎನ್ನಬಹುದು.

## ನಿಕಾರಾಗುವಾ ಜನತೆಗೆ ಅಭಿನಂದನೆ

ತಮ್ಮ ಜುಲೈ 19ರ ಕ್ರಾಂತಿಯ ಒಂಭತ್ತನೇ ವಾರ್ಷಿಕೋತ್ಸವವನ್ನು ನಿಕಾರಾಗುವಾದ ಧೀರ ಜನತೆ ಆಚರಿಸುತ್ತಿರುವ ಸಂದರ್ಭದಲ್ಲಿ ಅವರಿಗೆ ಕ್ರಾಂತಿಕಾರಿ ಶುಭಾಶಯಗಳನ್ನು ಕೋರಿರುವ ಸಿ.ಪಿ.ಐ.(ಎಂ) ರೇಗನ್ ಆಡಳಿತದ ಆಕ್ರಮಣಕ ನೀತಿಯನ್ನು ಎದುರಿಸುತ್ತಿರುವ ಸದ್ಯದ ಕ್ಲಿಷ್ಟ ಸಮಯದಲ್ಲಿ ನಿಕಾರಾಗುವಾದ ಜನತೆಗೆ ನೈತಿಕ ಹಾಗೂ ಭೌತಿಕ ಬೆಂಬಲ ಕ್ರೋಢೀಕರಿಸುವ ಕೆಲಸವನ್ನು ಮುಂದುವರಿಸುವ ಭರವಸೆ ನೀಡಿದೆ.

## ಮಧ್ಯ ಯುರೋಪಿನಲ್ಲಿ ಶಾಂತಿವಲಯದ ಸಲಹೆ

ಪೂರ್ವ ಜರ್ಮನಿಯ ಸಮಾಜವಾದಿ ಐಕ್ಯತಾ ಪಕ್ಷ ಹಾಗೂ ಪಶ್ಚಿಮ ಜರ್ಮನಿಯ ಸೋಷಲ್ ಡೆಮಾಕ್ರಟಿಕ್ ವಿರೋಧ ಪಕ್ಷ ಇದೇ ಜೂನ್ 7ರಂದು ಮಧ್ಯಯುರೋಪನ್ನು ಶಾಂತಿವಲಯವಾಗಿ ಮಾಡುವ ಬಗ್ಗೆ ತಮ್ಮ ಹಲವು ಜಂಟೀ ಸಲಹೆಗಳನ್ನು ಯುರೋಪಿನ ಜನತೆಯ ಮುಂದಿಟ್ಟಿದ್ದಾರೆ.

## ಸಂಕ್ಷಿಪ್ತ ಸುದ್ದಿಗಳು

# ತಮಿಳುನಾಡಿನಲ್ಲಿ ಶೀಘ್ರ ಚುನಾವಣೆಗೆ ಸಿ. ಪಿ. ಐ. (ಎಂ) ಪ್ರಕ್ಷೋಭೆ

ರಾಜ್ಯಪಾಲರ ಮೂಲಕ ಕಾಂಗ್ರೆಸ್ (ಐ)ನ ಆಳ್ವಿಕೆಯ ವಿರುದ್ಧ ತಮಿಳುನಾಡಿನಲ್ಲಿ ಜನತೆಯ ಕ್ರೋಧ ದಿನೇ-ದಿನೇ ಹೆಚ್ಚುತ್ತಿದೆ. ಈ ವಾತಾವರಣದಲ್ಲಿ ಜೂನ್ 25 ರಿಂದ ಜುಲೈ 3ರ ನಡುವೆ ರಾಜ್ಯಾದ್ಯಂತ ಸಿ. ಪಿ. ಐ. (ಎಂ) ಶೀಘ್ರ ವಿಧಾನ ಸಭಾ ಚುನಾವಣೆ ನಡೆಸಬೇಕೆಂದು ವ್ಯಾಪಕ ಪ್ರಚಾರ ಕಾರ್ಯ ಸಂಘಟಿಸಿತು. ಇ. ಎಂ. ಎಸ್., ಸಮರ್ ಮುಖರ್ಜಿ, ನೃಪೇನ್ ಚಕ್ರವರ್ತಿ, ಇ. ಕೆ. ನಾಯನಾರ್, ಟಿ. ಕೆ. ರಾಮಕೃಷ್ಣನ್ ಹಾಗೂ ತ್ರಿಪುರಾದ ಎಂ. ಪಿ. ಕಾಂ. ಬಾಜುಬಾನ್ ರಿಯಾಂಗ್ ಈ ಸಭೆಗಳನ್ನುದ್ದೇಶಿಸಿ ಮಾತನಾಡಿದರು. ಗಣನೀಯ ಸಂಖ್ಯೆಯಲ್ಲಿ ಜನತೆ ಭಾಗವಹಿಸಿದ್ದ ಈ ಸಭೆಗಳಲ್ಲಿ ಚುನಾವಣಾ ನಿಧಿಗೂ ಸಾಕಷ್ಟು ಸಂಗ್ರಹ ನಡೆಸಲಾಯಿತು.

ಈ ಸಭೆಗಳಲ್ಲಿ ಸಿ. ಪಿ. ಐ. (ಎಂ) ಮುಖಂಡರು ಮುಖ್ಯವಾಗಿ ಮೂರು ವಿಷಯಗಳತ್ತ ಜನತೆಯ ಗಮನ ಸೆಳೆದರು. 1. ತಮಿಳುನಾಡಿನಲ್ಲಿ ಚುನಾವಣೆ ಮುಂದೂಡುವ ಕಾಂಗ್ರೆಸ್(ಐ) ತಂತ್ರ 2. ತ್ರಿಪುರಾದಲ್ಲಿ ಪ್ರಜಾಸತ್ತೆಯ ಕೊಲೆ. ಅದರ ವಿರುದ್ಧ ತ್ರಿಪುರಾ ಜನತೆಯ ಧೀರ ಸಮರ ಹಾಗೂ 3. ತಮಿಳುನಾಡಿನಾದ್ಯಂತ ಸರ್ಕಾರಿ ನೌಕರರು ಹಾಗೂ ಅಧ್ಯಾಪಕರ ಮಹಾ ಒಕ್ಕೂಟದ ನೇತೃತ್ವದಲ್ಲಿ ವ್ಯಾಪಕ ಮುಷ್ಕರ.

ತಮಿಳುನಾಡಿನ ಜನತೆ ಸ್ವಾತಂತ್ರ್ಯ ನಂತರ 20 ವರ್ಷಗಳಿಗಿಂತಲೂ ಹೆಚ್ಚು ಕಾಲ ಕಾಂಗ್ರೆಸ್ಸನ್ನು ಅಧಿಕಾರದಿಂದ ದೂರವಿಟ್ಟು ಒಂದು ವಿಶಿಷ್ಟ ದಾಖಲೆ ನಿರ್ಮಿಸಿದ್ದಾರೆ. ಅದನ್ನು ಕಾದುಕೊಳ್ಳಬೇಕೆಂದು ಇ. ಎಂ. ಎಸ್. ತಮಿಳುನಾಡಿನ ಜನತೆಗೆ ಕರೆಯಿತ್ತರು.

ಈ ಮೊದಲು, ತಮಿಳುನಾಡಿಗೆ ಆಗಮಿಸಿದ ತ್ರಿಪುರಾದ ಮುಖಂಡರಾದ ಕಾಂ. ನೃಪೇನ್ ಚಕ್ರವರ್ತಿ ಹಾಗೂ ಬಾಜುಬಾನ್ ರಿಯಾಂಗ್‌ರವರಿಗೆ ಮಧುರೆಯಲ್ಲಿ ದುಡಿಯುವ ಜನತೆ ಭಾರೀ ಸ್ವಾಗತ ನೀಡಿತ್ತು. ಮಧುರೈ ನಗರದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸುಮಾರು 20 ಸಾವಿರ ಮಂದಿ ಕಾಂ. ನೃಪೇನ್‌ಚಕ್ರವರ್ತಿಯವರ ಮಾತುಗಳನ್ನು ಆಲಿಸಿದರು.

## ದುರ್ಬಲ ವರ್ಗಗಳ ಮೇಲೆ ಅತ್ಯಾಚಾರಗಳ ವಿರುದ್ಧ ವಾರಾಚರಣೆ

ಜೂನ್ 30 ರಂದು ಅಖಿಲ ಭಾರತ ಕೃಷಿಕಾರ್ಮಿಕರ ಸಂಘದ ಕೇಂದ್ರ ಕಾರ್ಯಕಾರಿ ಸಮಿತಿಯ ಸಭೆ ತ್ರಿಪುರಾ, ಬಿಹಾರ್ ಹಾಗೂ ಮಧ್ಯಪ್ರದೇಶದಲ್ಲಿ ಹರಿಜನ, ಗಿರಿಜನರ ಮೇಲೆ ಅತ್ಯಾಚಾರಗಳು ಹೆಚ್ಚುತ್ತಿರುವುದನ್ನು ಗಮನಿಸುತ್ತಾ ಕನಿಷ್ಟ ಕೂಲಿಯ ಜಾರಿ ಮತ್ತಿತರ ಬೇಡಿಕೆಗಳಿಗಾಗಿ ಹೋರಾಡಿ ಮುಂದುವರೆಸುತ್ತಾ ಆಗಸ್ಟ್ 1 ರಿಂದ 7 ರವರೆಗೆ ಅತ್ಯಾಚಾರ-ವಿರೋಧಿ ವಾರಾಚರಣೆ ನಡೆಸಬೇಕೆಂದು ಕರೆ ನೀಡಿದೆ. ಸೆಪ್ಟಂಬರ್ ತಿಂಗಳಲ್ಲಿ ನಡೆಯಲಿರುವ ಎಡಪಕ್ಷಗಳ ನೇತೃತ್ವದ ರೈತ ಹಾಗೂ ಕೃಷಿ ಕಾರ್ಮಿಕ ಸಂಘಟನೆಗಳ ಜಂಟಿ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದೂ ಕಾರ್ಯಕಾರಿ ಸಮಿತಿ ಕರೆ ನೀಡಿದೆ. ಮುಚ್ಚಿದ ಕಾರ್ಖಾನೆಗಳನ್ನು ತೆರೆಸಲು ರಾಸ್ತಾ ರೋಕೋ.

ಆಂಧ್ರಪ್ರದೇಶದಲ್ಲಿ 1986 ರಲ್ಲಿ 8734 ಕಾರ್ಖಾನೆಗಳು ಮುಚ್ಚಿದ್ದವು! ಇವುಗಳಲ್ಲಿ 50 ದೊಡ್ಡ ಕಾರ್ಖಾನೆಗಳು.ಕೆಲವು ಕಾರ್ಖಾನೆಗಳಲ್ಲಿ ಮೂರು ಸಾವಿರಕ್ಕೂ ಹೆಚ್ಚು ಕಾರ್ಮಿಕರು ದುಡಿಯುತ್ತಿದ್ದರು. ಕಳೆದ ವರ್ಷ ಹೈದರಾಬಾದಿನಲ್ಲಿ ಈ ಬಗ್ಗೆ ಒಂದು ಸಮಾವೇಶ ನಡೆದು ರಾಜ್ಯ ಸರ್ಕಾರಕ್ಕೆ ಈ ಬಗ್ಗೆ ಮನವಿಯೊಂದನ್ನು ಸಲ್ಲಿಸಿದರೂ ಏನೂ ಕ್ರಮ ಕೈಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಸಿ.ಐ.ಟಿ.ಯು.ನ ಆಂಧ್ರರಾಜ್ಯ ಸಮಿತಿಯ ನಿರ್ಣಯದ ಮೇರೆಗೆ ರಾಜ್ಯಾದ್ಯಂತ ಜೂನ್ 23 ರಂದು 8 ಗಂಟೆಯಿಂದ 10 ಗಂಟೆಯವರೆಗೆ ಎರಡು ಗಂಟೆಗಳ ರಸ್ತೆ ತಡೆ ಕಾರ್ಯಕ್ರಮ ಸಮಸ್ಯೆಯ ಗಂಭೀರತೆಯನ್ನು ಜನತೆಯ ಗಮನಕ್ಕೆ ತಂದು ಸರ್ಕಾರದ ಮೇಲೆ ಒತ್ತಡ ತರುವಲ್ಲಿ ಸಾಕಷ್ಟು ಯಶಸ್ವಿಯಾಗಿದೆ.

## ಮುರ್ಷಿದಾಬಾದ್ ಘಟನೆಗಳ ಬಗ್ಗೆ ನ್ಯಾಯಾಂಗ ತನಿಖೆ

ಪಶ್ಚಿಮ ಬಂಗಾಳದಲ್ಲಿ ಕೋಮು ಸೌಹಾರ್ದದ ಒಂದು ದಶಕದ ಕೀರ್ತಿಗೆ ಮಸಿ ಬಳಿಯಲೆತ್ನಿಸಿರುವ ಮುರ್ಷಿದಾಬಾದ್ ಜಿಲ್ಲೆಯಲ್ಲಿನ ಖಾಸಿಂ ಬಜಾರ್ ಹಾಗೂ ನಸೀಲ್‌ಬುರ್‌ನ ಘಟನೆಗಳ ಬಗ್ಗೆ ಪಶ್ಚಿಮ ಬಂಗಾಳ ಸರ್ಕಾರ ನ್ಯಾಯಾಂಗ ತನಿಖೆ ನಡೆಸಲು ನಿರ್ಧರಿಸಿದೆ. ಈ ನಿರ್ಧಾರವನ್ನು ಎಲ್ಲಾ ವಿಭಾಗದ ಜನಗಳು ಸ್ವಾಗತಿಸಿದ್ದಾರೆ.

ಒಂದು ದಶಕದ ಕಾಲ ಕೋಮು ಸೌಹಾರ್ದ ಕಾದುಕೊಂಡಿದ್ದ ಜನ ಬಹುಶಃ ಸ್ವಲ್ಪ ಅಜಾಗರೂಕರಾದ್ದರಿಂದ ಕೋಮುಶಕ್ತಿಗಳು ಕೋಮುದ್ವೇಷವನ್ನು ಎಬ್ಬಿಸಲು ಸಾಧ್ಯವಾಗಬಹುದು. ಸ್ಥಳೀಯ ಆಡಳಿತ ಜಾಗರೂಕವಾಗಿದ್ದಿದ್ದರೆ ಈ ದುರಂತ ನಡೆಯುತ್ತಿರಲಿಲ್ಲ ಎಂದು ಭಾವಿಸಲಾಗಿದೆ.

## ವಿಶ್ವಾದ್ಯಂತ ಮಾಂಡೆಲಾ ಬಿಡುಗಡೆಗಾಗಿ ಒತ್ತಾಯ

ಭಾರತವೂ ಸೇರಿದಂತೆ ವಿಶ್ವಾದ್ಯಂತ ಪ್ರಜಾಪ್ರಭುತ್ವವಾದಿ ಜನತೆ ಮೆರವಣಿಗೆಗಳು, ಸಾರ್ವಜನಿಕ ಸಭೆಗಳು, ವಿಚಾರ ಸಂಕಿರಣಗಳು, ಪ್ರದರ್ಶನಗಳು ಇತ್ಯಾದಿಗಳ ಮೂಲಕ 26 ವರ್ಷಗಳಿಂದ ಪ್ರಿಟೋರಿಯಾದ ವರ್ಣ ದ್ವೇಷಿಗಳ ಕಾರಾಗೃಹದಲ್ಲಿರುವ ನೆಲ್ಸನ್ ಮಂಡೇಲಾರವರ 70ನೇ ಜನ್ಮದಿನವನ್ನು ಆಚರಿಸಿ ಅವರನ್ನು ತಕ್ಷಣ ಬಿಡುಗಡೆಗೊಳಿಸಬೇಕೆಂದು ಒತ್ತಾಯಿಸಿದ್ದಾರೆ. ಪಶ್ಚಿಮಬಂಗಾಳದಲ್ಲಿ ಎಡರಂಗ ಸರ್ಕಾರ ಕಲ್ಕತ್ತೆಯ ಒಂದು ಉದ್ಯಾನವನ್ನು ನೆಲ್ಸನ್ ಮಂಡೇಲಾ ಉದ್ಯಾನ ಎಂದು ಹೆಸರಿಸಿ ತನ್ನ ಗೌರವ ಸೂಚಿಸಿದೆ.

ಆದರೆ ಎಂದಿನಂತೆ ದಕ್ಷಿಣ ಆಫ್ರಿಕಾದ ವರ್ಣದ್ವೇಷಿ ಸರ್ಕಾರ ದೇಶದಲ್ಲಿ ಮಂಡೇಲಾ ಜನ್ಮದಿನಾಚರಣೆ ಕುರಿತ ಎಲ್ಲಾ ಸಮಾರಂಭಗಳ ಮೇಲೆ ನಿರ್ಬಂಧ ಹೇರಿ ವಿಶ್ವಾದ್ಯಂತ ಮೊಳಗಿದ ಒತ್ತಾಯವನ್ನು ನಿರ್ಲಕ್ಷ ಮಾಡಿದೆ.

## ರಾಷ್ಟ್ರವ್ಯಾಪಿ ಜೈಲು ಭರೋ ಚಳುವಳಿ ಯಶಸ್ವಿಗೊಳಿಸಿರಿ

(ಒಂದನೇ ಪುಟದಿಂದ)

ಭೂಮಿಯಲ್ಲಿ ಹಲವಾರು ವರ್ಷಗಳಿಂದ ಸಾಗುವಳಿ ಮಾಡಿದ ರೈತರಿಗೆ ಕೂಡಲೇ ಹಕ್ಕು ಪತ್ರ ನೀಡಬೇಕು.

ರಾಜ್ಯ ಸರ್ಕಾರ ಹೊರಡಿಸಿದ ಸುಗ್ರೀವಾಜ್ಞೆ ತಡೆದಿರುವ, ಕ್ರಮವು ಸರಿಯಿಲ್ಲ. ಜಮೀನುದಾರರಿಗೆ, ಪ್ಲಾಂಟೇಷನ್ ಮಾಲೀಕರಿಗೆ ಸಹಾಯವಾಗುವ ಅಂಶಗಳನ್ನು ತೆಗೆದು 1984ರ ನಂತರ ಸಾಗುವಳಿ ಮಾಡಿರುವ ಪ್ರಚೋದಿಸುವವರನ್ನು ಶಿಕ್ಷೆಗೆ ಒಳಪಡಿಸುವ ಅಂಶಗಳನ್ನು ತೆಗೆದುಹಾಕಬೇಕು. ಕಾಯಿದೆ ಘೋಷಿತವಾಗುವ ಸಮಯದವರೆಗೆ ಸಾಗುವಳಿ ಮಾಡುವವರಿಗೆ ಪಟ್ಟ ನೀಡುವಂತಾಗಬೇಕು.

ಅಧಿಕಾರಿಗಳ ಭ್ರಷ್ಟಾಚಾರವನ್ನು ತಡೆಯಲು ರೈತರಿಗೆ ಭೂಮಿ ಸಿಗುವಂತಾಗಲು ಎಲ್ಲಾ ರೈತ ಕೃಷಿ ಕೂಲಿಕಾರ ಸಂಘಗಳ ರಾಜ್ಯ ಹಾಗೂ ಜಿಲ್ಲಾವಾರು, ತಾಲ್ಲೂಕುವಾರು, ಸಮಿತಿಗಳನ್ನು ರಚಿಸಬೇಕು.

ಅ) ಪಶ್ಚಿಮ ಬಂಗಾಳ ಮಾದರಿಯಲ್ಲಿ ಭೂ ಸುಧಾರಣೆಯನ್ನು ರಾಜ್ಯದಲ್ಲಿ ಜಾರಿಗೆ ತರಬೇಕು.

ಆ) ರೈತರು ಬೆಳೆಯುವ ಪ್ರಮುಖವಾಗಿರತಕ್ಕಂತಹ ಬೆಳೆಗಳಿಗೆ ಬೆಂಬಲಿತ ಬೆಲೆಗಳನ್ನು ನಿಗದಿಗೊಳಿಸಬೇಕು. ಹತ್ತಿ ಶೇಂಗ, ಕಬ್ಬು, ನೆಲ್ಲು, ಜೋಳ, ತಂಬಾಕು ಅಡಿಕೆ, ತೆಂಗು, ತೊಗರಿ, ಸೂರ್ಯಕಾಂತಿ, ಬೆಳೆಯನ್ನು ಬೆಲೆ ನಿಗಧಿಸಿ, ಬೆಳೆವಾರು ರಾಜ್ಯ ನಿಗಮಗಳನ್ನು ರಚಿಸಿ, ಖರೀದಿಸುವಂತೆ ಆಗಬೇಕು.

ಇ) ಕೃಷಿ ಕೂಲಿಕಾರರಿಗೆ ಕನಿಷ್ಟ ಕೂಲಿ ಜಾರಿಗೆ ಬರಬೇಕು. ವರ್ಷವಿಡಿ ಉದ್ಯೋಗದ ಭದ್ರತೆಯನ್ನು ಒದಗಿಸಬೇಕು.

ಈ) ಕೃಷಿ ಕೂಲಿಕಾರರ ಭದ್ರತೆಗೆ ರಾಷ್ಟ್ರೀಯ ಕಾಯಿದೆ ಜಾರಿಗೆ ಬರಬೇಕು.

ಉ) ಬರಗಾಲಕ್ಕೆ ಶಾಶ್ವತ ಪರಿಹಾರವನ್ನು ಒದಗಿಸಬೇಕು. ನೆರೆ ಹಾವಳಿಯನ್ನು ತಡೆಗಟ್ಟಬೇಕು. ಇವುಗಳಿಂದ ಬಾಧಿತರಾಗುವವರಿಗೆ ಪರಿಹಾರ ಒದಗಿಸಬೇಕು.

ಊ) ರಾಜ್ಯದಲ್ಲಿ ಇರುವ ನೀರಾವರಿ ಯೋಜನೆಗಳನ್ನು ತ್ವರಿತ ಗತಿಯಲ್ಲಿ ಕೈಗೆತ್ತಿಕೊಂಡು ಮುಗಿಸಬೇಕು.

ಋ) ಕೃಷಿ ಸಾಲವನ್ನು ವ್ಯಾಪಕವಾಗಿ ಕಡಿಮೆ ಬಡ್ಡಿಯಲ್ಲಿ ಒದಗಿಸುವ ಯೋಜನೆ ರೂಪಿಸಬೇಕು. ಮಧ್ಯವರ್ತಿ, ಬ್ಯಾಂಕುಗಳನ್ನು ಕಳುಹಿಸಿ, ಇವುಗಳ ಮೂಲಕವಾಗಿ ರೈತರಿಗೆ ಸಾಲವನ್ನು ಒದಗಿಸುವಂತಾಗಬೇಕು.

ಸಹಕಾರಿ ಸಂಘಗಳಿಂದ ಹೆಚ್ಚು ಸಾಲ ಒದಗಿಸುವಂತಾಗಿ ಗ್ರಾಮೀಣ ಪಟ್ಟಭದ್ರ ಹಿತಾಸಕ್ತಿಯನ್ನು ತಡೆಯುವಂತಾಗಬೇಕು.

ಈಗಿರುವ ದುಡಿಯುವ ರೈತರ ಸಾಲ ಭಾರವನ್ನು ಋಣಮುಕ್ತ ಗೊಳಿಸಬೇಕು. ಸಾಲದ ವಸೂಲಿಗೆ ಭೂಮಿ ಹರಾಜು ಬಳಕೆ ವಸ್ತುಗಳ ಹರಾಜು ಹಾಗೂ ರೈತರ ಬಂಧನಗಳನ್ನು ತಡೆಯಬೇಕು.

ಅ) 14 ದಿನಬಳಕೆ ಹಾಗೂ ಕೃಷಿ ಬಳಕೆ ಅಗತ್ಯ ವಸ್ತುಗಳನ್ನು ಅವಶ್ಯಕತೆಯ ಆಧಾರದಲ್ಲಿ ಪಡಿತರಪದ್ಧತಿಯ ಮುಖಾಂತರ ವಿತರಣೆ ಆಗುವಂತೆ ಅವಕಾಶವನ್ನು ಕಲ್ಪಿಸಿಕೊಡತಕ್ಕದ್ದು.

ಆ) ವಸತಿ ರೈತರಿಗೆ ಸಾಮೂಹಿಕವಾಗಿ ವಸತಿ, ಸ್ಥಳ, ಹಾಗೂ ಜನತಾ ಮನೆ ಒದಗಿಸುವಂತೆ ಆಗಬೇಕು.

ಇ) ವಿದ್ಯುತ್ ಖೋತಾವನ್ನು ರದ್ದುಗೊಳಿಸಿ, ಹಗಲುರಾತ್ರಿ, ಗ್ರಾಮೀಣ ನೀರಾವರಿಗೆ ಬೇಕಾಗುವಂತಹ ವಿದ್ಯುತ್‌ನ್ನು ಒದಗಿಸಬೇಕು.

ಈ) ಹರಿಜನ, ಗಿರಿಜನ, ದಲಿತ, ಮಹಿಳೆ ಹಾಗೂ ಅಲ್ಪ ಸಂಖ್ಯಾತರ ಮೇಲೆ ನಡೆಯುವ ದೌರ್ಜನ್ಯ ರದ್ದಾಗಬೇಕು.

ಉ) ರಾಜ್ಯಗಳಿಗೆ ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸಬೇಕು.

ಊ) ರಾಜ್ಯದ ಬೆಳವಣಿಗೆಗೆ ಬೇಕಾಗುವಷ್ಟು ಎನ್. ಆರ್. ಇ. ಪಿ. ಹಾಗೂ ಡಿ.ಆರ್.ಡಿ.ಎಸ್. ಹಾಗೂ ಆರ್.ಎಲ್. ಇ.ಜಿ.ಪಿ. ಯೋಜನೆಗಳನ್ನು ರಚಿಸಬೇಕು.

**ಕರ್ನಾಟಕ ಪ್ರಾಂತ ರೈತ ಸಂಘ**
ರಾಜ್ಯ ಸಮಿತಿ
**ಕರ್ನಾಟಕ ರಾಜ್ಯ ಕೃಷಿ ಕೂಲಿಗಾರರ ಸಂಘ**
ರಾಜ್ಯ ಸಮಿತಿ

## ಮಂಡ ಪಂಚಾಯತಿ ಕೆಲಸಗಾರರ ವಿಜಯ

ಗುಲ್ಬರ್ಗಾ ಜಿಲ್ಲೆಯ ಮಂಡಲ ಪಂಚಾಯತಿ ನೌಕರರು ತಮಗೆ ಹೆಚ್ಚಿನ ವೇತನ ಮತ್ತು ಇತರ ಸೌಲಭ್ಯಗಳು ಸಿಗಬೇಕೆಂದೂ, ಕಳೆದ ಒಂದು ವರ್ಷದಿಂದಲೂ ಸಂಘ ಕಟ್ಟಿ ಹೋರಾಡುತ್ತ ಬಂದಿದ್ದಾರೆ. ಮಂಡಲ ಪಂಚಾಯತಿ ಕೆಲಸಗಾರರಿಗೆ ಕರ್ನಾಟಕ ರಾಜ್ಯಾದ್ಯಂತ ಬರೇ 25 ರಿಂದ 50 ರೂ. ಲಭ್ಯವಾಗುತ್ತಿದೆ. ನೌಕರಿಯ ಭದ್ರತೆಯಿಲ್ಲದಾಗಿದೆ. ಆ ಕಾರಣದಿಂದ ಇದೇ ವರ್ಷ ಜನೇವರಿ ತಿಂಗಳಲ್ಲಿ ಗುಲ್ಬರ್ಗದಲ್ಲಿ ಸಮಾವೇಶ ನಡೆದು ರಾಜ್ಯ ಮಟ್ಟದ ಸಂಘ ಕಟ್ಟಿದ್ದಾರೆ. ಅದಕ್ಕೆ ಜಿಲ್ಲಾ ಪರಿಷತ್ ಸದಸ್ಯ ಮಾರುತಿ ಮೊನ್ನಡೆಯವರು ಅಧ್ಯಕ್ಷ, ಎನ್. ಕೆ. ಉಪಾಧ್ಯಾಯರು ಕಾರ್ಯದರ್ಶಿಯಾಗಿದ್ದಾರೆ.

ಹಲವಾರು ಸಲ ಹೋರಾಟ ಮಾಡಿದರೂ ವಿಫಲವಾದಾಗ ಜುಲೈ 11 ರಿಂದ ಒಂದು ಸಾವಿರ ಕೆಲಸಗಾರರು ಗುಲ್ಬರ್ಗ ಜಿಲ್ಲಾ ಪರಿಷತ್ ಕಛೇರಿ ಮುಂದೆ ಸತ್ಯಾಗ್ರಹ ಪ್ರಾರಂಭ ಮಾಡಿದರು. ನಾಲ್ಕನೇ ದಿವಸ ಜಿಲ್ಲಾ ಪರಿಷತ್ ಉಪಾಧ್ಯಕ್ಷರು ಕಸಗುಡಿಸುವವರಿಗೆ ತಿಂಗಳಿಗೆ ರೂ. 250 ರೂಪಾಯಿ, ಪಂಪ ಆಪರೇಟರ, ಇಲೆಕ್ಟ್ರಿಕ್‌ಲ್ಯಾನಮೆನ್ ಅವರಿಗೆ ರೂ. 300, ಬಿಲ್ ಕಲೆಕ್ಟರ ಅವರಿಗೆ ರೂ. 350 ಕೊಡುವುದಾಗಿಯೂ ಇತರ ಬೇಡಿಕೆಗಳನ್ನು ಸರ್ಕಾರದ ಜೊತೆಯಲ್ಲಿ ಚರ್ಚಿಸುವುದಾಗಿಯೂ ಲಿಖಿತ ಆಶ್ವಾಸನೆಕೊಟ್ಟ ನಂತರ ಸತ್ಯಾಗ್ರಹ ಮುಕ್ತಾಯಗೊಳಿಸಲಾಯಿತು.

ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿರುವ ಮಂಡಲ ಪಂಚಾಯಿತಿ ನೌಕರರಿಗೆ ತಾತ್ಕಾಲಿಕವಾಗಿ ಈ ಬೇಡಿಕೆಗಳು ಲಭ್ಯವಾಗಿವೆ. ಹೆಚ್ಚಿನ ಬೇಡಿಕೆಗಳ ಸಲುವಾಗಿ ಹೋರಾಡ ಬೇಕಾಗಿದೆ. ಗುಲ್ಬರ್ಗ ಜಿಲ್ಲೆಯ ಮಂಡಲ ಪಂಚಾಯತಿ ನೌಕರರ ಅನುಭವವನ್ನು ಮುಂದಿಟ್ಟುಕೊಂಡು ರಾಜ್ಯಮಟ್ಟದ ಸಂಘಟನೆ ಕಟ್ಟಲು ಇತರ ಭಾಗದ ಮಂಡಲ ಪಂಚಾಯತಿ ನೌಕರರು ಮುಂದೆ ಬರಬೇಕೆಂದು, ಕರ್ನಾಟಕ ರಾಜ್ಯ ಮಂಡಲ ಪಂಚಾಯತಿ ನೌಕರ ಸಂಘದ ಅಧ್ಯಕ್ಷರಾದ ಮಾರುತಿ ಮೊನ್ನಡೆ ಮತ್ತು ಪ್ರಧಾನ ಕಾರ್ಯದರ್ಶಿ ಎನ್. ಕೆ. ಉಪಾಧ್ಯಾಯರು ಕರೆ ನೀಡಿದ್ದಾರೆ.

## ಕಾರಂತ ವರದಿ ಜಾರಿಯಾಗಬೇಕು

(2ನೇ ಪುಟದಿಂದ)

1980ರಲ್ಲಿ ಡಾ|| ಕಾರಂತ ಸಮಿತಿ ಸಲ್ಲಿಸಿದ ವರದಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಚಲನಚಿತ್ರ ನೀತಿ ರೂಪಿಸಲು ಸರಿಯಾದ ನಿರ್ದೇಶನ ಕೊಡುತ್ತಿದೆ ಎಂದು ಯಾವುದೇ ಅನುಮಾನವಿಲ್ಲದೆ ಹೇಳಬಹುದು. ವರದಿಯಲ್ಲಿರುವ ಒಂದೇ ಒಂದು ದೋಷವೆಂದರೆ ಫಿಲಂನ್ನು ರಾಜ್ಯ ಪಟ್ಟಿಯಿಂದ ಕೇಂದ್ರ ಪಟ್ಟಿಗೆ ಹಾಕಲು ಮಾಡಿರುವ ಸಲಹೆ.

ಹಲವು ಭಾಷೆ, ಪ್ರದೇಶ, ಸಂಸ್ಕೃತಿಗಳಿರುವ ಭಾರತದಲ್ಲಿ ಸಂಸ್ಕೃತಿಯ ಭಾಗವಾಗಿರುವ ಫಿಲಂ ನೀತಿ ರಾಜ್ಯ ಸರ್ಕಾರದಿಂದ ಕಿತ್ತುಕೊಳ್ಳುವುದು ಭಾವೀ ಸರ್ವಾಧಿಕಾರಿಗಳಿಗೆ ರಾಜ್ಯದ ಸ್ವಾಯತ್ತತೆಯನ್ನು ಹೊಡೆಯಲು ಖಡ್ಗ ಕೊಟ್ಟಂತೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಚರ್ಚೆ ನಡೆಸಿ ರಾಷ್ಟ್ರೀಯ ಚಲನಚಿತ್ರ ನೀತಿ ರೂಪಿಸಲು ಫಿಲಂನ್ನು ಕೇಂದ್ರ ಪಟ್ಟಿಗೆ ಸೇರಿಸುವ ಅಗತ್ಯವೇ ನಿಲ್ಲ. ಈ ಒಂದು ವಿಷಯ ಬಿಟ್ಟು ಡಾ|| ಕಾರಂತ ಸಮಿತಿ ಸಿನೇಮಾವನ್ನು ಅರ್ಥೈಸಿದ "ಒಂಬತ್ತು ಅಂಶ"ಗಳ ಮೇಲೆ ಆಧರಿಸಿದ, ಸಿನೇಮಾ ನೀತಿಯ ''ಹನ್ನೆರಡು ಉದ್ದೇಶಗಳ''ನ್ನು ಈಡೇರಿಸುವುದೊಂದೆ ನಮ್ಮ ಸಿನೇಮಾದ ಆರೋಗ್ಯಕರ ಬೆಳವಣಿಗೆ ಇರುವ ಒಂದೇ ದಾರಿಗೆ.

## ಡಾರ್ಜಿಲಿಂಗ್ ಒಪ್ಪಂದಕ್ಕೆ ರಂಗ ಸಿದ್ಧ

(1ನೇ ಪುಟದಿಂದ)

ಪ್ರಭುತ್ವವಾದೀ ಶಕ್ತಿಗಳ, ನೇಪಾಳ ಭಾಷೆಯಾಡುವ ಚಹಾ ತೋಟದ ಕಾರ್ಮಿಕರು ಮತ್ತು ಸಿ. ಪಿ. ಐ. (ಎಂ), ಸಿ.ಐ.ಟಿ.ಯು. ಕಾರ್ಯಕರ್ತರ ಸಮರ್ಥ ಹಾಗೂ ಧೀರ ಮಧ್ಯಪ್ರವೇಶ ವಿಚ್ಛಿದ್ರಕಾರೀ ಶಕ್ತಿಗಳನ್ನು ಪ್ರತ್ಯೇಕಿಸಿ ದೂರ ಗೊಳಿಸುವಲ್ಲಿ ಮಹತ್ವದ ಪಾತ್ರವಹಿಸಿತು. ಖಡ್ಗ ಝಳಪಿಸುತ್ತಾ ಹತ್ಯಾಕಾಂಡಕ್ಕಿಳಿದ ಆಂದೋಲನಕಾರರನ್ನು ಎದುರಿಸಿ ಹುತಾತ್ಮರಾದ ಟೀ ತೋಟ ಕಾರ್ಮಿಕರು ಮತ್ತು ಸಿ.ಪಿ.ಐ. (ಎಂ) ಸಿ.ಐ.ಟಿ.ಯು. ಕಾರ್ಯಕರ್ತರನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ನೆನಪಿಸಿಕೊಳ್ಳಬೇಕು.

ಈ ಎರಡು ವರ್ಷಗಳ ಕಟು ಅನುಭವ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಕೆಲವು ಮಹತ್ವದ ಪಾಠಕಲಿಸಿದೆ. ಘೀಸಿಂಗ್‌ರ ಆಂದೋಲನದ ಉದ್ದೇಶ, ಹೆಸರು ಏನೇ ಇದ್ದರೂ ನೇಪಾಳಿ ಭಾಷೆಯಾಡುವ ಜನತೆಯ ಬೆಂಬಲ ಅದಕ್ಕೆ ದೊರಕಿತ್ತು. ಇಲ್ಲಿಯೂ ಹಿಂದುಳಿದ ಪರಿಸ್ಥಿತಿ ಬಡತನ, ನಿರಾಸೆಯ ವಿರುದ್ಧ ಅದು ಪ್ರತಿಭಟನೆಯ ಅಭಿವ್ಯಕ್ತಿಯಾಯಿತು. ಬಂಗಾಳದ ಮುಂದುವರಿದ ಸಾರ್ವಜನಿಕ ಅಭಿಪ್ರಾಯದ, ಎಡರಂಗ ಸರ್ಕಾರದ ಸಹಾನುಭೂತಿ ಕೂಡಾ ಅದಕ್ಕಿತ್ತು.

ಆದರೂ ಎಲ್ಲೋ ಹೆಜ್ಜೆ ತಪ್ಪಿತು. ಆಂದೋಲನ ಡಾರ್ಜಿಲಿಂಗ್ ಜನತೆಗೆ ಅಪಾಯಕಾರಿಯಾಯಿತು. ಆಂದೋಲನದ ಮುಖಂಡತ್ವ ಅದಕ್ಕೆ ದೇಶ ವಿರೋಧಿ, ಬಂಗಾಳ-ವಿರೋಧಿ ವಿಚ್ಛಿದ್ರಕಾರಿ ತಿರುವು ನೀಡಿತು. ಬೂರ್ಜ್ವಾ ಭೂಮಾಲಕ ವರ್ಗಗಳ ಬಂಡವಾಳಶಾಹೀ ಮಾರ್ಗದ ಈ ದುಷ್ಫಲಗಳ ವಿರುದ್ಧ ಹೋರಾಡಲು ಇತರ ದುಡಿಯುವ ಜನತೆ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ಸಹಕಾರ ಪಡೆಯುವ ಬದಲು ಡಾರ್ಜಿಲಿಂಗ್ ಶ್ರಮಿಕರನ್ನು ದೇಶದ ಐಕ್ಯತೆಯ ವಿರುದ್ಧ ಎತ್ತಿಕಟ್ಟಲಾಯಿತು. ಇದು ಸಮಸ್ಯೆಯ ಮೂಲವನ್ನರಿಯದ, ಪ್ರತ್ಯೇಕತಾವಾದೀ ಘೋಷಣೆಗಳ ಮೂಲಕ ಸುಲಭದ ಅಡ್ಡಹಾದಿ ಕಂಡುಕೊಳ್ಳುವ ಮುಖಂಡತ್ವದ ಫಲ. ಅದರ ನಿಜವಾದ ವರ್ಗಗುಣವನ್ನು ತೋರಿಸುತ್ತದೆ.

ಇಂತಹ ಸಂದರ್ಭಗಳಲ್ಲಿ ಮುಂದುವರಿದ ಪ್ರಜಾಪ್ರಭುತ್ವ ಶಕ್ತಿಗಳು ಇಬ್ಬಗೆಯಪಾತ್ರವಹಿಸಬೇಕಾಗುತ್ತದೆ. ಒಂದೆಡೆ ಸಂಬಂಧಪಟ್ಟ ಜನವಿಭಾಗಕ್ಕಾದ ಅನ್ಯಾಯಗಳನ್ನು ಸರಿಪಡಿಸಲು ಸರ್ವಪ್ರಯತ್ನ ನಡೆಸುತ್ತಾ, ಇನ್ನೋದೆಡೆ, ಇಂತಹ ಪ್ರತಿಗಾಮೀ ಮುಖಂಡತ್ವದ ವಿಚ್ಛಿದ್ರಕಾರೀ ತಂತ್ರಗಳನ್ನು ವಿರೋಧಿಸಬೇಕು. ಇಂತಹ ಆಂದೋಲನಕ್ಕೆ ಜನ ಬೆಂಬಲವಿರುವುದರಿಂದ ಮುಖಂಡತ್ವ ಯಾವುದೇ ಬೇಡಿಕೆಯೆತ್ತಿದರೂ, ಯಾವುದೇ ತಂತ್ರ ಅನುಸರಿಸಿದರೂ ಅದಕ್ಕೆಲ್ಲಾ ತಲೆಬಾಗಬೇಕು ಎಂದು ದೂರ ಕೈಕಟ್ಟಿನಿಂತು ಉಪದೇಶ ನೀಡುವುದನ್ನು ಕಸಬುಮಾಡಿಕೊಂಡವರು ಮಾತ್ರವೇ ಹೇಳಬಲ್ಲರು.

ತನ್ನ ಪಕ್ಷದ ಸಂಕುಚಿತ ಸ್ವಾರ್ಥ ಸಾಧನೆಗಾಗಿ ವಿಚ್ಛಿದ್ರಕಾರೀ ಶಕ್ತಿಗಳನ್ನು ಬಳಸಲು ಯತ್ನಿಸುವುದು ದೇಶದ ಮತ್ತು ಜನತೆಯ ವಿರುದ್ಧ ಎಸಗುವ ದೊಡ್ಡ ಅಪರಾಧ ಎನ್ನುವುದು ಕಳೆದ ಎರಡು ವರ್ಷಗಳಿಂದ ಕಲಿಯಬೇಕಾದ ಇನ್ನೊಂದು ಪಾಠ. ಕೇಂದ್ರ ಸರ್ಕಾರ ಮತ್ತು ಪ್ರಧಾನ ಮಂತ್ರಿಗಳು ಮೊದಮೊದಲು ಗೂರ್ಖಾಲ್ಯಾಂಡ್ ಉಗ್ರಗಾಮಿಗಳ ಕೃತ್ಯಗಳಿಗೆ ಪರೋಕ್ಷ ಬೆಂಬಲ ಸಂಕುಚಿತವಾದಿ ಅಪಪ್ರಚಾರ ನಡೆಸುತ್ತಿದ್ದಾಗ ರಾಜೀವಗಾಂಧಿಯವರು ಘೀಸಿಂಗ್ ಅಪ್ಪಟ ರಾಷ್ಟ್ರೀಯವಾದಿ ಎಂಬ ಸರ್ಟಿಫಿಕೇಟ್ ನೀಡಿದರು. ಎಡರಂಗ ಸರ್ಕಾರಕ್ಕೆ ಸಾಕಷ್ಟು ಕಿರುಗಳ ಕೇಡಲು ಅವರನ್ನು ಪ್ರೋತ್ಸಾಹಿಸಲಾಯಿತೆಂದೂ ಹೇಳಲಾಗಿದೆ. ಘೀಸಿಂಗ್ ಇದರ ಪೂರ್ಣ ಲಾಭ ಪಡೆದರು. ಮಾತುಗತೆಗಳ ಹಲವಾರು ಬಾರಿ ಮುರಿದುಬಿದ್ದವು. ಜಿ. ಎನ್. ಎಲ್. ಎಫ್. ಹಲವು ಬಾರಿ ಕೊಟ್ಟ ಮಾತಿಗೆ ತಪ್ಪಿತು. ಆಂದೋಲನ ಅವರ ಹತೋಟಿ ಮೀರಿದೆಯೋ ಎಂಬ ಸಂಶಯ ಬರುವಂತಾಯಿತು.

ಕ್ರಮೇಣ ಕೇಂದ್ರ ಸರ್ಕಾರಕ್ಕೆ ತಾನು ದೇಶದ ಐಕ್ಯತೆಯೊಂದಿಗೆ ಅಪಾಯಕಾರಿ ಆಟವಾಡುತ್ತಿದ್ದೇವೆ ಎಂಬ ಅರಿವು ಮೂಡಲಾರಂಭಿಸಿತು. ಸ್ವಾಯತ್ತ ಮಂಡಳಿಯ ಚೌಕಟ್ಟಿನೊಳಗೆ ಇತ್ಯರ್ಥಕ್ಕಾಗಿ ಜ್ಯೋತಿಬಸುರವರ ಪ್ರಯತ್ನಗಳಿಗೆ ಬೂಟಾಸಿಂಗ್ ಬೆಂಬಲ ನೀಡಲಾರಂಭಿಸಿದರು. ಇದರ ಪರಿಣಾಮವಾಗಿಯೇ ಘೀಸಿಂಗ್‌ರವರು ಆಂದೋಲನವನ್ನು ವಾಪಾಸು ಪಡೆಯುವ ನಿರ್ಧಾರ ಮಾಡಿದರು. ಇದಕ್ಕೆ ಪ್ರತಿಯಾಗಿ ಎಡರಂಗ ಸರ್ಕಾರ ಬಂಧಿತ ಜಿ.ಎನ್.ಎಲ್.ಎಫ್. ಕಾರ್ಯಕರ್ತರ ಬಿಡುಗಡೆ ಮತ್ತು ಮಿಸಲು ಪಡೆಗಳ ವಾಪಸಾತಿ ಕುರಿತ ಒಪ್ಪಂದವನ್ನು ಜಾರಿ ಮಾಡಲಾಯಿತು.

''ಪೀಪಲ್ಸ್ ಡೆಮಾಕ್ರಸಿ'' ಪತ್ರಿಕೆಯ ಜುಲೈ 17ರ ಸಂಪಾದಕೀಯದಲ್ಲಿ ಹೇಳಿರುವಂತೆ ಈ ಸಹಕಾರ ಮುಂದುವರೆದು, ಪರಸ್ಪರ ತಿಳುವಳಿಕೆ ಇನ್ನೂ ಬಲಗೊಂಡು ಡಾರ್ಜಿಲಿಂಗ್ ಗುಡ್ಡಗಾಡುಗಳಲ್ಲಿ ಮತ್ತೆ ಶಾಂತಿ ನೆಲೆಸುತ್ತದೆ. ಇದರಿಂದ ಸಾಧ್ಯವಾಗುವ ಮುನ್ನಡೆ ಹಾಗೂ ಐಕ್ಯತೆ ಕಳೆದ ಎರಡು ವರ್ಷಗಳ ಭಯಾನಕ ಅನುಭವಗಳನ್ನು ನೆನಪಿನಿಂದ ಅಳಿಸಿ ಹಾಕುತ್ತದೆ ಎಂದು ದೇಶದ ಜನತೆ ಹಾರೈಸುತ್ತದೆ. ಈ ಹಾರೈಕೆ ಈಡೇರಿದರೆ ಅದು ಭಾರತದ ಪ್ರಜಾಪ್ರಭುತ್ವವಾದಿ ಮತ್ತು ಐಕ್ಯತೆಯ ಶಕ್ತಿಗಳಿಗೊಂದು ಮಹತ್ವದ ವಿಜಯವಾಗುತ್ತದೆ ಹಾಗೂ ವಿಚ್ಛಿದ್ರಕಾರಿ ಶಕ್ತಿಗಳಿಗೊಂದು ದೊಡ್ಡ ಸೋಲಾಗುತ್ತದೆ.

"ಪೀಪಲ್ಸ್ ಡೆಮಾಕ್ರಸಿ" ಪತ್ರಿಕೆಯ ಜುಲೈ 17ರ ಸಂಪಾದಕೀಯದಲ್ಲಿ ಹೇಳಿರುವಂತೆ, ಈ ಸಹಕಾರ ಮುಂದುವರೆದು, ಪರಸ್ಪರ ತಿಳುವಳಿಕೆ ಇನ್ನೂ ಬಲಗೊಂಡು ಡಾರ್ಜಿಲಿಂಗ್ ಗುಡ್ಡಗಾಡುಗಳಲ್ಲಿ ಮತ್ತೆ ಶಾಂತಿ ನೆಲೆಸುತ್ತದೆ. ಇದರಿಂದ ಸಾಧ್ಯವಾಗುವ ಮುನ್ನಡೆ ಹಾಗೂ ಐಕ್ಯತೆ ಕಳೆದ ಎರಡು ವರ್ಷಗಳ ಭಯಾನಕ ಅನುಭವಗಳನ್ನು ನೆನಪಿನಿಂದ ಅಳಿಸಿ ಹಾಕುತ್ತದೆ ಎಂದು ದೇಶದ ಜನತೆ ಹಾರೈಸುತ್ತದೆ. ಈ ಹಾರೈಕೆ ಈಡೇರಿದರೆ ಅದು ಭಾರತದ ಪ್ರಜಾಪ್ರಭುತ್ವವಾದಿ ಮತ್ತು ಐಕ್ಯತೆಯ ಶಕ್ತಿಗಳಿಗೊಂದು ಮಹತ್ವದ ವಿಜಯವಾಗುತ್ತದೆ ಹಾಗೂ ವಿಚ್ಛಿದ್ರಕಾರಿ ಶಕ್ತಿಗಳಿಗೊಂದು ದೊಡ್ಡ ಸೋಲಾಗುತ್ತದೆ.



Printed & Published by P. Ramachandra Rao on be half of the Communist Party of India (Marxist) Karnataka State Committee, K. V. Temple Street, Sulthanpet, Bangalore-560053. Editorial and Managerial Office : L-56, K. V. Temple Street, Sulthanpet, B-53, Phone : 75331. Editor ; P. Ramachadra Rao, Managing Editor ; N. K. Upadhayaya. Janagere Mudrana, Bangalore-21.